ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ

### ಎಂ.ಎ. (ಪ್ರಥಮ)

# ಉತ್ತರ ಭಾರತದ ಇತಿಹಾಸ ಕಾನಿಷ್ಕ, ಸಮುದ್ರಗುಪ್ತ, ಅಶೋಕ, ಹರ್ಷವರ್ಧನ, ಕಾಳಿದಾಸ, ಆರ್ಯಭಟ, ವರಾಹ ಮೀಹಿರ

ಕೋರ್ಸ್ – 2 ಬ್ಲಾಕ್ – 1

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 2

# ಬ್ಲಾಕ್ 1


ಘಟಕ - 31
ಉತ್ತರ ಭಾರತದ ಇತಿಹಾಸ ಮತ್ತು ಭೌಗೋಳಿಕ ಅಂಶಗಳು 1-10

ಘಟಕ - 32
ಉತ್ತರ ಭಾರತದ ಸಂಸ್ಕೃತಿಯ ಲಕ್ಷಣಗಳು 11-22

ಘಟಕ - 33
ಆಕರಗಳು - ಪುರಾತತ್ವ 23-32

ಘಟಕ - 34
ಸಾಹಿತ್ಯಿಕ ಆಕರಗಳು 33-44

ಘಟಕ - 35
ಪ್ರಾಗೈತಿಹಾಸಿಕ ಸಂಸ್ಕೃತಿ 45-58

ಘಟಕ - 36
ಹರಪ್ಪ ಸಂಸ್ಕೃತಿ : ಉಗಮ ಮತ್ತು ಬೆಳವಣಿಗೆ - ಸಮಾಜ ಮತ್ತು ಧರ್ಮ 59-70

ಘಟಕ - 37
ಹರಪ್ಪ ಸಂಸ್ಕೃತಿ : ಆರ್ಥಿಕತೆ, ನಗರ ಯೋಜನೆ - ಅವನತಿ 71-79

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ


**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

***ವಿಷಯ ಸಂಯೋಜಕರು***

**ಡಾ. ಶಿವಣ್ಣ**
ಇತಿಹಾಸ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

***ಸಂಪಾದಕರು***


## ಪಠ್ಯಕ್ರಮ ನಿರೂಪಕರು


ಡಾ. ಬಿ.ಸಿ. ಮಹಬಲೇಶ್ವರಪ್ಪ
ಇತಿಹಾಸ ಪ್ರಾಧ್ಯಾಪಕರು,
ಗುಲ್ಬರ್ಗಾ ವಿಶ್ವವಿದ್ಯಾನಿಲಯ
ಗುಲ್ಬರ್ಗಾ.


ಘಟಕಗಳು **31** ರಿಂದ **37**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. ೨೦೧೩

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಎಂ. ಎಂ. ಪ್ರಥಮ

# ಇತಿಹಾಸ

## ಬ್ಲಾಕ್ -1

### ಪೀಠಿಕೆ

ಬ್ಲಾಕ್ - 1ರಲ್ಲಿ ಘಟಕ ಸಂಖ್ಯೆ 31 ರಿಂದ 37 ರವರೆಗೆ ಒಟ್ಟು ಏಳು ಘಟಕಗಳಿವೆ. ಘಟಕ 31 ಉತ್ತರ ಭಾರತದ ಇತಿಹಾಸದ ಮೇಲೆ ಭೌಗೋಳಿಕ ಅಂಶಗಳಾದ ಪರ್ವತ ಶ್ರೇಣಿಗಳು, ಬಯಲು ಪ್ರದೇಶ, ನದಿಗಳು, ಹವಾಮಾನ ಇತ್ಯಾದಿಗಳು ಬೀರಿರುವ ಪ್ರಭಾವವನ್ನು ಕುರಿತಂತೆ ವಿಷಯಗಳನ್ನೊಳಗೊಂಡಿದೆ. ಘಟಕ 32 ಉತ್ತರ ಭಾರತದ ಪ್ರಾಚೀನ ಸಂಸ್ಕೃತಿಯ ಪ್ರಮುಖ ಲಕ್ಷಣಗಳನ್ನು ಕುರಿತಂತೆ ವಿವರಗಳನ್ನು ನಿಮಗೆ ನೀಡುತ್ತದೆ. ಘಟಕ 33 ಉತ್ತರ ಭಾರತದ ಪ್ರಾಚೀನ ಕಾಲದ ಇತಿಹಾಸವನ್ನು ರಚಿಸಲು ಸಹಾಯಕವಾಗುವ ಪುರಾತತ್ವ ಆಧಾರಗಳನ್ನು ಕುರಿತು ಚರ್ಚಿಸುತ್ತದೆ. ಭೂಅಗೆತ, ನಾಣ್ಯಗಳು, ಶಿಲಾಶಾಸನಗಳು ಮತ್ತು ಸ್ಮಾರಕಗಳ ಅಧ್ಯಯನದ ಮೂಲಕ ಇತಿಹಾಸವನ್ನು ರಚಿಸುವ ಬಗೆಗೆ ಈ ಘಟಕವು ನಿಮಗೆ ತಿಳಿಸಿಕೊಡುತ್ತದೆ. ಅದೇ ರೀತಿಯಲ್ಲಿ ಘಟಕ 34 ಪ್ರಾಚೀನ ಕಾಲದ ಧಾರ್ಮಿಕ ಕೃತಿಗಳಾದ ವೇದಗಳು, ಉಪನಿಷತ್ತುಗಳು, ಪುರಾಣಗಳು, ಹಾಗೂ ಮಹಾಕಾವ್ಯಗಳು, ವಿದೇಶಿಯ ಬರವಣಿಗೆಗಳು ಪ್ರಾಚೀನ ಉತ್ತರ ಭಾರತದ ಇತಿಹಾಸ ರಚನೆಗೆ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ವಿವರಿಸುತ್ತದೆ. ಇವುಗಳೆಲ್ಲವನ್ನು ಸಾಹಿತ್ಯಿಕ ಆಧಾರಗಳೆನ್ನುತ್ತೇವೆ. ಘಟಕ 35 ಉತ್ತರ ಭಾರತದಲ್ಲಿ ಪ್ರಚಲಿತವಾಗಿದ್ದ ಇತಿಹಾಸಪೂರ್ವದ ಸಂಸ್ಕೃತಿಯ ಬಗೆಗಿನ ವಿವರಗಳನ್ನು ನೀಡುತ್ತದೆ. ಘಟಕ 36 ಹಾಗೂ 37 ಹರಪ್ಪ ಸಂಸ್ಕೃತಿಯ ವಿವಿಧ ಆಯಾಮಗಳ ಬಗೆ ಹಾಗೂ ಸಂಸ್ಕೃತಿಗೆ ಸಂಬಂಧಪಟ್ಟ ಇತರ ಅಂಶಗಳ ಬಗೆ ನಿಮಗೆ ಅನೇಕ ವಿಚಾರಗಳನ್ನು ತಿಳಿಸಿಕೊಡುತ್ತದೆ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 31

## ಉತ್ತರ ಭಾರತ ಇತಿಹಾಸ ಮತ್ತು ಭೌಗೋಳಿಕ ಅಂಶಗಳು

*ರಚನೆ*


**31.0** ಉದ್ದೇಶಗಳು

**31.1** ಪೀಠಿಕೆ

**31.2** ಭಾರತ ಮತ್ತು ಇದರ ವಿಸ್ತೀರ್ಣ

**31.3** ಧರ್ಮ-ಜನಾಂಗ-ಭಾಷೆಗಳು

**31.4** ಭೌಗೋಳಿಕ ಲಕ್ಷಣಗಳು

**31.5** ಹಿಮಾಲಯ ಪರ್ವತ ಶ್ರೇಣಿ

**31.6** ದಕ್ಷಿಣ ಪ್ರಸ್ಥ ಭೂಮಿ

**31.7** ಕರಾವಳಿ ಪ್ರದೇಶ

**31.8** ಭೌಗೋಳಿಕ ಸನ್ನಿವೇಶದ ಪರಿಣಾಮಗಳು

**31.9** ಉಪಸಂಹಾರ

**31.10** ಮಾದರಿ ಪ್ರಶ್ನೆಗಳು

**31.11** ಅಧ್ಯಯನಕ್ಕೆ ಗ್ರಂಥಗಳು

## 31.0 ಉದ್ದೇಶಗಳು

1. ಭಾರತೀಯ ಇತಿಹಾಸದ ಘಟನೆಗಳ ಬೆಳವಣಿಗೆಯಲ್ಲಿ ಭೌಗೋಳಿಕ ಅಂಶಗಳ ಪಾತ್ರವನ್ನು ತಿಳಿಯುವುದು.

2. ಪರ್ವತ ಶ್ರೇಣಿಗಳು, ನದಿಗಳು, ಸರೋವರಗಳು, ಘಟ್ಟಗಳು, ಕಲ್ಲು ಬಂಡೆಗಳು, ಕರಾವಳಿ ಪ್ರದೇಶಗಳು, ಫಲವತ್ತಾದ ಮಣ್ಣು, ಮರುಭೂಮಿ, ಅರಣ್ಯಗಳು ಮತ್ತು ಪ್ರದೇಶದ ಉಷ್ಣಾಂಶಗಳು ಉತ್ತರ ಭಾರತದ ನಾಗರೀಕತೆ ಮತ್ತು ಸಂಸ್ಕೃತಿಯ ವಿಕಾಸ ಮತ್ತು ಬೆಳವಣಿಗೆಯಲ್ಲಿ ವಹಿಸಿದ ಪ್ರಮುಖ ಪಾತ್ರವನ್ನು ಪರಿಚಯ ಮಾಡಿಕೊಳ್ಳುವುದು.

3. ಅಲ್ಲದೇ ಒಂದು ಪ್ರದೇಶದ ಸಂಪನ್ಮೂಲಗಳು ರಾಜನೀತಿ, ಧರ್ಮ ಮತ್ತು ಅರ್ಥವ್ಯವಸ್ಥೆಯ ಬೆಳವಣಿಗೆಯ ಸ್ವರೂಪವನ್ನು ನಿರ್ಧರಿಸುವಲ್ಲಿ ಹೇಗೆ ಕಾರಣವಾಗಿದೆ ಎನ್ನುವುದನ್ನು ತಿಳಿದುಕೊಳ್ಳುವುದು.

## 31.1 ಪೀಠಿಕೆ

ಭೂಗೋಳಶಾಸ್ತ್ರವು ಚಾರಿತ್ರಿಕ ಜ್ಞಾನದ ಬುನಾದಿಯೆಂದು ಹೇಳಲಾಗಿದೆ. ಈ ಕಾರಣಕ್ಕಾಗಿ ಭಾರತೀಯ ಚರಿತ್ರೆಯ ಅಧ್ಯಯನವನ್ನು ಪ್ರವೇಶಿಸುವುದಕ್ಕೆ ಮೊದಲು ನಾವು ಭಾರತದ ಭೌಗೋಳಿಕ ಮತ್ತು ಸ್ವಾಭಾವಿಕ ಸನ್ನಿವೇಶದ ವೈಲಕ್ಷಣಗಳನ್ನು ಮತ್ತು ಅವು ಚಾರಿತ್ರಿಕ ಘಟನೆಗಳನ್ನು ಹೇಗೆ ನಿರ್ಧರಿಸಿದವು ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯ. ಪ್ರದೇಶದ ಪರಿಸರ ಮತ್ತು ವ್ಯಕ್ತಿತ್ವ ಇತಿಹಾಸದ ಚಾರಿತ್ರಿಕ ಅಂಶಗಳಾಗಿವೆ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಘಟನೆಗಳಿಗೆ ಚಾರಿತ್ರಿಕ ಸ್ವರೂಪ ಕೊಡುವ ಶಕ್ತಿಗಳೆಂದರೆ ಭೌಗೋಳಿಕ ಅಂಶಗಳು ಪರ್ವತ ಶ್ರೇಣಿಗಳು, ನದಿಗಳು, ಘಟ್ಟಗಳು, ಕರಾವಳಿ ಪ್ರದೇಶಗಳು, ಫಲವತ್ತಾದ ಮಣ್ಣು ಮತ್ತು ಆಯಾ ಪ್ರದೇಶದ ಉಷ್ಣಾಂಶ ಇತಿಹಾಸದ ಘಟನೆಗಳನ್ನು ನಿರ್ಮಿಸುವಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತವೆ. ಜನರ ಜೀವನ ಮತ್ತು ಅವರ ಗುಣ-ಧರ್ಮಗಳನ್ನು ನಿರ್ಧರಿಸುವಲ್ಲಿಯೂ ಭೌಗೋಳಿಕ ಅಂಶಗಳು ಪಾತ್ರ ಹಿರಿದಾಗಿದೆ. ಈ ಹಿನ್ನೆಲೆಯಲ್ಲಿ ರಿಚರ್ಡ್ ಹ್ಯಾಕ್ಲುಟ್‌ರು ಭುಗೋಳ ಮತ್ತು ಕಾಲಗಣನೆ ಶಾಸ್ತ್ರ ಸೂರ್ಯ-ಚಂದ್ರರಿದ್ದ ಹಾಗೆ ಮತ್ತು ಅವುಗಳು ಇತಿಹಾಸದ ಕಣ್ಣುಗಳಾಗಿವೆ ಎಂದು ಹೇಳಿರುವುದು ಸಮಂಜಸವೆನಿಸುತ್ತದೆ.

## 31.2 ಭಾರತ ಮತ್ತು ಇದರ ವಿಸ್ತೀರ್ಣ

ಭಾರತ ಎಂಬ ನುಡಿಯು ಗ್ರೀಕ್ ಭಾಷೆಯಿಂದ ಬಂದಿದೆ. ಈ ದೇಶಕ್ಕೆ ಮೊದಲು ಆಗಮಿಸಿದ ಆರ್ಯರು ನೆಲಸಿದ ಸಿಂಧು ಭೂಪ್ರದೇಶಕ್ಕೆ ಭಾರತವೆಂಬ ಹೆಸರು ಬಂತು. ನಾವು ಮುಂದೆ ತಿಳಿದುಕೊಳ್ಳುವಂತೆ ಭಾರತದ ಬಗ್ಗೆ ಪರಿಚಯ ಗ್ರೀಕರಿಗೆ ಪರ್ಷಿಯನ್ನರಿಂದ ಬಂತು. ಪರ್ಷಿಯನ್ನರು ಒಂದು ಕಾಲಕ್ಕೆ ಪಂಜಾಬನ್ನು ಆಳಿದವರಾಗಿದ್ದರು. ತಮಗೆ ಬಹುವಾಗಿ ಪರಿಚಿತವಾದ ಪ್ರದೇಶದ ಹೆಸರನ್ನು ಪಾಶ್ಚಿಮಾತ್ಯರು ಇಡೀ ದೇಶಕ್ಕೆ ಅನ್ವಯ ಮಾಡಿದರು. ಈ ಭೂಪ್ರದೇಶದಲ್ಲಿ ವಾಸಿಸುವ ಜನರನ್ನು ಹಿಂದುಗಳೆಂದು, ಇಂಡಿಯನ್ನರೆಂದು ಕರೆದರು. ಆದರೆ ಈ ಪದ ಸಂಸ್ಕೃತದಲ್ಲಿ ದೊರೆಯುವುದಿಲ್ಲ. ಇದಕ್ಕೆ ಸನಿಹವಾದ ಸಂಸ್ಕೃತದ ನುಡಿಯೆಂದರೆ ಭರತವರ್ಷ. ಪೌರಾಣಿಕ ಚಕ್ರವರ್ತಿ ಭರತನ ನಾಡು ಇದರ ಅರ್ಥ. ಅವನು ಇಡೀ ಉತ್ತರ ಭಾರತವನ್ನು ಆಳಿದ್ದನೆಂಬ ನಂಬಿಕೆಯಿದೆ.

*ಭಾರತದ ವಿಸ್ತೀರ್ಣ*

ಅನೇಕ ರಾಜಸಂತತಿಯವರು ಭಾರತದ ವಿಶಾಲ ಪ್ರದೇಶವನ್ನು ತಮ್ಮ ಏಕಾಧಿಪತ್ಯಕ್ಕೆ ಅಳವಡಿಸಿಕೊಂಡರೂ ಸಹ, ಅದು ಒಂದು ಭೂಖಂಡವೇ ವಿನಾ ಕೇವಲ ದೇಶವಲ್ಲ. ಅದು ಅನೇಕ ಜನಾಂಗಗಳ ದೇಶ. ಅದು ಬಹುಭಾಷೆಗಳ ಮತ್ತು ಬಹುಧರ್ಮಗಳ ದೇಶ. ಅದರ ಉದ್ದ ಮತ್ತು ಅಗಲಗಳ ಅಳತೆ ಸರಿಸುಮಾರು ಉತ್ತರ ದಕ್ಷಿಣವಾಗಿ ಮತ್ತು ಪೂರ್ವ-ಪಶ್ಚಿಮವಾಗಿ 2000 ಮೈಲಿಗಳು. ಅದರ ಕ್ಷೇತ್ರಫಲ 1.75 ದಶಲಕ್ಷ ಚದರ ಮೈಲಿಗಳು. ರಷ್ಯವನ್ನು ಬಿಟ್ಟು ಯುರೋಪ್ ಎಷ್ಟು ದೊಡ್ಡದೋ ಭಾರತವು ಅದಕ್ಕೆ ಸಮವಾಗಿದೆ. ಅದರ ಭೂಪ್ರದೇಶದ ಬ್ರಿಟಿಷ್ ದ್ವೀಪಗಳು ಇಪ್ಪತ್ತು ಪಟ್ಟು ದೊಡ್ಡದಿದೆ. ಇದು ಇಂಗ್ಲೆಂಡಿನ ಹತ್ತು ಪಟ್ಟಾಗುತ್ತದೆ. ವಿಶ್ವದ ಜನಸಂಖ್ಯೆಯ 1/8 ರಷ್ಟು ಜನ ಭಾರತದಲ್ಲಿದ್ದಾರೆ. ವಿವಿಧ ಜನಾಂಗ, ಭಾಷೆ ಮತ್ತು ಧರ್ಮಗಳಿಂದ ಕೂಡಿದ ಭಾರತದ ವಿಸ್ತೀರ್ಣ 3276141 ಚದರ ಮೀಟರ್ ಆಗಿದೆ. ಉತ್ತರ - ದಕ್ಷಿಣ ಉದ್ದಳತೆ 3116 ಕಿ.ಮೀ. ಮತ್ತು ಪೂರ್ವ-ಪಶ್ಚಿಮವಾಗಿ 2929 ಕಿ.ಮೀ. ಅಗಲದಿಂದ ಕೂಡಿದೆ. ಇತ್ತೀಚಿನ ಅಂಕಿ-ಸಂಖ್ಯೆಗಳು ಭಾರತದ ಜನಸಂಖ್ಯೆ 101 ಕೋಟಿ ಮೀರಿದೆ ಎನ್ನುವುದನ್ನು ತೋರಿಸುತ್ತದೆ. ಚೀನಾ ದೇಶದ ನಂತರ, ಜನಸಂಖ್ಯೆಯಲ್ಲಿ ವಿಶ್ವದ ಎರಡನೇ ಬೃಹತ್ ರಾಷ್ಟ್ರವೆಂದರೆ ಭಾರತ.

## 31.3 ಧರ್ಮ, ಜನಾಂಗ ಮತ್ತು ಭಾಷೆಗಳು

ಯುರೋಪಿಯನ್ನರು ಮತ್ತು ಪಾರ್ಸಿಗಳನ್ನು ಪ್ರತ್ಯೇಕವಾಗಿಟ್ಟರೆ, ಭಾರತೀಯರನ್ನು ಹಿಂದೂಗಳು ಮತ್ತು ಮಹಮದೀಯರೆಂದು ಎರಡು ಗುಂಪುಗಳನ್ನಾಗಿ ವರ್ಗೀಕರಿಸಬಹುದು. ಮಹಮದೀಯರಿಗಿಂತ ಹಿಂದೂಗಳು ಅಧಿಕ ಸಂಖ್ಯೆಯಲ್ಲಿದ್ದಾರೆ. ಪ್ರತಿ ಮೂವರು ಭಾರತೀಯರಲ್ಲಿ ಇಬ್ಬರು ಹಿಂದೂಗಳಾಗಿದ್ದಾರೆ. ಆದರೆ ಇದರಿಂದ ಅವರಿಬ್ಬರ ಸಾಪೇಕ್ಷ ಮಹತ್ವವನ್ನು ಗ್ರಹಿಸಿಕೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ ಭಾರತವನ್ನಾಳಿದ ಅನೇಕ ಪ್ರಸಿದ್ಧ ಚಕ್ರವರ್ತಿಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಮೊಗಲ್ ಚಕ್ರವರ್ತಿಗಳಿದ್ದಾರೆ. ಅವರುಗಳು ಅನೇಕ ಭವ್ಯ ಸ್ಮಾರಕಗಳನ್ನು ದೇಶದ ತುಂಬಾ ಬಿಟ್ಟು ಹೋಗಿದ್ದಾರೆ. ಅನೇಕ ಹಿಂದುಗಳು ಮುಸ್ಲಿಮರಾಗಿ ಮತಾಂತರ ಹೊಂದಿದ್ದಾರೆ. ಪ್ರಾರಂಭದಲ್ಲಿ ಆಗಮಿಸಿದ ಮಹಮದೀಯರು ಮೂಲತಃ ಮಧ್ಯ ಪ್ರಾಚ್ಯದಿಂದ ಬಂದವರು. ಅವರ ಅಧಿಕೃತ ಭಾಷೆ ಪರ್ಷಿಯನ್. ಮುಂದೆ ಪರ್ಷಿಯನ್ ಮತ್ತು ಹಿಂದಿ ಭಾಷೆಗಳು ಪರಸ್ಪರ ಮಿಶ್ರಣಹೊಂದಿ ಉರ್ದು ಭಾಷೆ ರೂಪುಗೊಂಡಿತು. ಸೈನಿಕ ಶಿಬಿರದ ಭಾಷೆಯೆಂದು ಇದನ್ನು ಕರೆಯಲಾಗಿದೆ. ಹಿಂದೂಗಳಲ್ಲಿ ಅನೇಕ ಜನಾಂಗಗಳು ಮತ್ತು ಮತಗಳು ಇವೆ. ಆದರೆ ಅವರೆಲ್ಲ ಕೆಲವು ಸಾಮಾನ್ಯ ನಂಬಿಕೆ ಮತ್ತು ಆಚರಣೆಗಳನ್ನು ಅನುಸರಿಸುತ್ತಾರೆ. ಎರಡು ಮುಖ್ಯ ಧಾರೆಗಳಿಗೆ ಅವರು ಸೇರಿದ್ದಾರೆ. ಮೊದಲನೆಯದು ಆರ್ಯನ್‌ಧಾರೆ, ಎರಡನೆಯದು ದ್ರಾವಿಡ ಧಾರೆ, ಆರ್ಯನ್ ಭಾಷೆಗಳೆಲ್ಲವೂ ಮೂಲ ಮಾತೃ ಭಾಷೆಯಾದ ಸಂಸ್ಕೃತದಿಂದ ಬೆಳೆದು ಬಂದಿದೆ. ಯಾರಿಗೆ ಸಂಸ್ಕೃತ ಭಾಷೆ ಬರುತ್ತದೋ ಅವರಿಗೆ ಇತರೆ ಭಾರತೀಯ ಭಾಷೆಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುವುದಿಲ್ಲ. ದ್ರಾವಿಡ ಭಾಷೆಗಳು ಪ್ರತ್ಯೇಕ ಧಾರೆಗೆ ಸೇರಿದ ಭಾಷೆಗಳಾಗಿವೆ. ಪ್ರಾಚೀನ ಕಾಲದಲ್ಲಿ ಭೌಗೋಳಿಕ ಅಂತರದಿಂದಾಗಿ ಮತ್ತು ಸರಿಯಾದ ಸಾರಿಗೆ ಸೌಲಭ್ಯಗಳಿಲ್ಲದ್ದರಿಂದ ರಾಷ್ಟ್ರೀಯತೆಯ ಭಾವನೆ ಸಾಧ್ಯವಿರಲಿಲ್ಲ. ಆದರೆ ಇಂದು ಹೆಚ್ಚು ಹೆಚ್ಚು ಜನರು ಇಂಗ್ಲಿಷ್ ಭಾಷೆಯನ್ನು ಕಲಿಯುತ್ತಿದ್ದಾರೆ. ರೈಲು, ರಸ್ತೆ, ಮೋಟಾರು ವಾಹನ, ವಿಮಾನ ಸಾರಿಗೆ, ಮಾಹಿತಿ ಮಾಧ್ಯಮಗಳು ಮುಂತಾದ ಸಂವಹನ ಮತ್ತು ಸಂಪರ್ಕ ಸಾಧನಗಳ ಬೆಳವಣಿಗೆಯಿಂದಾಗಿ ವಿವಿಧ ಪ್ರದೇಶಗಳ ಜನರು ಒಂದಾಗುತ್ತಿದ್ದಾರೆ. ಹೀಗೆ ಒಂದಾಗುವಿಕೆಯಿಂದಾಗಿ ಏಕತೆಯ ಭಾವನೆಯು ಭಾರತದಲ್ಲಿ ಬೆಳೆಯುತ್ತಿದೆ.

## 31.4 ಭೌಗೋಳಿಕ ಸನ್ನಿವೇಶ

ಭಾರತದ ಭೂಪಟವನ್ನು ಒಮ್ಮೆ ನೋಡಿದರೆ ಅದೊಂದು ಬೃಹತ್ ತ್ರಿಕೋನದ ರೂಪದಲ್ಲಿರುವುದು ತಿಳಿಯುತ್ತದೆ.

ಭೌಗೋಳಿಕ ಸನ್ನಿವೇಶವು ಚರಿತ್ರೆಯ ಮೇಲೆ ಪ್ರಭಾವ ಬೀರುತ್ತದೆ. ಭಾರತವು ಒಂದು ಭೂಖಂಡ. ಈಗಿರುವ ಪ್ರದೇಶಗಳ ಜೊತೆಗೆ ಒಂದು ಕಾಲಕ್ಕೆ ಭಾರತವು ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ ಮತ್ತು ಭೂತಾನಗಳನ್ನು ಒಳಗೊಂಡಿತ್ತು. ಏಷ್ಯಾದ ದಕ್ಷಿಣಭಾಗದಲ್ಲಿ ನೆಲೆಗೊಂಡಿರುವ ಭಾರತದ ಭೌಗೋಳಿಕ ನೆಲೆಯು ತುಂಬಾ ಆಯಕಟ್ಟಿನದ್ದಾಗಿದೆ. ಭಾರತದ ದಕ್ಷಿಣಕ್ಕೆ ಹಿಂದು ಮಹಾಸಾಗರವಿದ್ದರೆ, ಪೂರ್ವಕ್ಕೆ ಬಂಗಾಳಕೊಲ್ಲಿ ಮತ್ತು ಪಶ್ಚಿಮಕ್ಕೆ ಅರೇಬಿಯನ್ ಸಮುದ್ರವಿದೆ. ಬಂಗಾಳಕೊಲ್ಲಿ ಮತ್ತು ಅರೇಬಿಯನ್ ಸಮುದ್ರಗಳು ಹಿಂದೂ ಮಹಾಸಾಗರದ ಭಾಗಗಳಾಗಿವೆ. ಉತ್ತರದಲ್ಲಿ ಹಿಮಾಲಯ ಪರ್ವತ ಶ್ರೇಣಿಗಳಿವೆ. ವಿಂಧ್ಯಾ ಪರ್ವತ ಶ್ರೇಣಿಯ ದಕ್ಷಿಣ ಭಾಗದಲ್ಲಿ ಬೃಹತ್ ಪ್ರಸ್ಥ ಭೂಮಿಯಿದೆ. ದಕ್ಷಿಣ ಪ್ರಸ್ಥ ಭೂಮಿಯು ತ್ರಿಕೋನಾಕಾರದಲ್ಲಿದೆ. ಭಾರತದ ಒಟ್ಟು ಭೂಪ್ರದೇಶದ ವಿಸ್ತೀರ್ಣ ೩೨,೮೭,೨೬೩ ಚದರ ಕಿ.ಮೀ. ಪೂರ್ವ ಭಾಗದಲ್ಲಿರುವ ಅಂಡಮಾನ್-ನಿಕೋಬಾರ್ ದ್ವೀಪಗಳು ಮತ್ತು ಪಶ್ಚಿಮ ಭಾಗದಲ್ಲಿರುವ ಲಕ್ಷ ದ್ವೀಪಗಳು ಭಾರತದ ಭೌಗೋಳಿಕ ಪ್ರದೇಶದ ಭಾಗಗಳಾಗಿವೆ. ಇವುಗಳು ಕೇಂದ್ರಾಡಳಿತಕ್ಕೆ ಒಳಪಟ್ಟಿವೆ. ಭಾರತದ ಕರಾವಳಿ ಪ್ರದೇಶದ ಉದ್ದ ೭೫೧೬.೬ ಕಿ.ಮೀ. ನೆರೆಯ ದೇಶಗಳ ಗಡಿಗೆ ಹೊಂದಿಕೊಂಡಂತಿರುವ ಭೂಗಡಿ ಉದ್ದ ೧೫೨೦೦ ಕಿ.ಮೀ. ಭೌಗೋಳಿಕವಾಗಿ ಭಾರತವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು. ೧. ಉತ್ತರ ಹಿಮಾಲಯ ಪರ್ವತ ಶ್ರೇಣಿ. ೨. ಉತ್ತರದ ವಿಶಾಲ ನದಿ ಕಣಿವೆ ಪ್ರದೇಶ ೩. ದಕ್ಷಿಣ ಪ್ರಸ್ಥ ಭೂಮಿ ೪. ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶ.

## 31.5 ಹಿಮಾಲಯ ಪರ್ವತ ಶ್ರೇಣಿ

ಹಿಮದಿಂದ ಆವೃತವಾಗಿರುವ ಹಿಮಾಲಯ, ಪರ್ವತಶ್ರೇಣಿಯು ೨೫೦೦ ಕಿ.ಮೀ. ಉದ್ದವಿದೆ. ಇದು ಬೃಹತ್ ಗಾತ್ರದ ಮತ್ತು ಉದ್ದವಾದ ಸ್ವಾಭಾವಿಕ ಗೋಡೆಯಂತೆ ಭಾರತಕ್ಕೆ ರಕ್ಷಣೆ ಒದಗಿಸುತ್ತದೆ. ಈ ಪರ್ವತ ಶ್ರೇಣಿಯು ಸುಮಾರು ೫ ಲಕ್ಷ ಚದರ ಕಿ.ಮೀ. ಪ್ರದೇಶದಲ್ಲಿ ಹರಡಿಕೊಂಡಿದೆ. ಕಾಶ್ಮೀರ, ಕುಲು, ಕಾಂಗಾ ಮುಂತಾದ ಸುಂದರ ಕಣಿವೆ ಪ್ರದೇಶಗಳು ಇಲ್ಲಿವೆ. ಈ ಕಣಿವೆಗಳಿಗೆ ಹೊಂದಿಕೊಂಡಿರುವ ವಾಯುವ್ಯ ಪ್ರದೇಶದಲ್ಲಿ ಖೈಬರ್ ಮತ್ತು ಬೋಲಾನ್ ಕಣಿವೆಗಳು ಪಶ್ಚಿಮ ಏಷ್ಯಾದೊಂದಿಗೆ ಭೂಸಾರಿಗೆ ಸಂಪರ್ಕ ಒದಗಿಸಿಕೊಟ್ಟಿದೆ.

ಮಧ್ಯ ಏಷ್ಯಾ ಮತ್ತು ಸೈಬೀರಿಯನ್ ಪ್ರದೇಶದಿಂದ ಬೀಸುವ ಶೀತ ಗಾಳಿಯನ್ನು ಹಿಮಾಲಯ ಪರ್ವತ ಶ್ರೇಣಿಯು ತಡೆಯುತ್ತಿದೆ. ಉತ್ತರ ಬಯಲು ಸೀಮೆಯಲ್ಲಿ ಉಷ್ಣ ಹವಾಮಾನವಿದೆ. ಹಿಮಾಲಯ ಪರ್ವತ ಶ್ರೇಣಿಯು ನೈರುತ್ಯ ಮಳೆಮಾರುತಗಳನ್ನು ತಡೆದು ಉತ್ತರ ಭಾರತದಲ್ಲಿ ಮಳೆಯನ್ನು ಅದು ತರುತ್ತದೆ. ಅದು ಉತ್ತರ ಬಯಲು ಸೀಮೆಯನ್ನು ಫಲವತ್ತನ್ನಾಗಿ ಮಾಡಿದೆ.

ಹಿಮಾಲಯ ಪರ್ವತಶ್ರೇಣಿಯ ಈಶಾನ್ಯ ಭಾಗದಲ್ಲಿ ನಾಗ ಮತ್ತು ಗಾರೋ ಗುಡ್ಡಗಾಡುಗಳಿವೆ. ಈ ಗುಡ್ಡಗಾಡು ಪ್ರದೇಶದಲ್ಲಿನ ಚಿರಾಪುಂಜಿ ಮತ್ತು ಮೌಸಿನ್‌ರಾಮ್ ಸ್ಥಳಗಳಲ್ಲಿ ದಾಖಲೆಯ ಮಳೆ ಬೀಳುತ್ತಿದೆ. ಹಿಮಾಲಯ ಪರ್ವತಶ್ರೇಣಿಯಲ್ಲಿ ಮೂರು ಮುಖ್ಯ ನದಿಗಳಾದ ಸಿಂಧೂ, ಗಂಗಾ ಮತ್ತು ಬ್ರಹ್ಮಪುತ್ರ ಜನ್ಮ ತಳೆಯುತ್ತವೆ. ಮಳೆಗಾಲದಲ್ಲಿ ಸುರಿಯುವ ಅಪಾರ ಮಳೆಯಿಂದ ಮತ್ತು ಬೇಸಿಗೆಯಲ್ಲಿ ಹಿಮವು ಕರಗುವುದರಿಂದ ಅವು ವರ್ಷಪೂರ್ತಿ ತುಂಬಿ ಹರಿಯುತ್ತವೆ. ಹಿಮಾಲಯ ತಪ್ಪಲು ಅನೇಕ ಬಗೆಯ ಅರಣ್ಯ ಸಂಪನ್ಮೂಲ ಹಾಗೂ ಪ್ರಾಣಿಗಳ

ಗಣಿಯಾಗಿದೆ. ಭಾರತದ ಆಧ್ಯಾತ್ಮಿಕತೆಯ ದೃಷ್ಟಿಯಿಂದ ಹಿಮಾಲಯವು ಮಹತ್ವದ ಸ್ಥಾನ ಪಡೆದಿದೆ. ಸುಂದರ ತಾಣವಾದ ಹಿಮಾಲಯ ಪರ್ವತ ಶ್ರೇಣಿಯಲ್ಲಿ ಅಮರನಾಥ, ಕೇದರನಾಥ, ಬದರೀನಾಥ, ಹರಿದ್ವಾರ, ಋಷಿಕೇಶ ಮುಂತಾದ ಪ್ರಾಚೀನ ಕಾಲದಲ್ಲಿ ಸ್ಥಾಪಿಸಿದ ಮತ್ತು ಇಂದಿಗೂ ಅಪಾರ ಭಕ್ತರನ್ನು, ತೀರ್ಥಯಾತ್ರಿಗಳನ್ನು ಆಕರ್ಷಿಸುತ್ತಿರುವ ಪವಿತ್ರ ಸ್ಥಾನಗಳಾಗಿವೆ. ತಡೆಗೋಡೆಯಂತೆ ಭಾರತಕ್ಕೆ ರಕ್ಷಣೆ ಕೊಡುತ್ತಿರುವ ಹಿಮಾಲಯ ಪರ್ವತಶ್ರೇಣಿಯು ಭಾರತದ ನಾಗರಿಕತೆ ಮತ್ತು ಸಾಮಾಜಿಕ ರಚನೆ ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಅವಿಚ್ಛಿನ್ನವಾಗಿ ಮುಂದುವರಿದುಕೊಂಡು ಬರಲು ಕಾರಣವಾಗಿದೆ. ಏಷ್ಯಾ ಖಂಡದಿಂದ ಭಾರತವನ್ನು ಬೇರ್ಪಡಿಸುವ ಹಿಮಾಲಯವು ಭಾರತವು ವಿಶಿಷ್ಟ ನಾಗರಿಕತೆಯನ್ನು ರೂಪಿಸಿಕೊಳ್ಳಲು ನೆರವಾಗಿದೆ ಮತ್ತು ವಿಶಿಷ್ಟ ರೀತಿಯಲ್ಲಿ ಹಾಗೂ ವಿಶೇಷವಾಗಿ ಭಾರತದ ಚರಿತ್ರೆಯ ಮೇಲೆ ಪ್ರಭಾವ ಬೀರಿದೆ.

*ಉತ್ತರದ ಮಹತ್ವದ ಬಯಲು ಪ್ರದೇಶ*

ಅರೇಬಿಯನ್ ಸಮುದ್ರದಿಂದ ಬಂಗಾಳಕೊಲ್ಲಿಯವರೆಗಿನ ವಕ್ರಾಕಾರದ ೨೦೦೦ ಮೈಲು ಉದ್ದದ ಮತ್ತು ೨೦೦ ಮೈಲು ಅಗಲದ ಬಯಲು ಪ್ರದೇಶವು ತುಂಬಾ ಮಹತ್ವದ ಸ್ಥಾನ ಪಡೆದಿದೆ. ಭಾರತಕ್ಕೆ ಹೆಸರನ್ನು ನೀಡಿದ ಸಿಂದೂ ನದಿಯ ಮುಖಜ ಭೂಮಿಯು ಟಿಬೆಟ್ಟಿನ ಬಯಲು ಪ್ರದೇಶದಿಂದ ಪಶ್ಚಿಮಾಭಿಮುಖವಾಗಿ ಹರಿದು ವಾಯುವ್ಯ ಪ್ರದೇಶದ ಪಂಚನದಿಗಳಾದ ಜೇಲಂ, ಚೀನಾಬ್, ರಾಬಿ, ಬಿಯಾಸೆ ಮತ್ತು ಸಟ್ಲೆಜ್ ನದಿಗಳಿಂದ ಆ ವ್ಯತವಾದ ಪಂಜಾಬ್‌ವರೆಗೂ ಹರಡಿಕೊಂಡಿದೆ. ಪಂಚ ನದಿಗಳಿಂದ ಪಂಜಾಬ್ ತನ್ನ ಹೆಸರನ್ನು ಪಡೆದುಕೊಂಡಿದೆ.

ಸಿಂಧೂ ಬಯಲು ಪ್ರದೇಶವು ವಿದೇಶ ಆಕ್ರಮಣದ ವಿರುದ್ಧ ಬೇಧಿಸಲಾರದ ಕೋಟೆಯಂತೆ ರಕ್ಷಣೆ ಕೊಟ್ಟಿದೆ. ಏಕೆಂದರೆ ಈ ನದಿಗಳು ತುಂಬಿ ಹರಿಯುವಾಗ ಅವುಗಳನ್ನು ದಾಟುವುದು ಸುಲಭದ ಕೆಲಸವಲ್ಲ. ಸಿಂಧೂ ನದಿ ಮತ್ತು ಅದರ ಉಪನದಿಗಳು ಕೃಷಿಯ ಅಭಿವೃದ್ಧಿಗೆ ಅಪಾರ ನೆರವು ನೀಡಿದೆ ಮತ್ತು ಬಯಲು ಪ್ರದೇಶವು ಫಲವತ್ತಾಗಿರುವಂತೆ ಮಾಡಿದೆ.

ಹಿಮಾಲಯದಲ್ಲಿ ಹುಟ್ಟುವ ಗಂಗಾ ನದಿಯು ಗುಡ್ಡಗಾಡುಗಳಲ್ಲಿ ಹರಿದು ಹರಿದ್ವಾರವನ್ನು ತಲುಪಿದ ನಂತರ ಬಯಲು ಪ್ರದೇಶದಲ್ಲಿ ಹರಿಯುತ್ತದೆ. ಇದರ ಪ್ರಮುಖ ಉಪನದಿಯಾದ ಜಮುನಾ ನದಿಯು, ಅದಕ್ಕೆ ಸಮಾನಾಂತರವಾಗಿ ಹರಿದು ಅಲಹಾಬಾದಿನಲ್ಲಿ ಅದು ಗಂಗಾನದಿಯನ್ನು ಕೂಡುತ್ತದೆ. ಬ್ರಹ್ಮಪುತ್ರ ನದಿಯು ಕೈಲಾಸ ಪರ್ವತದಲ್ಲಿ ಹುಟ್ಟುತ್ತದೆ ಮತ್ತು ಪೂರ್ವಾಭಿಮುಖವಾಗಿ ಏಳೂನೂರ ಮೈಲು ಹರಿದು ನಂತರ ದಕ್ಷಿಣಕ್ಕೆ ತಿರುಗಿ ಸರಿಯಾ ಎಂಬ ಸ್ಥಳದಲ್ಲಿ ಭಾರತದ ಬಯಲು ಪ್ರದೇಶವನ್ನು ಸೇರುತ್ತದೆ.

ಆರ್ಯರು ತಮ್ಮ ನಾಗರಿಕತೆಯನ್ನು ಕಟ್ಟಲು ಪಂಜಾಬ್ ಮತ್ತು ಗಂಗಾ ನದಿಗಳು ನೆರವಾಗಿವೆ. ಅಪಾರ ಪ್ರಾಕೃತಿಕ ಸಂಪನ್ಮೂಲದಿಂದ ಕೂಡಿರುವ ನದಿ ಮುಖಜ ಭೂಮಿಯು ಫಲವತ್ತಾಗಿದೆ ಮತ್ತು ಇಲ್ಲಿ ಜನಸಾಂದ್ರತೆ ಅತ್ಯಧಿಕವಾಗಿದೆ. ಮಹತ್ವದ ವ್ಯಾಪಾರದ ಕೇಂದ್ರಗಳಾದ ಕಾಶಿ, ಪ್ರಯಾಗ, ಪಾಟಲಿಪುತ್ರ, ಕನೂಜ್ ಮತ್ತು ನಳಂದ ಪಟ್ಟಣಗಳು ಇಲ್ಲಿನ ಬಯಲು ಪ್ರದೇಶದಲ್ಲಿ ಸ್ಥಾಪಿತಗೊಂಡವು. ಇದೇ ಬಯಲು ಪ್ರದೇಶದಲ್ಲಿ ಧಾರ್ಮಿಕ ಚಳುವಳಿಗಳಾದ ಬೌದ್ಧ ಧರ್ಮ ಮತ್ತು ಜೈನ ಧರ್ಮಗಳು ಹುಟ್ಟಿಕೊಂಡವು. ಐತಿಹಾಸಿಕ ಸಾಮ್ರಾಜ್ಯಗಳಾದ ಮೌರ್ಯ, ಗುಪ್ತ ಮತ್ತು ವರ್ಧನ ಸಾಮ್ರಾಜ್ಯಗಳು ಇದೆ ಬಯಲು ಭೂಮಿಯಲ್ಲಿ ಕಟ್ಟಲ್ಪಟ್ಟವು.

## 31.6 ದಕ್ಷಿಣ ಪ್ರಸ್ಥ ಭೂಮಿ

ವಿಂಧ್ಯಾಪರ್ವತ ಶ್ರೇಣಿಯಿಂದ ದಕ್ಷಿಣಕ್ಕೆ ಹರಡಿಕೊಂಡಿರುವ ಮತ್ತು ಇಡೀ ದಕ್ಷಿಣದ ಉಪಖಂಡವನ್ನು ಆವರಿಸಿಕೊಂಡಿರುವ ದಕ್ಷಿಣ ಪ್ರಸ್ಥ ಭೂಮಿಯನ್ನು ಪಶ್ಚಿಮ ಮತ್ತು ಪೂರ್ವ ಘಟ್ಟಗಳ ಕರಾವಳಿಯಿಂದ ಬೇರ್ಪಡಿಸಿವೆ. ಅತ್ಯಂತ ಪ್ರಾಚೀನ ಜನವಸತಿಯುಳ್ಳ ಪ್ರದೇಶವೆಂಬ ಹೆಸರು ದಕ್ಷಿಣ ಪ್ರಸ್ಥಭೂಮಿಗಿದೆ. ಪಶ್ಚಿಮಕ್ಕೆ ಹರಿದು ಅರೇಬಿಯನ್ ಸಮುದ್ರ ಸೇರುವ ನರ್ಮದಾ ಮತ್ತು ತಪತಿ ನದಿಗಳನ್ನು ಬಿಟ್ಟರೆ ದಕ್ಷಿಣ ಪ್ರಸ್ಥ ಭೂಮಿಯ ಪ್ರಮುಖ ನದಿಗಳಾದ ಗೋದಾವರಿ, ಮಹಾನದಿ, ಕೃಷ್ಣ ಮತ್ತು ಕಾವೇರಿಗಳು ಪೂರ್ವಭಿಮುಖವಾಗಿ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತವೆ. ದ್ರಾವಿಡ ಜನಾಂಗವು ದಕ್ಷಿಣ ಪ್ರಸ್ಥ ಭೂಮಿಯಲ್ಲಿ ತಮ್ಮ ನಾಗರಿಕತೆಯನ್ನು ಮತ್ತು ಸಾಮಾಜಿಕ ಹಾಗೂ ರಾಜಕೀಯ ಸಂಸ್ಥೆಗಳನ್ನು ಕಟ್ಟಿಕೊಂಡಿತು. ಆರ್ಯ ಸಂಸ್ಕೃತಿಯು ದಕ್ಷಿಣ ಪ್ರಸ್ಥ ಭೂಮಿಯಲ್ಲಿ ಹರಡಲು ಇದರಿಂದ ಸಾಧ್ಯವಾಯಿತು.

ಮೌರ್ಯ ಸಾಮ್ರಾಜ್ಯವು ಉತ್ತುಂಗ ಸ್ಥಿತಿಯಲ್ಲಿದ್ದಾಗ ದಕ್ಷಿಣ ಪ್ರಸ್ಥ ಭೂಮಿಯು ಮೌರ್ಯ ಸಾಮ್ರಾಜ್ಯದ ಭಾಗವಾಗಿತ್ತು. ಸಮುದ್ರಗುಪ್ತ ಮತ್ತು ಹರ್ಷವರ್ಧನರು ದಕ್ಷಿಣ ಪ್ರಸ್ಥ ಭೂಮಿಯನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದರೂ, ಅದು ಸಫಲವಾಗಲಿಲ್ಲ. ದಕ್ಷಿಣ ಪ್ರಸ್ಥ ಭೂಮಿಯ ರಾಷ್ಟ್ರಕೂಟ ಚಕ್ರವರ್ತಿಗಳು ಮತ್ತು ಚೋಳ ಮನೆತನಕ್ಕೆ ಸೇರಿದ ರಾಜೇಂದ್ರಚೋಳ ಉತ್ತರ ಭಾಗದ ಗಂಗಾ ಬಯಲು ಪ್ರದೇಶವನ್ನು ಆಕ್ರಮಿಸಿಕೊಂಡರು. ಆದರೆ ಅವರುಗಳು ತಾವು ಆಕ್ರಮಿಸಿಕೊಂಡ ಉತ್ತರ ಭಾಗದ ಮೇಲೆ ತಮ್ಮ ಆಳ್ವಿಕೆಯನ್ನು ಸ್ಥಾಪಿಸಲಿಲ್ಲ.

## 31.7 ಕರಾವಳಿ ಪ್ರದೇಶ

ದಕ್ಷಿಣ ಪ್ರಸ್ಥ ಭೂಮಿಯ ಪಶ್ಚಿಮ ಭಾಗದಲ್ಲಿ ಅರೇಬಿಯನ್ ಸಮುದ್ರಕ್ಕೆ ಸಮಿನಾಂತರವಾಗಿ ಉನ್ನತ ಪರ್ವತ ಶ್ರೇಣಿ ಹಬ್ಬಿಕೊಂಡಿದೆ. ಈ ಪಶ್ಚಿಮ ಕರಾವಳಿ ಪ್ರದೇಶದ ಉತ್ತರ ಭಾಗವನ್ನು ಕೊಂಕಣವೆಂದು ಮತ್ತು ದಕ್ಷಿಣ ಭಾಗವನ್ನು ಮಲಬಾರ್ ಎಂದೂ ಕರೆಯಲಾಗಿದೆ. ಪೂರ್ವ ಭಾಗದಲ್ಲಿರುವ ಪರ್ವತ ಶ್ರೇಣಿಯನ್ನು ಪೂರ್ವಘಟ್ಟ ಪ್ರದೇಶವೆಂದು ಕರೆಯಲಾಗಿದೆ. ಕರಾವಳಿ ಮತ್ತು ಪಶ್ಚಿಮ ಘಟ್ಟಗಳ ನಡುವಿನ ಪ್ರದೇಶವು ಫಲವತ್ತಾಗಿಯೂ ಮತ್ತು ಭತ್ತ ಮತ್ತು ತೆಂಗಿನ ಮರಗಳಿಂದ ಆವೃತವಾಗಿ ನಿತ್ಯ ಹರಿದ್ವರ್ಣವಾಗಿಯೂ ಇದೆ. ಈ ಪ್ರದೇಶವು ಅತ್ಯಂತ ಉತ್ಪಾದಕತೆಯಿಂದ ಕೂಡಿದ ಹಾಗೂ ಜನನಿಬೀಡ ಪ್ರದೇಶವಾಗಿದೆ. ಪ್ರಾಚೀನ ಕಾಲದಿಂದಲೂ ಕಚ್‌ನಿಂದ ಕಣ್ಣಾನೂರಿನವರೆಗೆ ಹರಡಿಕೊಂಡಿರುವ ಬಂದರುಗಳು ಹಾಗೂ ರೇವು ಪಟ್ಟಣಗಳು ಪಾಶ್ಚಿಮಾತ್ಯ ದೇಶಗಳ ಜೊತೆಗೆ ಹಡಗು ವ್ಯಾಪಾರದ ಪ್ರಮುಖ ಕೇಂದ್ರಗಳಾಗಿದ್ದವು ಹಾಗೂ ಮಧ್ಯ ಪ್ರಾಚ್ಯದ ಅನ್ಯೋನ್ಯ ಸಂಬಂಧಕ್ಕೆ ಕಾರಣವಾಗಿದ್ದವು. ಭಾರತದ ನೌಕಾಯಾನದ ಬೆಳವಣಿಗೆಯಿಂದಾಗಿ ಅದರ ಸಂಸ್ಕೃತಿ ಬರ್ಮಾ, ಜಾವ, ಸುಮಾತ್ರ, ಮಲಯಾ ಮುಂತಾದ ದೇಶಗಳಲ್ಲಿ ಹರಡುವಂತಾಯಿತು.

ಪರ್ವತ ಶ್ರೇಣಿಗಳಂತೆ, ನದಿಗಳಂತೆ, ಮರುಭೂಮಿಯಂತೆ, ಬಂದರುಗಳಂತೆ ಇಲ್ಲಿನ ಹವಾಮಾನವೂ ಕೂಡ ಭಾರತದ ಚರಿತ್ರೆಯಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸಿದೆ. ಭಾರತದಲ್ಲಿ ಎಲ್ಲ ಮೂರು ಬಗೆಯ ಹವಾಮಾನವಿರುವ ಪ್ರದೇಶಗಳಿವೆ. ಇಲ್ಲಿ ಉಷ್ಣ ವಲಯವಿದೆ, ಶೀತ ವಲಯವಿದೆ ಹಾಗೂ ಸಮಶೀತೋಷ್ಣ ವಲಯವೂ ಇದೆ. ಮೈ ಸುಡುವಂತಹ ಬಿಸಿಲಿನಿಂದ ಕಾಯುವ ಮರುಭೂಮಿ ಹವಾಮಾನವು ರಾಜಸ್ಥಾನದಲ್ಲಿದ್ದರೆ ಮೈಕೊರೆಯುವ ಚಳಿಯ ಹವಾಮಾನವು ಹಿಮಾಲಯ ಪರ್ವತ ಶ್ರೇಣಿಯಲ್ಲಿದೆ. ಬಂಗಾಳ, ಮಲಬಾರ್ ಪ್ರದೇಶಗಳಲ್ಲಿ ಉಷ್ಣ ಮತ್ತು ಶೀತ ಸಮವಾಗಿರುವ ಹವಾಮಾನವಿದೆ. ಕರಾವಳಿಗೆ ಸಂಬಂಧಿಸಿದಂತೆ ಪೂರ್ವ ಕರಾವಳಿ ಪ್ರದೇಶವು

ಪಶ್ಚಿಮ ಕರಾವಳಿ ಪ್ರದೇಶಕ್ಕಿಂತ ವಿಶಾಲವಾಗಿದೆ. ಈ ಕರಾವಳಿಯ ದಕ್ಷಿಣ ಭಾಗವನ್ನು ಕೋರಮಂಡಲವೆಂದು ಕರೆಯಲಾಗಿದೆ. ಇದು ತುಂಬಾ ವಿಶಾಲವಾಗಿ ಹರಡಿಕೊಂಡಿದೆ.

## 31.8 ಭೌಗೋಳಿಕ ಸನ್ನಿವೇಶದ ಪರಿಣಾಮಗಳು

ಹಿಮಾಲಯದ ಪರ್ವತ ಶ್ರೇಣಿಯು ಭಾರತಕ್ಕೆ ರಕ್ಷಣೆಯನ್ನು ಒದಗಿಸಿದೆ. ಆದರೆ ಅಲ್ಲಿರುವ ಖೈಬರ್ ಮತ್ತು ಬೋಲಾನ್ ಕಣಿವೆಗಳಿಂದ ಪರ್ಷಿಯನ್ನರು, ಗ್ರೀಕರು, ತುರ್ಕರು ಮತ್ತು ಆಫ್‌ಘನ್ನರು ಭಾರತವನ್ನು ಪ್ರವೇಶಿಸಿದರು. ಇದು ಸಾಂಸ್ಕೃತಿಕ ಮಿಲನಕ್ಕೆ ಕಾರಣವಾಯಿತು.

ಬಯಲು ಪ್ರದೇಶವು ಫಲವತ್ತಾಗಿದ್ದುದರಿಂದ ಅಲ್ಲಿ ಜನವಸತಿ ಅಧಿಕವಾಗಿತ್ತು. ಈ ಪ್ರದೇಶದಲ್ಲಿ ಹರಪ್ಪ ಮತ್ತು ವೈಧಿಕ ಸಂಸ್ಕೃತಿಗಳು ಬೆಳೆಯುವುದು ಸಾಧ್ಯವಾಯಿತು. ಇದೇ ಭೂಭಾಗದಲ್ಲಿ ಮಗಧ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂದಿತು. ಇದೇ ನದಿಮುಖಜ ಭೂಮಿಯಲ್ಲಿ ಮಹತ್ವದ ನಗರಗಳಾದ ಮುಲ್ತಾನ್, ತಕ್ಷಶಿಲಾ, ಇಂದ್ರಪ್ರಸ್ಥ, ಕನೂಜ್, ಅಯೋಧ್ಯ, ವಾರಣಾಸಿ, ಪಾಟಲಿಪುತ್ರ, ಸಾರಾನಾಥ್, ವೈಶಾಲಿ ಮುಂತಾದವು ಸಮೃದ್ಧವಾಗಿ ಬೆಳೆದವು. ಆಧುನಿಕ ಕಾಲದಲ್ಲಿ ಇದೇ ಪ್ರದೇಶದಲ್ಲಿ ಕರಾಚಿ, ಲಾಹೋರ್, ಆಗ್ರಾ, ಕಾನ್ಪುರ, ಮುರ್ಶಿದಾಬಾದ್, ಡಾಕಾ ಮತ್ತು ಕೊಲ್ಕತ್ತಾ ಮುಂತಾದ ನಗರಗಳು ಬೆಳೆದವು.

ಇದೇ ರೀತಿ ದಕ್ಷಿಣ ಭಾರತದ ನದಿ ತಪ್ಪಲಿನಲ್ಲಿ ಪೈಠಾನ್, ಹಂಪಿ, ಶ್ರೀರಂಗಪಟ್ಟಣ, ಶ್ರೀರಂಗಮ್, ತಂಜಾವೂರ್ ಮುಂತಾದ ನಗರಗಳು ಅಭಿವೃದ್ಧಿ ಹೊಂದಿದವು. ಅನೇಕ ನಗರಗಳು ರಾಜಧಾನಿಗಳಾಗಿ ಮೆರೆದವು. ಪಾಟಲೀಪುತ್ರವು ಮಗಧರ ರಾಜಧಾನಿಯಾಗಿತ್ತು. ಕನೂಜ್ ವರ್ಧನ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ರಾಜಪುತ್ರ ಮತ್ತು ಮುಸ್ಲಿಮರ ರಾಜಧಾನಿಯಾಗಿ ದೆಹಲಿ ರೂಪುಗೊಂಡಿತು. ಹಂಪಿಯು ವಿಜಯನಗರ ಸಾಮ್ರಾಜ್ಯದ ಮತ್ತು ತಂಜಾವೂರ್ ಚೋಳರ ರಾಜಧಾನಿಗಳಾಗಿದ್ದವು. ಈ ಫಲವತ್ತಾದ ಪ್ರದೇಶದಲ್ಲಿ ಅನೇಕ ಸಾಮ್ರಾಜ್ಯಗಳು ಮತ್ತು ರಾಜ ಮನೆತನಗಳು ಅಸ್ತಿತ್ವಕ್ಕೆ ಬಂದವು. ಇಲ್ಲಿನ ಸಮೃದ್ಧ ಕೃಷಿಯಿಂದಾಗಿ ಇದು ಮಹತ್ವದ ರಾಜಕೀಯ ಕೇಂದ್ರವಾಗಿ ಬೆಳೆಯಿತು.

ಭಾರತದ ಬಂದರುಗಳು ಪರ್ಷಿಯನ್ನರಿಗೆ, ಗ್ರೀಕರಿಗೆ, ಅರಬರಿಗೆ, ಯಹೂದಿಗಳಿಗೆ ಮತ್ತು ಚೀನೀಯರಿಗೆ ಭಾರತದ ಜೊತೆ ವ್ಯಾಪಾರ ವ್ಯವಹಾರ ನಡೆಸಲು ನೆರವಾದವು. ಇದು ಸಾಂಸ್ಕೃತಿಕ ಸಂಪರ್ಕಕ್ಕೂ ಕಾರಣವಾಯಿತು. ಅನೇಕ ವರ್ಷಗಳ ನಂತರ ಬ್ರಿಟಿಷರು ಮತ್ತು ಪೋರ್ಚುಗೀಸರು ಭಾರತವನ್ನು ಪ್ರವೇಶಿಸಲು ವ್ಯಾಪಾರವೇ ಕಾರಣವಾಯಿತು. ಪ್ರಾಚೀನ ಕಾಲದಿಂದಲೂ ಭಾರತವು ಬೃಹತ್ ಪ್ರಮಾಣದಲ್ಲಿ ವಿದೇಶಿ ವ್ಯಾಪಾರವನ್ನು ನಡೆಸುತ್ತಾ ಬಂದಿದೆ. ಭಾರತವು ವಜ್ರ, ಮತ್ತು ಮತ್ತು ಸಾಂಬಾರ ಪದಾರ್ಥಗಳನ್ನು ರಫ್ತು ಮಾಡುತ್ತಾ ಬಂದಿದೆ. ವಿದೇಶಿ ಸಂಸ್ಕೃತಿ ಹಾಗೂ ಧಾರ್ಮಿಕ ಸಂಗತಿಗಳೂ ದೇಶದೊಳಗೆ ಪ್ರವೇಶಿಸಿದವು. ದೇಶದ ವಿವಿಧ ಭಾಗಗಳಲ್ಲಿನ ಗಣಿ ನಿಕ್ಷೇಪಗಳಲ್ಲಿ ಖನಿಜ ಹಾಗೂ ಬೆಲೆಬಾಳುವ ರತ್ನಗಳ ಉತ್ಪಾದನೆಯಿಂದ ದೇಶವು ಅಪಾರ ಸಂಪತ್ತನ್ನು ಸಂಪಾದಿಸಿತು. ಕಬ್ಬಿಣ, ತಾಮ್ರ, ಜಿಂಕ್ ಮತ್ತು ಚಿನ್ನದ ಗಣಿಗಳು ಅಪಾರ ಸಂಪತ್ತನ್ನು ದೇಶಕ್ಕೆ ಒದಗಿಸಿದವು. ಕೆತ್ತನೆಯ ಶಿಲೆಗಳು ಕಲ್ಲುಗುಡ್ಡಗಳಲ್ಲಿ ದೊರೆಯುತ್ತಿದ್ದವು. ಅವುಗಳನ್ನು ಉಪಯೋಗಿಸಿಕೊಂಡು ಇಂದು ನಾವು ನೋಡುತ್ತಿರುವ ಸ್ಮಾರಕಗಳ ನಿರ್ಮಾಣ ಮಾಡಲಾಯಿತು. ಇದೇ ರೀತಿ ದಟ್ಟವಾದ ಕಾಡುಗಳು ಅಮೂಲ್ಯವಾದ ಮರ ಮುಟ್ಟುಗಳನ್ನು, ಗಂಧದ ಮರ, ಬೀಟೆ ಮತ್ತು ತೇಗದ ಮರಗಳನ್ನು ಅವು ಒದಗಿಸಿದವು. ತೇಗದ ಅಪಾರ ಲಭ್ಯತೆಯಿಂದಾಗಿ ಹಡಗು ನಿರ್ಮಾಣ ಚಟುವಟಿಕೆಗಳು ಅಭಿವೃದ್ಧಿ ಹೊಂದಿದವು. ಯುರೋಪಿಯನ್ನರು ತೇಗದ ಮರಗಳನ್ನು ಅಪಾರ ಪ್ರಮಾಣದಲ್ಲಿ ಇಲ್ಲಿಂದ ತಮ್ಮ ದೇಶಗಳಿಗೆ ಕೊಂಡೊಯ್ದರು.

ಇಲ್ಲಿನ ಹವಾಮಾನವು ವಿವಿಧ ಬಗೆಗಳಿಂದ ಕೂಡಿದೆ. ಹಿಮಾಲಯ ಪರ್ವತ ತಪ್ಪಲಿನಲ್ಲಿ ಶೀತ ಹವಾಮಾನವಿದ್ದರೆ ಕೇರಳ ಮತ್ತು ತಮಿಳುನಾಡುಗಳಲ್ಲಿ ವರ್ಷಪೂರ್ತಿ ಉಷ್ಣ ಹವಾಮಾನವಿರುತ್ತದೆ. ಮಣ್ಣು ಹಾಗೂ ಬೇಸಾಯದ ಪದ್ಧತಿಯು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಪಂಜಾಬ್ ಮತ್ತು ಹರಿಯಾಣಗಳಲ್ಲಿ ಗೋಧಿ ಪ್ರಮುಖ ಬೆಳೆಯಾದರೆ ಬಂಗಾಳ, ತಮಿಳುನಾಡು ಮತ್ತು ಕೇರಳಗಳಲ್ಲಿ ಭತ್ತವು ಮುಖ್ಯ ಬೆಳೆಯಾಗಿದೆ. ಪಂಜಾಬ್ ಮತ್ತು ಹರಿಯಾಣಗಳಲ್ಲಿ ಗೋಧಿಯು ಪ್ರಮುಖ ಆಹಾರ ಬೆಳೆಯಾದರೆ ಬಗಾಂಳ, ತಮಿಳುನಾಡು ಮತ್ತು ಕೇರಳಗಳಲ್ಲಿ ಭತ್ತವು ಆಹಾರ ಬೆಳೆಯಾಗಿದೆ. ದಕ್ಷಿಣ ಕರ್ನಾಟಕದಲ್ಲಿ ರಾಗಿಯನ್ನು ಯತೇಚ್ಛವಾಗಿ ಬೆಳೆಯಲಾಗುತ್ತದೆ.

ಆಹಾರ ಪದ್ಧತಿಯು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವಂತೆ ಜನರು ಉಡುವ ಉಡುಗೆ ತೊಡುಗೆಗಳ, ಪದ್ಧತಿ ರೀತಿ ರಿವಾಜುಗಳನ್ನು ವೈವಿಧ್ಯಮಯವಾಗಿವೆ. ಭಾರತದ ದಕ್ಷಿಣ ಭಾಗದಲ್ಲಿ ಜನರು ಹತ್ತಿ ಬಟ್ಟೆಯನ್ನು ಧರಿಸುತ್ತಾರೆ. ಭೌಗೋಳಿಕ ಭಿನ್ನತೆ ಹಾಗೂ ಹವಾಮಾನದ ವೈವಿಧ್ಯತೆಗಳು ವಿವಿಧ ಜನಾಂಗಗಳಿಗೆ ಸೇರಿದ ಜನರು ಬಹುಮುಖಿಯಾದ, ಜೀವನಮೌಲ್ಯಗಳಿಂದ ಕೂಡಿದ ಭಾರತೀಯ ಸಂಸ್ಕೃತಿಯನ್ನು ಕಟ್ಟಲು ನೆರವು ನೀಡಿದವು. ಭಾರತವು ವೈವಿಧ್ಯತೆಗಳ ನಾಡು. ಕೆಲವು ಜನರು ಸಂಪೂರ್ಣ ಸಸ್ಯಹಾರಿಗಳಾದರೆ ಮತ್ತೆ ಕೆಲವರು ಮಾಂಸಹಾರಿಗಳಾಗಿದ್ದಾರೆ.

## 31.9 ಉಪಸಂಹಾರ

ಭೌಗೋಳಿಕ ಅಂಶಗಳು ಉತ್ತರ ಭಾರತ ಇತಿಹಾಸ ಘಟನೆಗಳ ನಿರ್ಮಾಣದಲ್ಲಿ ಪ್ರಭಾವ ಬೀರಿವೆ. ಹಿಮಾಲಯ ಪರ್ವತ ಶ್ರೇಣಿ, ಸಿಂಧೂ-ಗಂಗಾ ಬಯಲು ಪ್ರದೇಶ, ಕರಾವಳಿ ಪ್ರದೇಶ ಘಟ್ಟಗಳು, ಫಲವತ್ತಾದ ಮಣ್ಣು ಮತ್ತು ವಾಯುಗುಣ ನಾಗರೀಕತೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾಗಿವೆ. ಹಿಮಾಲಯ ಪರ್ವತವು ಉತ್ತರ ಮತ್ತು ಮಧ್ಯ ಏಷ್ಯಾದಿಂದ ದಕ್ಷಿಣದ ಕಡೆ ಬೀಸುತ ಪ್ರಚಂಡ ಶೀತಮಾರುತಗಳಿಂದ ಭಾರತವನ್ನು ರಕ್ಷಿಸಿದೆ. ಹೀಗಾಗಿ ವಿದೇಶಿಯರಿಗೆ ಭಾರತದ ಮೇಲೆ ದಾಳಿ ಮಾಡುವುದು ಕಷ್ಟಕರವಾಗಿದೆ. ಆದರೆ ಭಾರತದ ವಾಯುವ್ಯ ಗಡಿಯಲ್ಲಿರುವ ಹಿಂದುಕುಶ್ ಮತ್ತು ಸುಲೇಮಾನ್ ಪರ್ವತ ಶ್ರೇಣಿಗಳು ಉತ್ತರ ಶ್ರೇಣಿಗಳಂತೆ ದೇಶಕ್ಕೆ ಹೆಚ್ಚು ರಕ್ಷಣೆ ನೀಡಿಲ್ಲ. ಗ್ರೀಕರು, ಶಕರು, ಹೂಣರು, ಅರಬರು, ತುರ್ಕರು, ಮೊಘಲರು, ಮಂಗೋಲರು ವಾಯುವ್ಯ ಗಡಿಯ ಖೈಬರ್ ಹಾಗೂ ಬೋಲಾನ್ ಕಣಿವೆಗಳ ಮೂಲಕ ಭಾರತಕ್ಕೆ ಬಂದು ತಮ್ಮ ಆಡಳಿತ ಮತ್ತು ಸಂಸ್ಕೃತಿಯ ಪ್ರಭಾವವನ್ನು ಉತ್ತರ ಭಾರತದಲ್ಲಿ ಪಸರಿಸಿದರು. ಭಾರತದ ಜೀವ ವಾಹಿನಿಗಳ ಗಂಗಾ, ಸಿಂಧೂ, ಯಮುನಾ, ಬ್ರಹ್ಮಪುತ್ರ ನದಿಗಳು ಪ್ರದೇಶ ಬಯಲುಗಳು ಮತ್ತು ಹವಾಗುಣ ಉತ್ತರ ಭಾರತ ಸಂಸ್ಕೃತಿಯನ್ನು ರೂಪಿಸಿದವು. ವಿವಿಧ ಜನಾಂಗ, ಭಾಷೆ ಮತ್ತು ಕೃಷಿ ಪ್ರಧಾನ ಸಂಸ್ಕೃತಿ ಕವಲೊಡೆಯಲು ಕಾರಣವಾಗಿದೆ. ವಿಶಿಷ್ಟ ಪರ್ವತ ಶ್ರೇಣಿಗಳು ಮತ್ತು ಪರಿಸರ ಭಾರತವನ್ನು ರಕ್ಷಿಸಿ, ಭಾರತವು ತನ್ನದೇ ಆದ ಮತ್ತು ವಿಶ್ವಧರ್ಮ ಮತ್ತು ಸಂಸ್ಕೃತಿಯ ಪೂರಕವಾದ ಎಲ್ಲಾ ವೈಶಿಷ್ಟ್ಯತೆಗಳನ್ನು ಮೈಗೂಡಿಸಿಕೊಂಡ ಮಾದರಿ ನಾಗರೀಕತೆಯ ಬೆಳವಣಿಗೆಗೆ ಕಾರಣಗಳಾಗಿವೆ. ಸಿಂಧೂ, ಗಂಗಾ ನದಿಗಳು ಮತ್ತು ಹಿಮಾಲಯ ಕರಗಿ ನೀರಾಗುವುದರಿಂದ ಉತ್ತರ ಭಾರತ ದವಸದ ಖಣಜವಾಗಿ ಉಳಿದು, ಕೃಷಿ ಸಂಸ್ಕೃತಿಯು ಇಲ್ಲಿ ಮುಂದುವರೆದಿದೆ.

ಇಲ್ಲಿನ ಭೌಗೋಳಿಕ ಅಂಶಗಳು ಮತ್ತು ಪರಿಸರ ಕಲೆ, ಸಾಹಿತ್ಯ ಮತ್ತು ಶಿಕ್ಷಣ ಬೆಳೆಯಲು ಕಾರಣವಾಗಿದೆ. ಪ್ರಾಚೀನ ಭಾರತದ ಖ್ಯಾತ ವಿಶ್ವವಿದ್ಯಾನಿಲಯಗಳಾದ ವಾರಣಾಸಿ, ತಕ್ಷಶಿಲಾ ಮತ್ತು ನಳಂದ ಭೌಗೋಳಿಕ ಅಂಶಗಳಿಂದ ವಿಕಸನಗೊಂಡವು. ಅಶೋಕ, ಸಮುದ್ರಗುಪ್ತ, ವಿಕ್ರಮಾದಿತ್ಯ, ಹರ್ಷ ಮತ್ತು ಅಕ್ಬರ್‌ರಂತಹ ಶ್ರೇಷ್ಠ ಚಕ್ರವರ್ತಿಗಳು ಆಳಿದ್ದು ಈ ನೆಲದಲ್ಲಿ ಸಾಹಿತ್ಯ ಕ್ಷೇತ್ರದ

ದಿಗ್ಗಜರೆನಿಸಿದ ಕಾಳಿದಾಸ, ಬಾಣಭಟ್ಟ, ಅಶ್ವಘೋಷ, ವಿಕಾಶದತ್ತ, ವಾಲ್ಮೀಕಿ ಮತ್ತು ಕಾಳಿದಾಸರು ಬರಹಗಳಿಂದ ಉತ್ತರ ಭಾರತದ ಜೀವನ ಮತ್ತು ಸಂಸ್ಕೃತಿಗೆ ಹೊಸ ಆಯಾಮ ದೊರಕಿಸಿಕೊಟ್ಟಿದ್ದಾರೆ. ಉತ್ತರ ಭಾರತದ ಭೌಗೋಳಿಕ ಅಂಶಗಳು ಬನಾರಸ್, ಅಲಹಾಬಾದ್, ಆಗ್ರಾ, ದೆಹಲಿ, ಪಾಟಲೀಪುತ್ರ, ಕಾಶಿ, ಪ್ರಯಾಗ ಮುಂತಾದ ಐತಿಹಾಸಿಕ ನಗರಗಳ ಉದಯಕ್ಕೆ ಕಾರಣವಾಗಿವೆ. ಪಾಣಿಪತ್, ಗೋಗ್ರ ಮತ್ತು ಕಾಣ್ವದಂತಹ ನಿರ್ಣಾಯಕ ಕದನಗಳು ಸಂಭವಿಸಿ ಉತ್ತರ ಭಾರತ ಇತಿಹಾಸ ಮತ್ತು ಸಂಸ್ಕೃತಿಯ ಬದಲಾವಣೆ ಮತ್ತು ಬೆಳವಣಿಗೆಗೆ ಕಾರಣವಾಗಿರುವುದು ಭೌಗೋಳಿಕ ಅಂಶಗಳಿಂದಲೆ ಹೀಗಾಗಿ ಚರಿತ್ರೆಯ ಮೇಲೆ ಇದರ ಪ್ರಭಾವ ಅಪಾರ.

## 31.10 ಮಾದರಿ ಪ್ರಶ್ನೆಗಳು

1. ಉತ್ತರ ಭಾರತ ಇತಿಹಾಸ ಘಟನೆಗಳನ್ನು ನಿರೂಪಿಸುವಲ್ಲಿ ಭೌಗೋಳಿಕ ಅಂಶಗಳು ಮಹತ್ವವನ್ನು ವಿವರಿಸಿ.
2. "ಭೂಗೋಳ ಶಾಸ್ತ್ರವು ಚಾರಿತ್ರಿಕ ಬುನಾದಿಯಾಗಿದೆ" ಉತ್ತರ ಭಾರತ ಸಂಸ್ಕೃತಿಯ ಬೆಳವಣಿಗೆಯ ಮೇಲೆ ಪರ್ವತ ಶ್ರೇಣಿಗಳು ಮತ್ತು ನದಿಗಳು ಬೀರಿದ ಪ್ರಭಾವದ ಹಿನ್ನೆಲೆಯಲ್ಲಿ ಈ ಹೇಳಿಕೆಯನ್ನು ಸಮರ್ಥಿಸಿರಿ.

## 31.11 ಅಧ್ಯಯನಕ್ಕೆ ಗ್ರಂಥಗಳು


1. ಎ.ಎಸ್. ಆಲ್ಟೇಕರ್ : Ancient India
2. ಎ.ಎಲ್. ಬಾಷ್ಯಂ : The wonder that wad India
3. ಬಿ.ಎನ್. ಲೂನಿಯಾ : Evolution of Indian Culture
4. ಆರ್.ಸಿ. ಮಜೂಮದಾರ್ : Ancient India

## ಟಿಪ್ಪಣಿಗಳು

# ಘಟಕ - 32

# ಉತ್ತರ ಭಾರತದ ಸಂಸ್ಕೃತಿಯ ಲಕ್ಷಣಗಳು

*ರಚನೆ*

**32.0** ಉದ್ದೇಶಗಳು

**32.1** ಪೀಠಿಕೆ ·

**32.2** ಸಂಸ್ಕೃತಿ ಅರ್ಥ - ವ್ಯಾಖ್ಯೆ

**32.3** ಸಂಸ್ಕೃತಿಗೆ ಪೂರಕವಾದ ಅಂಶಗಳು

**32.4** ಉತ್ತರ ಭಾರತದ ಸಂಸ್ಕೃತಿಯ ಲಕ್ಷಣಗಳು

**32.5** ಪರಿಸರದೊಂದಿಗೆ ಸಾಮರಸ್ಯ

**32.6** ಉಪಸಂಹಾರ

**32.7** ಮಾದರಿ ಪ್ರಶ್ನೆಗಳು

**32.8** ಅಧ್ಯಯನಕ್ಕೆ ಪುಸ್ತಕಗಳು

## 32.0 ಉದ್ದೇಶಗಳು

1. ಈ ಘಟಕದ ಅಭ್ಯಾಸವು ನಿಮಗೆ ಸಾಮಾಜಿಕ, ಆಧ್ಯಾತ್ಮಿಕ ಮತ್ತು ಐತಿಹಾಸಿಕ ಪರಿಕಲ್ಪನೆಯಲ್ಲಿ ಭಾರತೀಯ ಸಂಸ್ಕೃತಿಯ ಅರ್ಥವಿವರಣೆಯನ್ನು ನೀಡುತ್ತದೆ.

2. ತನ್ಮೂಲಕ ಉತ್ತರ ಭಾರತದ ಜನರ ಜೀವನವನ್ನು ಅವರು ಮೈಗೂಡಿಸಿಕೊಂಡಿರುವ ಗುಣ ಸ್ವಭಾವ, ಸಂಪ್ರದಾಯಗಳು ಮತ್ತು ಮತ-ಧರ್ಮಗಳು ಮೌಲ್ಯಗಳನ್ನು ಅರಿಯುವುದು.

3. ಉತ್ತರ ಭಾರತದ ನಾಗರೀಕತೆಯ ಉತ್ಕೃಷ್ಟ ವಿಚಾರಗಳು ಅಲ್ಲಿಯ ಪ್ರದೇಶದಲ್ಲಿನ ತತ್ವಜ್ಞಾನ, ಭೂಗೋಳ ಪರಿಸರ, ನಾಟಕ, ಸಾಹಿತ್ಯ, ವಿಜ್ಞಾನ ಮತ್ತು ಆಧ್ಯಾತ್ಮ ಜಾಗೃತಿಯಿಂದ ಮೂಡಿವೆ ಎನ್ನುವ ವಿಚಾರವನ್ನು ಮನಗಾಣುವುದಾಗಿದೆ. ಅಲ್ಲದೇ

4. ವಿವಿಧ ಪ್ರದೇಶ ಜನಾಂಗಗಳ ಉಪಸಂಸ್ಕೃತಿಗಳು ರಾಷ್ಟ್ರೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವುದನ್ನು ಗುರುತಿಸುವುದು.

## 32.1 ಪೀಠಿಕೆ

ಘಟಕ - 31 ರಲ್ಲಿ ಭೌಗೋಳಿಕ ಅಂಶಗಳು ಹೇಗೆ ಚಾರಿತ್ರಿಕ ಘಟನೆಗಳ ಮೇಲೆ ಪ್ರಭಾವ ಬೀರಿದವು ಎನ್ನುವುದನ್ನು ತಿಳಿಸಿದೆ. ನಾವೀಗ ಉತ್ತರ ಭಾರತದ ಸಂಸ್ಕೃತಿಯ ಅರ್ಥ ಮತ್ತು ಈ ಸಂಸ್ಕೃತಿಯ ಬೆಳವಣಿಗೆಗೆ ಮೂಲ ಅಂಶಗಳನ್ನು ಗುರಿತಿಸೋಣ. ಪರಿಸರ, ಮಣ್ಣು, ವಿದೇಶಿ ಆಕ್ರಮಣಗಳು ಮತ್ತು ಅವರ ಆಡಳಿತ ಭಾರತೀಯ ತತ್ವಜ್ಞಾನ, ಆಧ್ಯಾತ್ಮ, ವಿಚಾರ, ನಂಬಿಕೆಗಳ ಜನರ ಸಾಮಾಜಿಕ ಗುಣ-ಧರ್ಮಗಳು ಮತ್ತು ವಿಚಾರಗಳ ಮೇಲೆ ಮಹತ್ತರ ಪರಿಣಾಮ ಬೀರಿ ತನ್ನದೇ ಆದ ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾಗಿದೆ. ಇವೆಲ್ಲವುಗಳ ಪ್ರಭಾವದಿಂದ ಕಾಲಕಾಲಕ್ಕೆ ಜನರು ವಿವಿಧ ಧರ್ಮ ಹಾಗೂ ಜನಾಂಗಗಳ ಸಾಮಾಜಿಕ, ಧಾರ್ಮಿಕ ಮತ್ತು ಸೈದ್ಧಾಂತಿಕ ಮೌಲ್ಯಗಳನ್ನು ಅಳವಡಿಸಿಕೊಂಡರು. ಅಲ್ಲದೆ, ಪೌರಾತ್ಯ ಮತ್ತು ಪಾಶ್ಚಿಮಾತ್ಯರ ಸಕಾರಾತ್ಮಕ ವಿಷಯ ಆಚರಣೆಗಳನ್ನು ಮೈಗೂಡಿಸಿಕೊಂಡು ಭಾರತೀಯ ಸಂಸ್ಕೃತಿಯನ್ನು ವಿಶ್ವದಲ್ಲಿ ಸ್ಪಂದನಾತ್ಮಕ ಸಂಸ್ಕೃತಿಯಾಗಿ ಬೆಳಸಿದ ಕೀರ್ತಿ ಉತ್ತರ ಭಾರತಕ್ಕೆ ಸಲ್ಲುತ್ತದೆ. ಈ ತರಹದ ಸಂಸ್ಕೃತಿ ನಮ್ಮ ಜೀವನವನ್ನು ಅರ್ಥಪೂರ್ಣವನ್ನಾಗಿ ಮತ್ತು ಸುಂದರ ಪೂರ್ಣವನ್ನಾಗಿ ಮಾಡುವಲ್ಲಿ ಸಹಕಾರಿಯಾಗಿದೆ. ಈ ಹಿನ್ನಲೆಯಲ್ಲಿ ಉತ್ತರ ಭಾರತದ ಸಂಸ್ಕೃತಿಯ ಲಕ್ಷಣಗಳನ್ನು ಪರೀಕ್ಷಿಸೋಣ.

## 32.2 ಸಂಸ್ಕೃತಿಯ ಅರ್ಥ ಮತ್ತು ವ್ಯಾಖ್ಯೆ

ಇತಿಹಾಸಜ್ಞರು ಸಂಸ್ಕೃತಿಯ ವಿವಿಧ ರೀತಿಯಲ್ಲಿ ಪರಿಭವಿಸಿಕೊಂಡಿದ್ದಾರೆ. ಕೆಲವರು ಪದ್ಧತಿ, ಪರಂಪರೆ ಮತ್ತು ಸಾಂಪ್ರದಾಯಿಕ ನಡವಳಿಕೆಗಳ ಜೊತೆಗೆ ಸಂಸ್ಕೃತಿಯನ್ನು ತಳಕು ಹಾಕಿದರೆ ಇನ್ನೂ ಕೆಲವರು ಸಂಸ್ಕೃತಿಯನ್ನು ಸಾಮಾಜಿಕ ನಡಾವಳಿಯ ಸಂಹಿತೆ ಎಂದು ವಿವರಿಸಿದ್ದಾರೆ. ಭಾರತವು ವಿಶಾಲವಾದ ಹಾಗೂ ಪ್ರಾಚೀನವಾದ ದೇಶ. ಅಲ್ಲಿ ಸಂಸ್ಕೃತಿಯು ಅವಿಚ್ಛಿನ್ನವಾಗಿ ನಿರಂತರವಾಗಿ ಹರಿದುಕೊಂಡು ಬಂದಿದೆ.

ಉತ್ಪತ್ತಿಶಾಸ್ತ್ರದ ಪ್ರಕಾರ ಕಲ್ಚರ್ ಎಂಬ ನುಡಿಯು ಲ್ಯಾಟಿನ್ ಭಾಷೆಯಲ್ಲಿನ 'ಕೃಷಿ' - 'ಕೃಷಿಮಾಡು' ಎಂಬ ಅರ್ಥದ ನುಡಿಯಿಂದ ಉತ್ಪತ್ತಿ ಹೊಂದಿದೆ. ಇದಕ್ಕೆ ಸಮಾನವಾದ ಜರ್ಮನ್ ಭಾಷೆಯ ಪದವೆಂದರೆ 'ಕುಲ್ಚರ್'. ಕಲ್ಚರ್‌ನ ವ್ಯಾಪ್ತಿ ಮತ್ತು ಅರ್ಥವು ಕಲ್ಚರ್ ಪದದ ವ್ಯಾಪ್ತಿ ಮತ್ತು ಅರ್ಥಕ್ಕಿಂತ ವಿಶಾಲವಾದುದಾಗಿದೆ. ಇದಕ್ಕೆ ಸಂಸ್ಕೃತ ಭಾಷೆಯಲ್ಲಿ 'ಸಂಸ್ಕೃತಿ' ಎಂದು

ಕರೆಯಲಾಗಿದೆ. ಸಂಸ್ಕೃತಿಯೆಂದರೆ ಶುದ್ಧ-ಸುಧಾರಿಸಿದ ಎಂದು ಅರ್ಥ. 'ಭಾರತೀಯ ಸಂಸ್ಕೃತಿ' ಎಂಬ ಪರಿಭಾವನೆಯು ಬಳಕೆಯಲ್ಲಿದೆ. ಭಾರತ ಎಂಬ ನುಡಿಯು ಭಾರತೀಯ ಸಂಸ್ಕೃತಿಯ ಸಾರಪೂರ್ಣ ಲಕ್ಷಣಗಳ ಅಭಿವ್ಯಕ್ತಿಯಾಗಿದೆ. ಈ ನುಡಿಯ ಧಾತು 'ಭು' ಎಂದರೆ ಹುಟ್ಟು ಎಂದು ಅರ್ಥ. ಅದಕ್ಕೆ ತಡೆದುಕೊಳ್ಳುವ, ಧಾರಣೆಮಾಡಿಕೊಳ್ಳುವ ಎಂಬ ಅರ್ಥಗಳೂ ಇವೆ. ಮಹಾಕಾವ್ಯವಾದ ಮಹಾಭಾರತದ ಜೊತೆಯೂ ಇದು ಸಂಬಂಧ ಹೊಂದಿದೆ.

ಭಾರತ ಪದದಿಂದ "ಭಾರತಿ" ಮತ್ತು ವಿದ್ಯಾದೇವತೆಯಾದ 'ಸರಸ್ವತಿ' ಎಂಬ ಪದಗಳು ಹುಟ್ಟಿಕೊಂಡಿವೆ. ಭಾರತವೆಂಬುದು ವಿವೇಕ, ಲಲಿತಕಲೆ ಎಂಬ ಅರ್ಥವನ್ನೂ ಕೊಡುತ್ತದೆ. ಭಾರತವು ಲಲಿತಕಲೆ ಮತ್ತು ಸಂಸ್ಕೃತಿಯಲ್ಲಿ ಸಾಧಿಸಿಕೊಂಡ ಸಾಧನೆಯನ್ನು ಇದು ಸೂಚಿಸುತ್ತದೆ. ದುಷ್ಯಂತ ಮತ್ತು ಶಕುಂತಲೆಯರ ಮಗನಾದ 'ಭರತ' ನಿಂದ ಭಾರತವು ಉತ್ಪತ್ತಿಯಾಗಿದೆ. ಈ ದೇಶದಲ್ಲಿ ಪ್ರಥಮ ಸಾಮ್ರಾಜ್ಯವನ್ನು ಸ್ಥಾಪಿಸಿದ ಕೀರ್ತಿ ಭರತನಿಗೆ ಸಲ್ಲಬೇಕು. ಇದು ಭಾರತದ ರಾಜಕೀಯ ಇತಿಹಾಸದ ಪ್ರಾಚೀನತೆಯನ್ನು ತೋರಿಸುತ್ತದೆ. 'ಭರತ' ಎನ್ನುವುದು ಒಬ್ಬ ಮಹಾನ್ ಋಷಿಗೂ ಅನ್ವಯಿಸುತ್ತದೆ. ಋಷಿ ಭರತನು ಕಾವ್ಯ, ನಾಟಕ, ಸಂಗೀತ, ನೃತ್ಯ ಮತ್ತು ೬೪ ಲಲಿತಕಲೆಗಳನ್ನು ಕುರಿತಂತೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ ಎಂದು ಹೇಳಲಾಗಿದೆ. ಇದು ಭಾರತೀಯ ಸಂಸ್ಕೃತಿಯ ಆಧ್ಯಾತ್ಮಿಕ ಮುಖವನ್ನು ತೋರಿಸುತ್ತದೆ. ಭರತ ಋಷಿಯನ್ನು ಜಡ ಭರತನೆಂದೂ ಕರೆಯಲಾಗಿದೆ. ಭರತ ಎಂಬ ನುಡಿಯು ಭಾರತದ ಸಂದರ್ಭದಲ್ಲಿ ತುಂಬಾ ಮಹತ್ವದ್ದಾಗಿದೆ.

ಭಾರತವು ಋಷಿಗಳ ಹಾಗೂ ಕವಿಗಳ ನಾಡು, ಋಗ್ವೇದದಲ್ಲಿನ ಸ್ತೋತ್ರ/ಶ್ಲೋಕಗಳಲ್ಲಿ ದೇಶಪ್ರೇಮದ ಭಾವನೆ ಮತ್ತಾ ತಾಯಿನಾಡಿನ ಬಗ್ಗೆ ಅಭಿಮಾನ ಸ್ಪಷ್ಟವಾಗಿ ಅಭಿವ್ಯಕ್ತಿ ಪಡೆದುಕೊಂಡಿದೆ. ಸಂತೋಷವಾಗಿ ನಾವು ಭಾರತದಲ್ಲಿ ಬದುಕುತ್ತಿದ್ದೇವೆಂದು ಋಷಿಗಳು ಹಾಡಿದ್ದಾರೆ. ಈ ಧರ್ಮಭೂಮಿಯಲ್ಲಿ ಆಧ್ಯಾತ್ಮಿಕ ಸಾಧನೆಗೆ ಯಾವುದೇ ಧಕ್ಕೆ ಉಂಟಾಗದಿರಲಿ ಎಂದು ಪ್ರಾರ್ಥಿಸುವ ಶ್ಲೋಕಗಳು ಯಜುರ್ವೇದದಲ್ಲಿ ಸಿಗುತ್ತವೆ. ಚಕ್ರವರ್ತಿಗಳು ದೇಶದ ಗಡಿಗಳ ರಕ್ಷಣೆ ಬಗ್ಗೆ ಜಾಗೃತರಾಗಿರಲಿ, ಇಲ್ಲಿ ಸದಾಕಾಲ ಬರ ಮತ್ತು ಪ್ರಾಕೃತಿಕ ವಿಕೋಪಗಳಿಂದ ಮುಕ್ತವಾಗಿರಲಿ ಎಂಬ ಅರ್ಥಬರುವ ಪ್ರಾರ್ಥನೆಯು ಇಲ್ಲಿನ ಶ್ಲೋಕಗಳಲ್ಲಿದೆ. ಪುರಾಣಗಳಲ್ಲಿ ಉಲ್ಲೇಖಿಸಿರುವಂತೆ ಭರತ ವರ್ಷದಲ್ಲಿ ಹುಟ್ಟುವುದೇ ಒಂದು ಅದೃಷ್ಟವೆಂದು ದೇವತೆಗಳು ಹಾಡಿದ್ದಾರೆ. ಈ ಎಲ್ಲ ಕಾರಣಗಳಿಂದ ಭಾರತವು ಭಾರತೀಯ ಸಂಸ್ಕೃತಿಯ ಪ್ರತಿರೂಪವೆಂದು ಹೇಳಬಹುದು. ಭಾರತೀಯ ಸಂಸ್ಕೃತಿಯನ್ನು ವೈದಿಕವೆಂದೂ ಕರೆಯಲಾಗಿದೆ. ಏಕೆಂದರೆ ಇಲ್ಲಿ ಪ್ರಾಚೀನ ಕೃತಿಗಳಾದ ವೇದಗಳಲ್ಲಿ ಇದು ಅಭಿವ್ಯಕ್ತವಾಗಿದೆ. ಇದನ್ನು ಹಿಂದೂ ಸಂಸ್ಕೃತಿಯೆಂದೂ ಕರೆಯಲಾಗಿದೆ. ಏಕೆಂದರೆ ಈ ನಾಡಿನ ಪ್ರಸಿದ್ಧ ನದಿ ಸಿಂದೂ ಅಥವಾ ಇಂಡಸ್ ಅಥವಾ ಹಿಂದು ಮುಖಜ ಭೂಮಿಯಲ್ಲಿ ಹುಟ್ಟಿ ವಿಕಾಸ ಹೊಂದಿದ ಭಾರತೀಯ ಸಂಸ್ಕೃತಿಗೆ ಹಿಂದೂ ಸಂಸ್ಕೃತಿಯೆಂಬ ಹೆಸರು ಬಂದಿದೆ.

ಅರ್ನಾಲ್ಡ್ ಕೈಸರ್‌ಲಿನ್ ಪ್ರಕಾರ ಸಂಸ್ಕೃತಹೀನ ಜನರನ್ನು ಸಂಸ್ಕೃತಿವಂತರನ್ನಾಗಿ ಪರಿವರ್ತಿಸುವುದೇ ಸಂಸ್ಕೃತಿ. ಜವಹರಲಾಲ್ ನೆಹರೂ ತಮ್ಮ ಪ್ರಸಿದ್ಧ ಗ್ರಂಥ 'ಭಾರತದ ಶೋಧ' ***(Discovery of India)*** ಎಂಬ ಕೃತಿಯಲ್ಲಿ ತತ್ವಶಾಸ್ತ್ರ, ನಾಟಕ, ಸಾಹಿತ್ಯ, ಕಲೆ, ವಿಜ್ಞಾನ, ಗಣಿತ ಮುಂತಾದ ಜ್ಞಾನಶಾಖೆಗಳಿಂದ ಮೂಡಿಬರುವ ಸಮೃದ್ಧ ನಾಗರಿಕತೆಯನ್ನು ಸಂಸ್ಕೃತಿಯೆಂದು ನಿರ್ವಚಿಸಿದ್ದಾರೆ. ನಿಜವಾಗಿ ಹೇಳಬೇಕೆಂದರೆ ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಜನರು ಸಾಧಿಸಿಕೊಂಡ ಸಿದ್ಧ ಸಾಧನೆಗಳ ಸಮಷ್ಟಿ ರೂಪವೇ ಸಂಸ್ಕೃತಿ. ಒಸ್ವಾಲ್ಡ್ ಸ್ಪೆಂಗ್ಲರ್ ನಿರ್ವಚಿಸಿರುವಂತೆ 'ಶಿಕ್ಷಣ ಮತ್ತು ಆಧ್ಯಾತ್ಮಿಕ ಪ್ರಜ್ಞೆಯ ಸ್ವಯಂ ಅಭಿವ್ಯಕ್ತಿಯೇ ಸಂಸ್ಕೃತಿ'. ಕೆ.ಎಂ. ಪಣಿಕ್ಕರ್ ಪ್ರಕಾರ ಸಮಾಜದಲ್ಲಿ ಸಾಮಾನ್ಯವಾಗಿ ಕಂಡುಬರುವ ವಿನಮ್ರ ನಡವಳಿಕೆ, ಸಂಘಟಿತ ಸಂಬಂಧಗಳು, ಉತ್ಕೃಷ್ಟ ವಿಚಾರಗಳು ಮತ್ತು ಗುಣಮಟ್ಟವೇ ಸಂಸ್ಕೃತಿ. ಒಟ್ಟಾರೆ ಸಂಸ್ಕೃತಿಯೆಂದರೆ ಸಮಾಜದ ಸಾತ್ವಿಕ ಗುಣ.

ಸಂಸ್ಕೃತಿ ಜೊತೆ ಹೊಂದಿಕೊಂಡಿರುವ ನುಡಿಯೆಂದರೆ ನಾಗರಿಕತೆ, ಅಂದಮೇಲೆ ಸಂಸ್ಕೃತಿ ಮತ್ತು ನಾಗರಿಕತೆಗಳ ನಡುವಿನ ಭಿನ್ನತೆಯೇನು ಎಂಬ ಪ್ರಶ್ನೆ ಸಹಜವಾಗಿ ನಮ್ಮ ಮುಂದೆ ಬರುತ್ತದೆ. ಸಂಸ್ಕೃತಿಯು ನಾಗರಿಕತೆಯ ಸಾರಸತ್ವ ಫಲ. ನಾಗರಿಕತೆಯು ಆವರ್ತನಶೀಲವಾದರೆ ಸಂಸ್ಕೃತಿ ರೇಖಾತ್ಮವಾಗಿರುತ್ತದೆ. ನಾಗರಿಕತೆಯಲ್ಲಿ ಏಳು ಬೀಳುಗಳಿರುತ್ತವೆ. ಆದರೆ ಅತ್ಯಂತ ಸೂಕ್ಷ್ಮವಾದ ಸಂಸ್ಕೃತಿಯೆನ್ನುವುದು ನಾಗರಿಕತೆಯೊಳಗಿಂದ ಮೂಡಿಬರುವ ಒಂದು ಸಂಗತಿಯಾಗಿದೆ. ಸಂಸ್ಕೃತಿ ಮತ್ತು ನಾಗರಿಕತೆಗಳ ನಡುವಿನ ಭಿನ್ನತೆ ಬಗ್ಗೆ ಬರೆಯುತ್ತಾ ಹುಮಾಯುನ್ ಕಬೀರ್‌ರವರು "ನಾಗರಿಕತೆಯೆಂಬುದು ಜನರು ತನ್ನ ಬದುಕನ್ನು ಹೇಗೆ ಕಟ್ಟಿಕೊಳ್ಳುತ್ತಾರೆ, ನಾಗರಿಕ ಸಮಾಜವನ್ನು ಹೇಗೆ ಸಂಘಟಿಸಿಕೊಳ್ಳುತ್ತಾರೆ ಎಂಬುದಕ್ಕೆ ಸಂಬಂಧಿಸಿದೆ. ನಾಗರಿಕ ಸಮಾಜದಲ್ಲಿ ಮಾತ್ರ ಸಮಷ್ಟಿ ಜೀವನ ಸಾಧ್ಯ ಹಾಗೂ ಅಲ್ಲಿ ಮಾತ್ರ ವ್ಯಕ್ತಿಯು ಸೃಜನಶೀಲ ಚಟುವಟಿಕೆಗಳನ್ನು ಫಲಪ್ರದವಾಗಿ ಕೈಗೊಳ್ಳಬಲ್ಲ. ಸಂಸ್ಕೃತಿಯು ಅಂತಹ ಸಂಘಟಿತ ಪ್ರಯತ್ನದ ಫಲ. ಅದು ಭಾಷೆ, ಕಲೆ, ತತ್ವಜ್ಞಾನ, ಧರ್ಮ, ಸಾಮಾಜಿಕ ಆಚರಣೆಗಳು, ಪದ್ಧತಿಗಳು, ರಾಜಕೀಯ ಸಂಸ್ಥೆಗಳು ಮತ್ತು ಆರ್ಥಿಕ ಸಂಘಟನೆಗಳಲ್ಲಿ ಪ್ರತಿಬಿಂಬಿತವಾಗುತ್ತಿರುತ್ತದೆ". ಸಂಸ್ಕೃತಿಗೆ ನಾಗರಿಕತೆಯು ಮೂಲ, ನಾಗರಿಕತೆಯಿಲ್ಲದೆ ಸಂಸ್ಕೃತಿ ಬಗ್ಗೆ ಯೋಚಿಸುವುದು ಸಾಧ್ಯವಿಲ್ಲ. ಸಂಸ್ಕೃತಿಗೆ ನಾಗರಿಕತೆಯ ಸಾರಸತ್ವ. ಸಂಸ್ಕೃತಿ ಎಂಬ ನುಡಿಯ ಅರ್ಥವು ನಾಗರಿಕತೆ ಎಂಬ ನುಡಿಯ ಅರ್ಥಕ್ಕಿಂತ ಭಿನ್ನವಾಗಿದೆ. ನಾಗರಿಕತೆಯೆಂದರೆ ಜನರು ಹೇಗೆ ಜೀವಿಸುತ್ತಾರೆ. ಹೇಗೆ ಚಿಂತಿಸುತ್ತಾರೆ, ಅವರು ಹೇಗೆ ಕ್ರಿಯಾಶೀಲರಾಗಿದ್ದಾರೆ ಎಂಬುದಾಗಿದೆ. ಜನರ ಜೀವನ ವಿಧಾನದ ಸೂಚಿ ನಾಗರಿಕತೆ, ಪದ್ಧತಿಗಳು, ನಡಾವಳಿಕೆ, ಆಹಾರ ವಿಧಾನ, ಧರಿಸುವ ಉಡುಪು, ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳು, ಜೀವನದ ಬಗ್ಗೆ ಜನರ ದೃಷ್ಟಿಕೋನಗಳ ಸಮಷ್ಟಿ ರೂಪವೇ ನಾಗರಿಕತೆ, ಒಂದು ಜನವರ್ಗಕ್ಕೆ ಅನ್ವಯಿಸಿದಾಗ, ಸಂಸ್ಕೃತಿಯೂ ಜೀವನ ಪದ್ಧತಿಯೆಂಬ ಅರ್ಥಪಡೆದುಕೊಂಡು ಬಿಡುತ್ತದೆ. ಕಾಲಾನುಕ್ರಮದಲ್ಲಿ ಭೌತಿಕ ಮತ್ತು ಮಾನಸಿಕ ನೆಲೆಗಳಲ್ಲಿ ಸಾಧಿಸಿಕೊಂಡ ಬೌದ್ಧಿಕ ಔನ್ನತ್ಯವನ್ನು ಅದು ಸೂಚಿಸುತ್ತದೆ. ಅದು ಇಡೀ ಜನಸಮುದಾಯಕ್ಕೆ ಅನ್ವಯಿಸುವ ಸಂಗತಿಯಾಗಿದೆ. ಅದು ಜನವರ್ಗವು ಕಟ್ಟಿದ ಸರ್ಕಾರದ ಸಂಘಟನೆಗಳು, ಸಮಾಜ, ಧರ್ಮ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಪ್ರಪಂಚದಲ್ಲಿ ಇಂದು ಅತಿದೊಡ್ಡದಾದ ಹಾಗೂ ಆಧುನಿಕ ಸಮಾಜವಾಗಿರುವ ಭಾರತವು ಹೇಗೆ ತನ್ನ ಏಕತೆ-ಐಕ್ಯತೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಭಾರತೀಯ ಸಂಸ್ಕೃತಿಯ ತಿಳುವಳಿಕೆ ಅಗತ್ಯ.

ಒಟ್ಟಾರೆ ಸಂಸ್ಕೃತಿಯೆಂದರೆ ಪರಂಪರಾನುಗತವಾಗಿ ಹರಿದುಕೊಂಡು ಬಂದ ಲೋಕದೃಷ್ಟಿ ಹಾಗೂ ಬೌದ್ಧಿಕ ದೃಷ್ಟಿಯ ಆಧಾರದ ಮೇಲೆ ಕಾಲ ದೇಶ ಸಂದರ್ಭಗಳ ಚೌಕಟ್ಟಿನಲ್ಲಿ ನಡೆಯುವ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಚಟುವಟಿಕೆಗಳ ಒಂದು ಸಮಗ್ರ ರೂಪವಾಗಿದೆ. ಒಂದು ದೇಶದ ಕಲೆ, ವಿಜ್ಞಾನ, ಸಾಹಿತ್ಯ, ಉದ್ದಿಮೆ, ಕುಶಲಕಲೆ ಮುಂತಾದ ಸಂಗತಿಗಳ ಸಂಘಟಿತ ರೂಪವೇ ಸಂಸ್ಕೃತಿ. ಒಂದು ಸಮಾಜವು ಪ್ರಗತಿಹಾದಿಯಲ್ಲಿ ಸಾಗುವಾಗ ಸಾಧಿಸಿಕೊಂಡ ಔನ್ನತ್ಯ ಮತ್ತು ವಿಗತಿಯ ಹಾದಿ ಹಿಡಿದಾಗ ಅನುಭವಿಸುವ ಕುಸಿತವನ್ನು ಅದು ಸೂಚಿಸುತ್ತದೆ.

## 32.3 ಸಂಸ್ಕೃತಿಗೆ ಪೂರಕವಾದ ಅಂಶಗಳು

ಪ್ರಪ್ರಥಮವಾಗಿ ಒಂದು ದೇಶದ ಸಂಸ್ಕೃತಿಯಲ್ಲಿ ಅಲ್ಲಿನ ಪರಿಸರವು ಪ್ರಮುಖ ಪಾತ್ರವಹಿಸುತ್ತದೆ. ಏಕೆಂದರೆ ಸ್ಥಳೀಯ ಗುಣಲಕ್ಷಣಗಳನ್ನು ನಿರ್ಧರಿಸುವಲ್ಲಿ ಅಲ್ಲಿನ ಮಣ್ಣು ಮತ್ತು ಅನುವಂಶೀಯತೆ ಪ್ರಮುಖ ಪಾತ್ರ ವಹಿಸುತ್ತದೆ. ಎರಡನೆಯದಾಗಿ ಸಮಕಾಲೀನ ಸಂಸ್ಕೃತಿಯು ಒಂದು ರೂಪ ಪಡೆದುಕೊಳ್ಳಬೇಕಾದರೆ ಅಲ್ಲಿನ ಮಣ್ಣಿನ ಹಾಗೂ ಅನುವಂಶೀಯತೆಯ ನೇರ

ಉತ್ಪನ್ನಗಳಾದ ಅಲ್ಲಿನ ಬುದ್ಧಿ ಜೀವಿಗಳ ಪಾತ್ರ ಮತ್ತು ಪ್ರಭಾವ ತುಂಬಾ ಮುಖ್ಯವಾಗಿರುತ್ತದೆ. ಮೂರನೆಯದಾಗಿ ಕುಟುಂಬವು ಸಂಸ್ಕೃತಿಯನ್ನು ಪ್ರಸರಿಸುವ ಪ್ರಾಥಮಿಕ ಸಾಧನವಾಗಿದೆ. ನಾಲ್ಕನೆಯದಾಗಿ ಭಾರತೀಯ ಸಂಸ್ಕೃತಿಯ ಸ್ವರೂಪ ಮತ್ತು ವಿಕಾಸದ ಮೇಲೆ ಪರ್ಷಿಯನ್, ಗ್ರೀಕ್, ಮುಸ್ಲಿಂ, ಯುರೋಪಿಯನ್ ಜೀವನ ಪದ್ಧತಿಗಳು ಅಪಾರ ಪ್ರಭಾವ ಬೀರಿವೆ.

*ಭಾರತೀಯ ಸಂಸ್ಕೃತಿಯ ಮೂಲ*

ಕೆಲವು ವಿದ್ವಾಂಸರ ಪ್ರಕಾರ ತತ್ವಜ್ಞಾನ ಮತ್ತು ಆಧ್ಯಾತ್ಮಿಕತೆಗಳೇ ಭಾರತೀಯ ಸಂಸ್ಕೃತಿಯ ಮೂಲ. ಇನ್ನೂ ಕೆಲವರ ಪ್ರಕಾರ ಇಲ್ಲಿನ ಜನರ ಆದರ್ಶ ಕನಸುಗಳನ್ನು ಒಳಗಿಟ್ಟುಕೊಂಡಿರುವ ಅತ್ಯುತ್ತಮ ವಾಸ್ತು ಚಿತ್ರಕಲೆಗಳೇ ಭಾರತೀಯ ಸಂಸ್ಕೃತಿಯ ಮೂಲಾಧಾರ. ಇನ್ನೊಂದು ಗುಂಪಿನ ಪ್ರಕಾರ ಭಾರತೀಯ ಸಂಸ್ಕತಿಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುವ ನಟರಾಜನ ರೂಪಗಳು, ಭಾರತೀಯ ಸಂಗೀತ, ಅದರಲ್ಲಿನ ರಾಗ-ರಾಗಿಣಿ ಪದ್ಧತಿಗಳೇ ಭಾರತೀಯ ಸಂಸ್ಕೃತಿಯ ಸಾರಸತ್ವ. ಪಂ. ಜವಹರಲಾಲ ನೆಹರೂ ಪ್ರಕಾರ ಭಾರತೀಯ ಸಂಸ್ಕೃತಿಯೆಂದರೆ ಇಲ್ಲಿನ ಗ್ರಾಮೀಣ ಜನರ ಬದುಕು.

ಗುರುದೇವ ರವೀಂದ್ರನಾಥ ಠಾಗೂರ್‌ರವರು ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಹರಡಿಕೊಂಡಿರುವ ಪ್ರಕೃತಿ, ಸುಂದರ ಗ್ರಾಮಗಳು, ಕಲೆ, ಸಾಹಿತ್ಯ ಮತ್ತು ವಿಜ್ಞಾನಗಳಲ್ಲಿ ಪ್ರತಿಪಾದಿತವಾಗಿರುವ ಸೌಂದರ್ಯ ಮೀಮಾಂಸೆ, ಸಾರ್ವಕಾಲಿಕ ಮೌಲ್ಯಗಳಲ್ಲಿ ಸಂಸ್ಕೃತಿಯನ್ನು ಕಾಣುತ್ತಾರೆ. ಎ.ಎಲ್. ಭಾಷ್ಯಂ ಪ್ರಕಾರ ಭಾರತೀಯ ಸಂಸ್ಕೃತಿಯು ಸಮಷ್ಟಿಯಾದದ್ದು, ತಮ್ಮ ಅಭಿಜಾತ ಗ್ರಂಥ **'ಭಾರತವೆಂಬ ಅದ್ಭುತ'** ***(Wonder that was India)*** ದಲ್ಲಿ ಭಾರತೀಯ ಸಂಸ್ಕೃತಿಯನ್ನು ಅವರು ಭೌಗೋಳಿಕ ಸನ್ನಿವೇಶ, ಜೈವಿಕ ವೈವಿಧ್ಯತೆ, ಹವಾಮಾನ, ಮಣ್ಣು, ಸೂರ್ಯನಶಾಖ ಮುಂತಾದವುಗಳ ಪ್ರಭಾವದಿಂದ ರೂಪುಗೊಳ್ಳುವ ಜನರ ಜೀವನಶೈಲಿ, ಅವರ ತತ್ವಜ್ಞಾನ, ಅವರ ವಿಚಾರಗಳು, ಅವರ ಕಲೆ ಮುಂತಾದವುಗಳ ಚೌಕಟ್ಟಿನಲ್ಲಿ ಚರ್ಚಿಸಿದ್ದಾರೆ. ಭಾರತೀಯ ಸಂಸ್ಕೃತಿಯ ಪ್ರತಿಯೊಬ್ಬ ವಿದ್ಯಾರ್ಥಿಯೂ ಅಲ್ಲಿ ಕಂಡುಬರುವ ಭಾಷಾ ಮತ್ತು ಉಪಭಾಷಾ ವೈವಿಧ್ಯತೆಯನ್ನು, ದೇವ ದೇವತೆಯರನ್ನು, ಮೌಲ್ಯ ನಂಬಿಕೆಗಳನ್ನು, ಪದ್ಧತಿ ನಡಾವಳಿಗಳನ್ನು, ಋಷಿ, ಸಾಧು ಸಂತರ ವಿಚಾರಗಳನ್ನು, ಚಿತ್ರಕಲಾವಿದರನ್ನೂ, ಶಿಲ್ಪಕಲೆ ವಾಸ್ತುಕಲೆಗಳಲ್ಲಿನ ಸಿದ್ಧಿ ಸಾಧನೆ ಮಾಡಿದವರನ್ನು ಸಂಗೀತ, ನೃತ್ಯ ಪಟುಗಳನ್ನು ಕಲಾವಿದರನ್ನು ಕಂಡು ಅಚ್ಚರಿಗೊಳಗಾಗುತ್ತಾರೆ ಮತ್ತು ದಿಗ್ಮೂಢರಾಗುತ್ತಾರೆ.

## 32.4 ಉತ್ತರ ಭಾರತ ಸಂಸ್ಕೃತಿಯ ಲಕ್ಷಣಗಳು

ಭಾರತ ಎಂಬ ನುಡಿಯು ಭಾರತೀಯ ಸಂಸ್ಕೃತಿಯ ಸಾರಸ್ತವವನ್ನು ಪ್ರತಿಬಿಂಬಿಸುತ್ತದೆ. ಭಾರತೀಯ ಸಂಸ್ಕೃತಿಯ ಅದರ ಸಾರಸತ್ವಗುಣಗಳಾದ, ಏಕತೆಯಲ್ಲಿ ವಿವಿಧತೆ, ಅವಿಚ್ಛಿನ್ನತೆ ಸಹನೆಯ ಪರಂಪರೆ, ಅಹಿಂಸೆಯ ಪರಂಪರೆ., ಐಕ್ಯತೆ ಹಾಗೂ ಮಿಲನ. ತಾತ್ವಿಕ ಹಾಗೂ ಕಲಾತ್ಮಕ ಪರಂಪರೆಗಳಲ್ಲಿ ತನ್ನ ಮಹತ್ವವನ್ನು ಮೆರೆದಿದೆ.

*ಏಕತೆಯಲ್ಲಿ ವೈವಿಧ್ಯತೆ*

ಭಾರತವು ವೈವಿಧ್ಯತೆಗಳ ನೆಲೆವೀಡಾಗಿದೆ. ವೈವಿಧ್ಯತೆಯ ಪ್ರತಿಮೂರ್ತಿಯೆಂದು ಭಾರತವನ್ನು ವರ್ಣಿಸಲಾಗಿದೆ. ಭೌಗೋಳಿಕವಾಗಿ ಅದೊಂದು ಅಂತ್ಯವಿಲ್ಲದ ವೈವಿಧ್ಯತೆಯ ನಾಡಾಗಿದೆ. ಹವಾಮಾನ ಮತ್ತು ಮಳೆ ಮಾರುತಗಳಲ್ಲಿ ವೈವಿಧ್ಯತೆಗಳಿವೆ. ಎಲ್ಲ ಬಗೆಯ ಸಸ್ಯ ಮತ್ತು ಪ್ರಾಣಿ ಪ್ರಭೇದಗಳ ತವರೂರು ಭಾರತ. ಅನೇಕ ಜನಾಂಗಗಳ ನಾಡು ಭಾರತ. ಪ್ರಸಿದ್ಧ ಇತಿಹಾಸಜ್ಞ ಸ್ಮಿತ್ ಭಾರತವನ್ನು 'ಬುಡಕಟ್ಟು ಜನ ಜೀವನದ ಸಂಗ್ರಹಾಲಯ' ವೆಂದು ವರ್ಣಿಸಿದ್ದಾನೆ.

ಇನ್ನೂರಕ್ಕೂ ಅಧಿಕ ಭಾಷೆ ಉಪಭಾಷೆಗಳನ್ನು ಭಾರತೀಯರು ಆಡುತ್ತಾರೆ. ವಿಶ್ವದ ಪ್ರಸಿದ್ಧ ಧರ್ಮಗಳಾದ ಹಿಂದೂ ಧರ್ಮ, ಬೌದ್ಧ ಧರ್ಮ, ಜೈನಧರ್ಮ, ಕ್ರಿಶ್ಚಿಯನ್ ಧರ್ಮ, ಇಸ್ಲಾಂಧರ್ಮ ಮುಂತಾದವು ಇಲ್ಲಿ ಉಳಿದುಕೊಂಡು ಬೆಳೆದುಕೊಂಡು ಬಂದಿವೆ. ಈ ಧರ್ಮ ಮತ್ತು ಉಪಧರ್ಮಗಳ ಅನುಯಾಯಿಗಳನ್ನು ಭಾರತದಲ್ಲಿ ನೋಡಬಹುದು. ಹಿಂದೂ ಧರ್ಮದಲ್ಲಿ ಅನೇಕ ಜಾತಿಗಳು, ಉಪಜಾತಿಗಳಿವೆ. ಭೌಗೋಳಿಕವಾಗಿ ಅನೇಕ ವಿಭಾಗಗಳನ್ನು ಇಲ್ಲಿ ನೋಡಬಹುದು. ವಿಶ್ವದಲ್ಲೇ ಅತಿ ಎತ್ತರದ ಪರ್ವತ ಶಿಖರ ಇಲ್ಲಿದೆ. ದಟ್ಟವಾದ ಕಾಡುಗಳಿವೆ, ಫಲವತ್ತಾದ ಬಯಲು ಪ್ರದೇಶಗಳಿವೆ, ವೈವಿಧ್ಯಮಯವಾದ ನದಿ ಕಣಿವೆಗಳಿವೆ. ಇಲ್ಲಿ ಮರುಭೂಮಿಯಿದೆ, ಕರಾವಳಿಯಿದೆ. ರಾಜಕೀಯವಾಗಿ ಮೌರ್ಯದ ಆಡಳಿತವನ್ನು ಬಿಟ್ಟರೆ ಪ್ರಾಚೀನ ಕಾಲದಿಂದಲೂ ಇಲ್ಲಿ ಏಕಚಕ್ರಾಧಿಪತ್ಯವೆಂಬುದು ಇರಲಿಲ್ಲ. ಬೇರೆ ಬೇರೆ ಪ್ರದೇಶಗಳು ಬೇರೆ ಬೇರೆ ರಾಜಕೀಯ ಆಡಳಿತಕ್ಕೆ ಒಳಪಟ್ಟಿದ್ದವು. ಸಂಸ್ಕೃತಿ, ಮತನಂಬಿಕೆ, ಭಾಷೆ, ಜನಾಂಗೀಯ ವಿಧ ಮತ್ತು ಸಾಮಾಜಿಕ ವ್ಯವಸ್ಥೆ ಹೀಗೆ ಎಲ್ಲವೂ ಬಹುಳತೆಯನ್ನು ಹೊಂದಿದ್ದವು. ಎಷ್ಟೇ ಬಗೆಯ ವೈವಿಧ್ಯತೆ ಬಹುಳತೆಯಿಂದ್ದರೂ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಮೂಲಭೂತ ಏಕತೆಯೆಂಬುದು ಅವಿಚ್ಛಿನ್ನವಾಗಿ ಹರಿದುಕೊಂಡು ಬಂದಿದೆ. ಈ ಏಕತೆಯನ್ನು ಜನರು ಪ್ರಾಚೀನ ಕಾಲದಲ್ಲೇ ಸಾಧಿಸಿಕೊಂಡಿದ್ದರು. ಈ ಆದರ್ಶಗುಣವನ್ನು ಕಾಯ್ದುಕೊಳ್ಳುವಲ್ಲಿ ಋಷಿಗಳು, ಸಾಧುಗಳು, ಸಂತರು, ತತ್ವಶಾಸ್ತ್ರವೇತ್ತರು, ರಾಜಕೀಯ ಶಾಸ್ತ್ರಜ್ಞರು ತಮ್ಮ ಬರಹ ಬೋಧನೆಗಳ ಮೂಲಕ ಜನರ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುವಂತೆ ಮಾಡುವಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ.

ಭರತ ವರ್ಷ ಎಂಬ ಹೆಸರು ಕೇವಲ ಭೌಗೋಳಿಕ ಗಡಿ ರೇಖೆಗಳನ್ನು ಸೂಚಿಸುವುದಿಲ್ಲ. ಅದು ಜಗತ್ತು ಒಂದು ಎಂಬ ವಿಚಾರವನ್ನು ಸೂಚಿಸುತ್ತದೆ. ಈ ದೇಶದ ಭೌಗೋಳಿಕ ಐಕ್ಯತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ಚಕ್ರವರ್ತಿಗಳು ಅಶ್ವಮೇಧ ಮತ್ತು ರಾಜಸೂಯ ಮುಂತಾದ ಯಜ್ಞಗಳನ್ನು ಮಾಡಿದ್ದಾರೆ. ಪ್ರಾಚೀನ ಕಾಲದಲ್ಲಿ ಹಿಂದೂ ಧರ್ಮವು ದೇಶದ ತುಂಬಾ ಹರಡಿಕೊಂಡಿತ್ತು. ಶಿವ ಮತ್ತು ವಿಷ್ಣು ಇವರುಗಳು ಆರಧಾನೆಯು ದೇಶದ ತುಂಬಾ ಹರಡಿತ್ತು ಮತ್ತು ಜನಪ್ರಿಯವಾಗಿತ್ತು. ವೇದಗಳು, ಪುರಾಣಗಳು, ಮಹಾಕಾವ್ಯಗಳು ಎಲ್ಲ ಮತಗಳಲ್ಲೂ ಗೌರವಕ್ಕೆ ಪಾತ್ರವಾಗಿದ್ದವು. ಆತ್ಮದ ಅವಿನಾಶಗುಣ, ಪುನರ್ಜನ್ಮ, ಕರ್ಮ ಮತ್ತು ಮೋಕ್ಷ ಮುಂತಾದ ಜನಪ್ರಿಯ ತತ್ವಗಳನ್ನು ಎಲ್ಲ ಮತಗಳ ಜನರೂ ನಂಬಿದ್ದರು ಮತ್ತು ಆಚರಿಸುತ್ತಿದ್ದರು. ಹೊಸದಾಗಿ ಜನ್ಮ ತಳೆದ ಬೌದ್ಧಧರ್ಮ ಮತ್ತು ಜೈನಧರ್ಮಗಳೂ ಕರ್ಮ ಮತ್ತು ಮೋಕ್ಷಗಳಲ್ಲಿ ನಂಬಿಕೆಯಿಟ್ಟಿದ್ದವು. ಪವಿತ್ರ ಋಷಿಗಳು, ಸಾಧು ಸಂತರು ದೇಶದ ಭೌಗೋಳಿಕ ಐಕ್ಯತೆಯನ್ನು ಜನಪ್ರಿಯಗೊಳಿಸಿದರು. ಬೇರೆ ಬೇರೆ ಕಾಲಘಟ್ಟಗಳಲ್ಲಿ ಪ್ರಾಕೃತ ಮತ್ತು ಸಂಸ್ಕೃತಗಳು ಜನರ ಭಾಷೆಗಳಾಗಿದ್ದವು. ಅನೇಕ ಜನಾಂಗಗಳಿಗೆ ಸೇರಿದ ಆರ್ಯರು, ಶಕರು, ಸ್ಕೀಥಿಯನ್ನರು, ಹೂಣರು, ಗೂರ್ಜರರು ಮುಂತಾದವರು ಭಾರತಕ್ಕೆ ಆಗಮಿಸಿದರು. ಆದರೆ ಅವರುಗಳ ನಂತರದ ವರ್ಷಗಳಲ್ಲಿ ತಮ್ಮ ಪ್ರತ್ಯೇಕ ಗುರುತುಗಳನ್ನು ಕಳೆದುಕೊಂಡು ಇಲ್ಲಿನ ನೆಲದವರೆ ಆಗಿಬಿಟ್ಟರು. ಭಾರತವು ಎಲ್ಲರನ್ನೂ ಸ್ವಾಗತಿಸಿತು ಮತ್ತು ತನ್ನೊಳಗೆ ಸೇರಿಸಿಕೊಂಡಿತು. ಮುಂದೆ ಭಾರತವನ್ನು ಪ್ರವೇಶಿಸಿದ ಮುಸ್ಲಿಮರು ಕೂಡ ಕಾಲಕ್ರಮೇಣ ಭಾರತೀಕರಣಗೊಂಡರು ಮತ್ತು ಈ ದೇಶದ ಜನರೆ ಆಗಿಬಿಟ್ಟರು. ಕಾಲಾನಂತರದಲ್ಲಿ ಪರಸ್ಪರ ತಿಳುವಳಿಕೆ ಮತ್ತು ಸಹೋದರ ಭಾವನೆ ಬೆಳೆಯಿತು. ಹಿಂದೂ ಮತ್ತು ಮುಸ್ಲಿಮರಲ್ಲಿ ಬೆಳೆದ ಪರಸ್ಪರ ತಿಳುವಳಿಕೆ ಹಾಗೂ ಭಾತೃತ್ವದ ಭಾವನೆಯ ಫಲವನ್ನು ಭಕ್ತಿ ಮತ್ತೂ ಸೂಫಿ ಪಂಥಗಳಲ್ಲಿ ನೋಡಬಹುದು.

***ಅವಿಚ್ಛಿನ್ನ ಸಾತತ್ಯ***

ಸರಿಸುಮಾರು ಐದು ಸಾವಿರ ವರ್ಷಗಳ ಅವಿಚ್ಛಿನ್ನಸಾತತ್ಯವು ಭಾರತೀಯ ಸಂಸ್ಕೃತಿಯ ಮತ್ತೊಂದು ವಿಶಿಷ್ಟ ಲಕ್ಷಣವಾಗಿದೆ. ಪ್ರಾಚೀನ ಕಾಲದಿಂದ ಇಂದಿನವರೆಗೆ ಅದರ

ಅವಿಚ್ಛಿನ್ನಸಾತತ್ಯವನ್ನು ಜನರ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಕಾಣಬಹುದಾಗಿದೆ. ಸಿಂಧೂ ನಾಗರಿಕತೆಯ ಕಾಲದಲ್ಲಿ ಆಚರಣೆಯಲ್ಲಿದ್ದ ದೈವರಾಧನೆ, ವಿಗ್ರಹರಾಧನೆ, ಯೋಗ, ತಾಯಿದೇವತೆ (ಮಾತೃದೇವತೆ) ಪರಿಕಲ್ಪನೆಗಳು ಭಾರತೀಯ ಸಂಸ್ಕೃತಿಯಲ್ಲಿ ಇಂದಿಗೂ ಮುಂದುವರಿದಿರುವುದನ್ನು ನೋಡಬಹುದಾಗಿದೆ. ಮಹಾಭಾರತದಲ್ಲಿ ವರ್ಣಿಸಿರುವ ಸಮಾಜದ ಚಿತ್ರವು ಇಂದಿನ ಭಾರತದ ಸಮಾಜದ ಚಿತ್ರಣಕ್ಕಿಂತ ಭಿನ್ನವಾಗೇನಿಲ್ಲ. ವಿವಾಹದ ನಿಯಮಗಳು, ಶವಸಂಸ್ಕಾರ, ಸಾಮಾಜಿಕ ಸಂಬಂಧಗಳನ್ನು ಸಂಘಟಿಸಿರುವ ರೀತಿ ಇಂದೂ ಕೂಡ ಬದಲಾಗಿಲ್ಲ. ಪ್ರಸಿದ್ಧ ಚರಿತ್ರಕಾರ ಟಾಯನ್‌ಬಿ ಪ್ರಕಾರ ತಾಮ್ರಯುಗಕ್ಕೆ ಸಂಬಂಧಿಸಿದ ಹರಪ್ಪ ಮತ್ತು ಮೊಹೊಂಜಾದಾರೋ ಸಂಸ್ಕೃತಿಯ ಪ್ರತಿರೂಪವನ್ನು ಮಧ್ಯಯುಗೀನ ಭಾರತೀಯ ರಾಜಕೀಯ ಮತ್ತು ಸಾಮಾಜಿಕ ಸಂಸ್ಥೆಗಳಲ್ಲಿ ಕಾಣಬಹುದು. ಅದೇ ಸ್ವರೂಪ ಆಧುನಿಕ ಕಾಲದಲ್ಲೂ ಮುಂದುವರಿದಿದೆ.

*ಅಹಿಂಸೆಯ ಪರಂಪರೆ*

ಭಾರತೀಯ ಸಂಸ್ಕೃತಿಯ ಮತ್ತೊಂದು ಮಹತ್ವದ ಲಕ್ಷಣವೆಂದರೆ ಅದರ ಸಹನೆ, ಸಹಬಾಳ್ವೆಯ ಪರಂಪರೆ ಭಾರತೀಯ ಸಮಾಜವು ಪ್ರಥಮತಃ ಮತ್ತು ಮೂಲಭೂತವಾಗಿ ಧಾರ್ಮಿಕವಾದುದಾಗಿದೆ. ಈ ಸಮಾಜದ ಬೌದ್ಧಿಕ ಮತ್ತು ಕಲಾತ್ಮಕ ಕ್ರಿಯೆಯಲ್ಲಿ ಧಾರ್ಮಿಕ ಭಾವನೆಯು ಹಾಸುಹೊಕ್ಕಾಗಿರುವುದನ್ನು ನೋಡಬಹುದಾಗಿದೆ. ಹಿಂದೂ ಮನಸ್ಸು ಎಲ್ಲವನ್ನು ಸ್ವೀಕರಿಸುವ ಗುಣವನ್ನು ಹೊಂದಿದೆ. ಇದನ್ನು 'ಮಾನವ-ಧರ್ಮ'-'ಮಾನವ ಸಂಸ್ಕೃತಿ' ಎಂಬ ನುಡಿಗಳಲ್ಲಿ ಕಾಣಬಹುದು. ಭಾರತೀಯ ಸಂಸ್ಕೃತಿಯ ವ್ಯಾಪ್ತಿ ವಿಶಾಲವಾದುದು. ಜಾತಿ, ಪಂಥ, ವರ್ಣ ಮತ್ತು ಲಿಂಗಗಳಿಗೆ ಸಂಬಂಧಿಸಿದ ಯಾವುದೇ ಭೇದ ಭಾವವಿಲ್ಲದಂತೆ ಅದು ಪ್ರತಿಯೊಬ್ಬರ ಅಗತ್ಯಕ್ಕೂ ಹೊಂದಿಕೊಳ್ಳುವ ಗುಣವನ್ನು ಹೊಂದಿದೆ. ಅದು ವಿಶ್ವಾತ್ಮಕವಾದುದಾಗಿದೆ ಮತ್ತು ಅದು ಎಲ್ಲರಿಗೂ ಅವಕಾಶ ನೀಡುತ್ತದೆ. ತಮ್ಮ ತಾಯಿನಾಡಿನಿಂದ ಯಹೂದಿಗಳನ್ನು, ಜೋರಾಸ್ಟ್ರಿಯನ್ನರನ್ನು ಹೊಡೆದೋಡಿಸಿದಾಗ ಅವರಿಗೆ ಭಾರತವು ನೆಲೆಯನ್ನು ಒದಗಿಸಿತು. ಸರಿಸುಮಾರು ಕ್ರಿ.ಶ. 3ನೆಯ ಶತಮಾನದಲ್ಲಿ ಕ್ರಿಶ್ಚಿಯನ್ ಧರ್ಮವು ಭಾರತವನ್ನು ಪ್ರವೇಶಿಸಿತು. ಪ್ರಾಚೀನ ಕಾಲದಿಂದಲೂ ಇಲ್ಲಿ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು ತಮ್ಮ ಪ್ರಭಾವವನ್ನು ಉತ್ತರ ಭಾರತದಲ್ಲಿ ಸ್ಥಾಪಿಸಿದರು. ಆದರೆ ಉಳಿದೆಲ್ಲ ಧರ್ಮದವರೊಂದಿಗೆ ಅವರು ಬೆರೆತು ಹೋದರು. ಹಿಂದೂ ಮತ್ತು ಮುಸ್ಲಿಮ್ ಧಾರ್ಮಿಕ ಭಾವನೆಗಳನ್ನು ಒಂದು ಮಾಡಿದ ಅನೇಕ ಸಾಧು ಸಂತರನ್ನು ಭಾರತವು ಧಾರ್ಮಿಕ ನಾಯಕರೆಂದು ಮನ್ನಿಸಿತು. ಪರಸ್ಪರ ತಿಳುವಳಿಕೆ ಮತ್ತು ವಿಶಾಲ ಮನೋಭಾವಗಳು ಭಾರತೀಯ ಸಂಸ್ಕೃತಿಯ ಪ್ರಗತಿಯಲ್ಲಿ ಮಹತ್ವದ ಪಾತ್ರವಹಿಸಿವೆ. ಈ ಮನೋಭಾವವು ಬೇರೆ ಬೇರೆ ಜನಾಂಗಕ್ಕೆ ಸೇರಿದ, ಬೇರೆ ಬೇರೆ ಭಾಷೆಗಳನ್ನಾಡುವ ಮತ್ತು ಬೇರೆ ಬೇರೆ ಧರ್ಮಗಳಿಗೆ ಸೇರಿದ ಜನರನ್ನು ಒಂದು ಮಾಡುವಲ್ಲಿ ಯಶಸ್ವಿಯಾಯಿತು. ಪ್ರಾಚೀನ ಕಾಲದಿಂದಲೂ ಭಾರತವು 'ಜೀವಿಸು, ಉಳಿದವರನ್ನು ಜೀವಿಸಲು ಬಿಡು' ಎಂಬ ನೀತಿಯನ್ನು ಅನುಸರಿಸಿಕೊಂಡು ಬಂದಿದೆ. ವಿದೇಶಿ ಸಂಸ್ಕೃತಿಯ ಒಳ್ಳೆಯ ಗುಣಗಳನ್ನು ಅಳವಡಿಸಿಕೊಳ್ಳುವಲ್ಲಿ ಅದು ಹಿಂಜರಿಯಲಿಲ್ಲ. ವಾಸ್ತವವಾಗಿ ವಿದೇಶಿ ಸಂಸ್ಕೃತಿಗಳ ಸಂಪರ್ಕದಿಂದಾಗಿಯೇ ಭಾರತೀಯ ಸಂಸ್ಕೃತಿಯು ವೈವಿಧ್ಯತೆಯಿಂದ ಕೂಡಿದ ಶ್ರೀಮಂತ ಸಂಸ್ಕೃತಿಯಾಯಿತು. ಪ್ರಾಚೀನ ಕಾಲದಲ್ಲಿ ಭಾರತ ಪ್ರವೇಶಿಸಿದ ಆರ್ಯರು, ದ್ರಾವಿಡರು ಮುಂತಾದ ಜನಾಂಗದವರು ನೀಡಿದ ಕೊಡುಗೆಯಲ್ಲದೆ ಕ್ರಿ.ಪೂ. 7ನೆಯ ಶತಮಾನದಿಂದ ಭಾರತದೊಳಗೆ ಪ್ರವೇಶಿಸಲು ತೊಡಗಿದ ಗ್ರೀಕರು, ಶಕರು, ಪಾರ್ಥಿಯನ್ನರು, ಕುಶಾನರು, ಹೂಣರು, ಗುರ್ಜರರು ಮುಂತಾದವರು ನೀಡಿದ ಕೊಡುಗೆಯಿಂದಾಗಿ ಭಾರತೀಯ ಸಂಸ್ಕೃತಿಯು 'ಸಂಯುಕ್ತ ಸಂಸ್ಕೃತಿ' ಯಾಯಿತು. ಭಾರತವು ಎಲ್ಲರಿಗೂ ಸ್ವಾಗತ ಬಯಸಿತು. ಅವರ ಸಂಸ್ಕೃತಿಯಲ್ಲಿದ್ದ ಉತ್ಕೃಷ್ಟ ಗುಣಗಳೆಲ್ಲವನ್ನು ಅದು ತನ್ನದಾಗಿಸಿಕೊಂಡಿತು. ಆರ್ಯರು ಮತ್ತು ದ್ರಾವಿಡರ ಸಂಸ್ಕೃತಿಗಳ ಬೆಸುಗೆಯು ಭಾರತೀಯ ಅಡಿಪಾಯವಾಗಿದೆ. ಭಾರತೀಯ

ಸಂಸ್ಕೃತಿಯ ಎಲ್ಲವನ್ನೂ ಐಕ್ಯಗೊಳಿಸಿಕೊಳ್ಳುವ ಗುಣದಿಂದಾಗಿ ವಿದೇಶದಿಂದ ಬಂದ ಶಕರು, ಸೈಥಿಯನ್ನರು ಮತ್ತು ಹೂಣರು ಭಾರತೀಕರಣಕ್ಕೆ ಒಳಗಾದರು ಮತ್ತು ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಂಡರು. ಇಂತಹ ಐಕ್ಯಗೊಳಿಸಿಕೊಳ್ಳುವ ಗುಣಕ್ಕೆ ಸಾಕ್ಷಿಯಾಗಿ ಭಾರತೀಯ ಕಲೆ ಇಂದು ನಮ್ಮ ಮುಂದಿದೆ. ಗಾಂಧಾರಶಿಲ್ಪಕಲೆಯು ನಿಶ್ಚಿತವಾಗಿ ಗ್ರೀಕ್ ಕಲೆಯ ಪ್ರಭಾವದಿಂದ ರೂಪ ತಳೆದಿದೆ. ಮೊಗಲರು 16ನೆಯ ಶತಮಾನದಲ್ಲಿ ಪರ್ಷಿಯನ್ ಕಲೆ ಮತ್ತು ಚಿತ್ರಕಲೆಯನ್ನು ಇಲ್ಲಿ ಪ್ರಚುರಪಡಿಸಿದರು. ಅನತಿ ಕಾಲದಲ್ಲಿ ಭಾರತೀಯ ಚಿತ್ರಕಲಾವಿದರು ಬೇರೆ ಬೇರೆ ಕಲಾ ಪ್ರಕಾರಗಳನ್ನು ಮಿಶ್ರಣ ಮಾಡಿ ತಮ್ಮದೇ ಆದ ಭಾರತೀಯ ಪರ್ಷಿಯನ್ ಕಲೆಯನ್ನು ಬೆಳೆಸಿ ಭಾರತೀಯ ಚಿತ್ರಕಲಾ ಪರಂಪರೆಯನ್ನು ಶ್ರೀಮಂತಗೊಳಿಸಿದರು.

ವಿದೇಶಿ ಪ್ರಭಾವವನ್ನು ತನ್ನೊಳಗೆ ಅರಗಿಸಿಕೊಳ್ಳುವ ಭಾರತೀಯ ಸಂಸ್ಕೃತಿಯ ಗುಣವನ್ನು ಆಧುನಿಕ ಕಾಲದಲ್ಲೂ ನಾವು ನೋಡಬಹುದಾಗಿದೆ. ಆಧುನಿಕ ಕಾಲದಲ್ಲಿ ಭಾರತವನ್ನು ಪ್ರವೇಶಿಸಿದ ಪಾಶ್ಚಿಮಾತ್ಯ ವಿಚಾರಗಳು ಮತ್ತು ಪಾಶ್ಚಿಮಾತ್ಯ ನಾಗರಿಕತೆಗಳನ್ನು ತನ್ನದಾಗಿಸಿಕೊಂಡು ಭಾರತವು ೧೯ನೇಯ ಶತಮಾನದಲ್ಲಿ ಪುನರುಜ್ಜೀವನ ಚಳುವಳಿಯ ಮೂಲಕ ರಾಷ್ಟ್ರೀಯ ಆರ್ಥಿಕತೆಯನ್ನು ಸಾಮಾಜಿಕ ವ್ಯವಸ್ಥೆಯನ್ನು ಕಟ್ಟಿಕೊಳ್ಳುವಲ್ಲಿ ಯಶಸ್ವಿಯಾಯಿತು. ಎಲ್ಲವನ್ನು ತೆರೆದ ಹೃದಯದಿಂದ ಸ್ವೀಕರಿಸಿಕೊಳ್ಳುವ ಮತ್ತು ಐಕ್ಯಗೊಳಿಸಿಕೊಳ್ಳುವ ಗುಣದಿಂದಾಗಿಯೇ ಅದಕ್ಕೆ ನಿರಂತರತೆ ಸಾಧ್ಯವಾಗಿದೆ. ಇತಿಹಾಸಜ್ಞನೊಬ್ಬ ಹೇಳಿರುವಂತೆ ತನ್ನ ಮಕ್ಕಳನ್ನು ತನ್ನೊಳಗೆ ಐಕ್ಯಗೊಳಿಸಿಕೊಳ್ಳುವ ಮತ್ತು ತನ್ನ ವಿರುದ್ಧವೇ ಸಿಡಿದೆದ್ದ ತನ್ನ ಮಕ್ಕಳನ್ನು ಸಮಾಧಾನ ಪಡಿಸಿ ಅವರನ್ನೂ ತನ್ನೊಳಗೆ ಇಟ್ಟುಕೊಳ್ಳುವ ಹಿಂದೂ ಧರ್ಮದ ಗುಣಕ್ಕೆ ಭಾರತೀಯ ಚರಿತ್ರೆಯಲ್ಲಿ ಅನೇಕ ನಿದರ್ಶನಗಳನ್ನು ನೀಡಬಹುದು. ಈ ಐಕ್ಯಗೊಳಿಸಿಕೊಳ್ಳುವ ಭಾರತೀಯ ಸಂಸ್ಕೃತಿಯ ಗುಣವು ಇಂದಿಗೂ ಜೀವಂತವಾಗಿ ಮುಂದುವರಿದಿದೆ. ಇದು ಭಾರತೀಯ ಸಂಸ್ಕೃತಿಯ ಮೂಲ ಅಡಿಪಾಯ. ಹುಮಾಯುನ್ ಕಬೀರ್ ಹೇಳಿರುವಂತೆ ಭಾರತದ ಯಾವುದೇ ಸಂಗತಿಯನ್ನು ತೆಗೆದುಕೊಂಡರೂ, ಅದರ ತತ್ವಶಾಸ್ತ್ರ, ಕಲೆ, ರಾಜಕೀಯ ಸಂಸ್ಥೆ, ಸಾಮಾಜಿಕ ಪದ್ಧತಿ ಹೀಗೆ ಯಾವುದನ್ನು ತೆಗೆದುಕೊಂಡರೂ, ಅದು ವಿವಿಧ ಪ್ರಕಾರ ಮತ್ತು ಪ್ರಭೇದಗಳ ಒಂದು ಸಂಯುಕ್ತ ರೂಪವೇ ಆಗಿರುತ್ತದೆ.

***ಅಹಿಂಸೆ ಮತ್ತು ಸತ್ಯ***

ಶಾಂತಿ-ಅಹಿಂಸೆ-ಸತ್ಯ (ಸತ್ಯಂ, ಶಿವಂ, ಸುಂದರಂ, ಸಚ್ಚಿದಾನಂದ) ಇವುಗಳು ಭಾರತೀಯ ಸಂಸ್ಕೃತಿಯ ಸಾರಸತ್ವಗುಣಗಳಾಗಿವೆ. ವೇದ, ಉಪನಿಷತ್ತುಗಳು ಮತ್ತು ಮಹಾಕಾವ್ಯಗಳು ಅಹಿಂಸೆ, ಶಾಂತಿ ಮತ್ತು ಸತ್ಯಗಳನ್ನು ಭಾರತವು ಆಚರಿಸಿಕೊಂಡು ಅನುಸರಿಸಿಕೊಂಡು ಬರುತ್ತಿರುವುದಕ್ಕೆ ಪುರಾವೆಯೊದಗಿಸುತ್ತದೆ. ಬೌದ್ಧ ಧರ್ಮ ಮತ್ತು ಜೈನ ಧರ್ಮಗಳು ಅಹಿಂಸೆಗೆ ಮಹತ್ವದ ಸ್ಥಾನ ನೀಡಿದವು. ಮೌರ್ಯ ಚಕ್ರವರ್ತಿ ಅಶೋಕನ ರಾಜ್ಯಾಡಳಿತವು ವಿಶ್ವದ ಚರಿತ್ರೆಯಲ್ಲಿ ಒಂದು ಅಸಮಾನ ಪ್ರಸಂಗವಾಗಿ ಇಂದಿಗೂ ಮೆರೆಯುತ್ತಿದೆ. ಅವನು ಆಕ್ರಮಣಕಾರಿ ಯುದ್ಧಗಳನ್ನು ನಡೆಸಲಿಲ್ಲ. ಮನುಷ್ಯ ಮತ್ತು ಪ್ರಾಣಿಗಳಿಗೆ ಒಳಿತನ್ನು ಉಂಟುಮಾಡುವ ಧರ್ಮವನ್ನು ಅವನು ಅನುಸರಿಸಿದ. ಸೂಫಿ ಸಂತರು ಸತ್ಯ, ಶಾಂತಿ ಮತ್ತು ಅಹಿಂಸೆಯ ಆದರ್ಶಗಳನ್ನು ಪ್ರತಿಪಾದಿಸಿದರು. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ಸತ್ಯ, ಅಹಿಂಸೆ ಮತ್ತು ಶಾಂತಿಗಳೆಂಬ ಶಸ್ತ್ರಗಳನ್ನು ಯಶಸ್ವಿಯಾಗಿ ಬಳಸಿ ದೇಶಕ್ಕೆ ಸ್ವಾತಂತ್ರವನ್ನು ಮಹಾತ್ಮಗಾಂಧಿ ತಂದು ಕೊಟ್ಟರು.

ಭಾರತೀಯ ಸಂಸ್ಕತಿಯ ಮತ್ತೊಂದು ಮಹತ್ವದ ಲಕ್ಷಣವೆಂದರೆ ಅಲ್ಲಿನ ಸಂಗೀತ, ಸಾಹಿತ್ಯ, ವಾಸ್ತು ಮತ್ತು ಕಲೆಗಳಲ್ಲಿನ ಅಸಾಧಾರಣ ಸೌಂದರ್ಯ. ತತ್ವಶಾಸ್ತ್ರ, ಸಂಗೀತ, ಲಲಿತಕಲೆ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದಂತೆ ವಿಶ್ವಕ್ಕೆ ಭಾರತದ ಕೊಡುಗೆಯ ಅಸಮಾನವಾದುದು. ಭಾರತೀಯ

ಸಂಸ್ಕೃತಿಯ ಆದರ್ಶಗಳು ಮತ್ತು ಆಕಾಂಕ್ಷೆಗಳು ಅವುಗಳಲ್ಲಿ ಧ್ವನಿಪಡೆದುಕೊಂಡಿರುವುದನ್ನು ಗುರುತಿಸಬಹುದಾಗಿದೆ. ಕಲೆಯನ್ನು ಸಂಸ್ಕೃತಿಯ ಸೃಜನಶೀಲ ಅಭಿವ್ಯಕ್ತಿಯೆಂದು ಹೇಳಲಾಗಿದೆ. ಮಾನವ ಸಮುದಾಯವು ಸಾಧಿಸಿಕೊಂಡು ಮಹೋನ್ನತ ಸಾಧನೆಗೆ ಭಾರತೀಯ ಕಲೆ ಸಾಕ್ಷಿಯಾಗಿದೆ.

ಭಾರತೀಯ ಸಂಸ್ಕೃತಿಯನ್ನು ದೇವಾಲಯಗಳ ಕಲೆ, ವಾಸ್ತು, ಶಿಲ್ಪ, ಚಿತ್ರ ಮತ್ತು ಸಂಗೀತಗಳಲ್ಲಿ ನೋಡಬಹುದು. ಅವೆಲ್ಲವೂ ಸೃಜನಶೀಲ ಅಭಿವ್ಯಕ್ತಿಯಾಗಿವೆ. ಭಾರತದ ಸಾಂಸ್ಕೃತಿಕ ವೈವಿಧ್ಯತೆಗಳ ಅಭಿವ್ಯಕ್ತಿಯನ್ನು ಶಾಸ್ತ್ರೀಯ ಹಾಗೂ ಜಾನಪದ ನೃತ್ಯಗಳಲ್ಲಿ ನೋಡಬಹುದು. ಅದು ಶಾಸ್ತ್ರೀಯ ನೃತ್ಯವಾಗಲಿ ಅಥವಾ ಲೋಕ ನೃತ್ಯವಾಗಲಿ, ಅವುಗಳಲ್ಲಿ ಭಾವ, ರಾಗ, ಲಯ, ತಾಳ ಮತ್ತು ಉಡುಪುಗಳು ವೈವಿಧ್ಯಮಯವಾಗಿರುತ್ತದೆ. ಭರತನಾಟ್ಯ, ಕಥಕ್ಕಳಿ, ಒಡಿಸ್ಸಿ, ಮಣಿಪುರಿ, ಕೂಚುಪುಡಿ ಮುಂತಾದವು ಶಾಸ್ತ್ರೀಯ ನೃತ್ಯದ ವಿವಿಧ ಪ್ರಕಾರಗಳಾಗಿವೆ. ಭಾರತೀಯರ ಕಲಾಪ್ರಜ್ಞೆ ಮತ್ತು ಜೀವನಶೈಲಿಯ ಅಭಿವ್ಯಕ್ತಿಯನ್ನು ಕಥಾವಸ್ತುವಿಗೆ ದೇಶಾದ್ಯಂತ ಗೌರವವಿದೆ. ಅದು ನಾಟಕ, ಸಂಗೀತ, ನೃತ್ಯ, ಸಾಹಿತ್ಯಗಳಲ್ಲಿ ಯತೇಚ್ಛವಾಗಿ ಅಭಿವ್ಯಕ್ತಗೊಂಡಿದೆ.

## 32.5 ಪರಿಸರದೊಂದಿಗೆ ಸಾಮರಸ್ಯ

ಭಾರತೀಯ ಸಂಸ್ಕೃತಿಯ ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ ಅದು ಪರಿಸರದೊಂದಿಗೆ ಕಟ್ಟಿಕೊಂಡಿರುವ ಸಾಮರಸ್ಯ ಸ್ವರೂಪದ ಸಂಬಂಧ ಮತ್ತು ವಿಶ್ವದಲ್ಲಿ ಇತರರೊಂದಿಗೆ ಬೆಳೆಸಿಕೊಂಡಿರುವ ಸಂಬಂಧ. ಅಲ್ಲಿ ಎಲ್ಲಿ ಜೀವಿಗಳಿಗೂ ಗೌರವ ನೀಡಲಾಗಿದೆ. ಪ್ರಾಣಿಗಳು, ಪಕ್ಷಿಗಳು, ಮರಗಳು, ಪರ್ವತಗಳು, ನದಿಗಳು ಹೀಗೆ ಎಲ್ಲವೂ ಹಿಂದೂಗಳ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಇಲ್ಲಿ ಸಮಷ್ಟಿ ಹಿತಕ್ಕೆ ಸ್ಥಾನವಿದೆ, ವಿನಾ ವ್ಯಕ್ತಿಗತ ಹಿತಕ್ಕಲ್ಲ. ಕುತೂಹಲದ ಸಂಗತಿಯೆಂದರೆ ಭಾರತದ ಅನೇಕ ದೇವಾನುದೇವತೆಗಳು ಪ್ರಾಣಿಗಳ ಜೊತೆ ಸಂಬಂಧ ಹೊಂದಿವೆ. ನಂದಿಯನ್ನು ವಾಹನವನ್ನಾಗಿ ಮಾಡಿಕೊಂಡಿರುವ ಶಿವನನ್ನು ಪಶುಗಳ ಪತಿ ಪಶುಪತಿಯೆಂದು ಕರೆಯಲಾಗಿದೆ. ಅದರಂತೆ ವಿಷ್ಣುವಿಗೆ ಆದಿಶೇಷ ಮತ್ತು ಗರುಡ, ಬ್ರಹ್ಮನಿಗೆ ಹಂಸ, ಇಂದ್ರನಿಗೆ ಆನೆ, ಸೂರ್ಯನಿಗೆ ಕುದುರೆ, ದುರ್ಗಿಗೆ ಸಿಂಹ, ಗಣೇಶನಿಗೆ ಇಲಿ, ಮುರುಗನಿಗೆ ನವಿಲು ವಾಹನಗಳಾಗಿವೆ. ವಿಷ್ಣುವಿನ ಹತ್ತು ಅವತಾರಗಳಲ್ಲಿ ಮೂರು ಮತ್ಸ್ಯ, ಕೂರ್ಮ ಮತ್ತು ವರಾಹಗಳು ಪ್ರಾಣಿರೂಪದವುಗಳಾಗಿವೆ. ನರಸಿಂಹ ಅವತಾರವು ಅರ್ಧ ಮನುಷ್ಯ ಮತ್ತು ಅರ್ಧ ಸಿಂಹನ ಅವತಾರವನ್ನು ಹೊಂದಿದೆ. ಬುದ್ಧನ ಪೂರ್ವಜನ್ಮವು ಅನೇಕ ಪ್ರಾಣಿಗಳ ರೂಪದಲ್ಲಿದ್ದವು ಎನ್ನಲಾಗಿದೆ. ಹಿಂದೂಗಳು ಪ್ರಾಣಿಗಳಲ್ಲು ದೈವತ್ವವನ್ನು ಕಾಣುತ್ತಾರೆ. ದೇವತೆಗಳು ಮತ್ತು ಪ್ರಾಣಿಗಳ ನಡುವಿನ ಸಂಬಂಧವು ಭಾರತೀಯ ಸಂಸ್ಕತಿಯು ಪರಿಸರದ ಜೊತೆ ರೂಪಿಸಿಕೊಂಡಿರುವ ಆರೋಗ್ಯಕಾರಿ ಸಂಬಂಧಕ್ಕೆ ಸಂಕೇತವಾಗಿದೆ.

ಪರ್ವತಶ್ರೇಣಿಗಳು ಹಾಗೂ ನದಿಗಳು ಬಗ್ಗೆಯೂ ಇದೇ ಮಾತು ಹೇಳಬಹುದಾಗಿದೆ. ಅವು ಭಾರತೀಯರ ಜನಜೀವನದಲ್ಲಿ ಮಹತ್ವದ ಪಾತ್ರ ನಿರ್ವಹಿಸಿವೆ. ಪರ್ವತಗಳಲ್ಲಿ ಹಿಮಾಲಯವು ಭಾರತೀಯರ ಬದುಕನ್ನು ಒಂದು ನಿರ್ದಿಷ್ಟ ರೂಪದಲ್ಲಿ ಕಟ್ಟುವಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಹಿಂದೂಸ್ಥಾನದ ಜನರ ರಾಜಕೀಯ ಜೀವನವನ್ನು ರೂಪಿಸುವುದರ ಜೊತೆಗೆ ಅದು ಅಲ್ಲಿನ ಧರ್ಮ, ಪುರಾಣ, ಕಲೆ, ಸಾಹಿತ್ಯ ಮುಂತಾದವುಗಳನ್ನು ರೂಪಿಸುವುದರಲ್ಲಿಯೂ ಅದರ ಪಾತ್ರವನ್ನು ಗುರುತಿಸಬಹುದಾಗಿದೆ. ದೇವಾನುದೇವತೆಗಳ ಆವಾಸ ಸ್ಥಾನಗಳೆಂದು ಪರ್ವತಗಳನ್ನು ಗುರುತಿಸಲಾಗಿದೆ. ಆದ್ದರಿಂದ ಅವು ಭಾರತೀಯರಿಗೆ ಪವಿತ್ರ. ಅನೇಕ ಪವಿತ್ರ ತೀರ್ಥ ಸ್ಥಾನಗಳಾದ ಅಮರನಾಥ, ಕೇದಾರನಾಥ, ಬದರಿನಾಥ ಮತ್ತು ಕೈಲಾಸಗಳು ಪರ್ವತಗಳಲ್ಲಿ ನೆಲೆಗೊಂಡಿವೆ. ಗೌರಿಶಂಕರ ಶಿಖರವನ್ನು ಪವಿತ್ರವೆಂದು ಪರಿಗಣಿಸಲಾಗಿದೆ. ಅದೇ ರೀತಿ ಹಿಂದೂಗಳು ತಿರುಪತಿ,

ಶ್ರೀಶೈಲ, ಅಣ್ಣಾಮಲೈ, ಶಬರಿಮಲೈ ಮತ್ತು ಅರುಣಾದ್ರಿ ಪರ್ವತಗಳನ್ನು ಪವಿತ್ರವೆಂದು ನಂಬಿದ್ದಾರೆ. ನದಿಗಳು ಕೂಡ ಪವಿತ್ರವೆಂಬ ಕೀರ್ತಿಗೆ ಪಾತ್ರವಾಗಿದೆ. ಪವಿತ್ರ ನದಿಗಳಲ್ಲಿ ಮುಳುಗಿ ಸ್ನಾನ ಮಾಡುವುದರಿಂದ ಪಾಪಗಳೆಲ್ಲ ನಾಶವಾಗಿ ಹೋಗುತ್ತವೆ ಎಂದು ಜನರು ನಂಬಿದ್ದಾರೆ. ಪವಿತ್ರ ಗಂಗಾನದಿಯು ಹಿಂದೂಗಳ ಜೀವನದಲ್ಲಿ ಅಂತಹ ಮಹತ್ವದ ಸ್ಥಾನ ಪಡೆದಿದೆ. ಗಂಗಾ ನದಿಯಲ್ಲಿ ತೀರ್ಥಸ್ನಾನ ಮಾಡಬೇಕೆಂದು ಪ್ರತಿಯೊಬ್ಬ ಹಿಂದೂವಿನ ಆಶಯವಾಗಿದೆ. ರಾಜಕೀಯವಾಗಿ ಗಂಗಾ ಮತ್ತು ಜಮುನಾ ನದಿಗಳು ಸಾಮ್ರಾಜ್ಯಶಾಹಿಯ ಸಂಕೇತಗಳಾಗಿವೆ. ಗಂಗಾನದಿ ಮುಖಜ ಭೂಮಿಯ ಮೇಲೆ ಅಧಿಪತ್ಯ ಸ್ಥಾಪಿಸುವುದು ಪ್ರತಿಯೊಬ್ಬ ಹಿಂದೂ ಚಕ್ರವರ್ತಿಯ ಕನಸಾಗಿತ್ತು. ಆರ್ಥಿಕವಾಗಿ ಗಂಗಾ ಯಮುನಾ ಮಧ್ಯದ ಬಯಲು ಪ್ರದೇಶವು ಸಮೃದ್ಧತೆಯ ಸಂಕೇತವಾಗಿದೆ. ಎರಡೂ ನದಿಗಳಿಂದ ನೀರನ್ನು ಪಡೆಯುವ ಉತ್ತರ ಬಯಲು ಪ್ರದೇಶವು ಅತ್ಯಂತ ಫಲವತ್ತಾಗಿದೆ. ಅದು ಸಂಪನ್ಮೂಲಗಳ ಗಣಿಯಾಗಿದೆ. ಸಾಮ್ರಾಜ್ಯಶಾಹಿಯ ಮತ್ತು ಆರ್ಥಿಕ ಸಮೃದ್ಧತೆಯ ಸಂಕೇತವಾಗಿರುವ ಎರಡೂ ನದಿಗಳ ಎಲ್ಲ ಕಾಲದಲ್ಲೂ ಮಹತ್ವದ ಸ್ಥಾನ ಪಡೆದಿದ್ದವು. ಅವು ಕಲೆಯ ಕಲಾವಿದರ ಸ್ಫೂರ್ತಿಯ ಬಂಧುವಾಗಿದೆ. ಗುಪ್ತರ ಕಾಲಕ್ಕೆ ಸೇರಿದ ದೇವಾಲಯಗಳ ಬಾಗಿಲುಗಳ ಮೇಲೆ ಅದಕ್ಕೆ ಸಂಬಂಧಿಸಿದ ಕೆತ್ತನೆಗಳನ್ನು ನೋಡಬಹುದಾಗಿದೆ.

ಹಿಂದೂಗಳ ಧಾರ್ಮಿಕ ಜೀವನದಲ್ಲಿ ಮರಗಳೂ ಪವಿತ್ರಸ್ಥಾನ ಪಡೆದುಕೊಂಡಿವೆ. ಅರಳಿ ಮತ್ತು ಆಲದ ಮರಗಳನ್ನು ಇಂದಿಗೂ ಜನರು ಪೂಜ್ಯ ಭಾವನೆಯಿಂದ ಗೌರವಿಸುತ್ತಾರೆ. ಸಂಕ್ಷಿಪ್ತದಲ್ಲಿ ಹೇಳುವುದಾದರೆ ಭಾರತೀಯ ಸಂಸ್ಕೃತಿಯು ತನ್ನ ಸತ್ವವನ್ನೆಲ್ಲ ಪ್ರಕೃತಿಯಿಂದ ಪಡೆದುಕೊಂಡಿದೆ.

## 32.6 ಉಪಸಂಹಾರ

ಉತ್ತರ ಭಾರತ ಸಂಸ್ಕೃತಿಯು ಜಡತ್ವದಿಂದ ಕೂಡಿಲ್ಲ. ಎಲ್ಲ ಪರಿಸರ ಭಾಷೆಯ ಮತ್ತು ಜನಾಂಗಗಳ ಜೀವನ ಸಂಸ್ಕಾರದ ಮೌಲ್ಯಗಳು ಇಲ್ಲಿ ಸಾಕಾರಗೊಂಡಿವೆ. ಉತ್ತರ ಭಾರತ ಸಂಸ್ಕೃತಿಯಲ್ಲಿ ಪೌರಾತ್ಯ ಮತ್ತು ಪಶ್ಚಿಮ ಜಗತ್ತಿನ ಸಕಾರಾತ್ಮಕ ವಿಚಾರಗಳೂ ಮಿಂಚಿವೆ. ಪ್ರಕೃತಿ ಪರಿಸರದ ಎಲ್ಲಾ ಒಳ್ಳೆಯ ಅಂಶಗಳನ್ನು ವ್ಯಕ್ತಗೊಳಿಸಿದೆ. ಜನರ ಆಚಾರಗಳು, ವಿಚಾರಗಳು, ಧರ್ಮ, ಸಂಪ್ರದಾಯಗಳು, ಸಾಮಾಜಿಕ, ಸಂಸ್ಕಾರದ ವಿಧಿ-ವಿಧಾನಗಳು, ಭಾಷೆ, ಆಹಾರ, ಉಡುಪು, ಶೃಂಗಾರ, ಕಲೆ, ವಿಜ್ಞಾನ, ಆಧ್ಯಾತ್ಮ ಚಿಂತನೆ, ವಾಸ್ತುಶಿಲ್ಪ, ಸಾಹಿತ್ಯ, ಚಿತ್ರಕಲೆ, ಸಂಗೀತ, ತತ್ವ ಚಿಂತನೆ, ಕರಕುಶಲ ಪರಿಜ್ಞಾನ, ನಂಬಿಕೆಗಳ ಮೇಲೆ ಉತ್ತರ ಸಂಸ್ಕೃತಿ ಬೆಳೆದು ನಿಂತಿದೆ. ನಾಗರೀಕತೆ ಬೆಳೆದ ಹಾಗೆ, ಇಲ್ಲಿನ ಸಂಸ್ಕೃತಿ ಹೊಸತನ ಪಡೆದು ಕಾಲ ಬದಲಾವಣೆಗೆ ಸ್ಪಂದಿಸುತ್ತಾ ಸಾಗಿದೆ. ನಿರಂತರ ಚಲನೆ ಈ ಸಂಸ್ಕೃತಿಯ ಲಕ್ಷಣ, ಜಗತ್ತಿನ ಒಳಿತನ್ನು ಸ್ವಾಗತಿಸುತ್ತಾ, ನಾವು ಬದುಕೋಣ, ಇತರರೂ ಬದುಕಲಿ, ಎನ್ನುವ ತತ್ವವನ್ನು ಈ ಸಂಸ್ಕೃತಿ ಸಾರಿದೆ. ಮಾನವ ಮತ್ತು ಪ್ರಕೃತಿಗಳ ನಡುವಿನ ಸಾಮರಸ್ಯವು ಪ್ರಮುಖ ಲಕ್ಷಣವಾಗಿದೆ. ಭಾರತೀಯ ಸಂಸ್ಕೃತಿಯು ಜೀವಂತ ಸಂಸ್ಕೃತಿಯಾಗಿದೆ. ಅದು ಮೂಲಭೂತ ಮೌಲ್ಯಗಳಾದ ಸಮನ್ವಯ, ಸತ್ಯ, ಜಿಜ್ಞಾಸೆ ಮತ್ತು ಅಹಿಂಸೆಯನ್ನು ಒಳಗೊಂಡಿದೆ. ತನ್ನೊಳಗಿರುವ ಆತ್ಮಜ್ಞಾನವನ್ನು ಪಡೆದುಕೊಳ್ಳಬೇಕಾದುದೇ ಭಾರತದ ಮುಂದಿರುವ ಸವಾಲು, ತನ್ನ ಸಾಂಸ್ಕೃತಿಕ ಆಧ್ಯಾತ್ಮಿಕ ಪರಂಪರೆಯನ್ನು ಅದು ವಿಸ್ತರಿಸಿಕೊಳ್ಳಬೇಕಾಗಿದೆ. ಈಗಾಗಲೇ ತನ್ನ ನಾಡಿಗೆ ಸೇರಿದ ಋಷಿಗಳು, ವಿದ್ವಾಂಸರು ಕಟ್ಟಿರುವ ಘನತರವಾದ ಸಂಸ್ಕೃತಿಯ ಬಗ್ಗೆ ಔದಾಸೀನ್ಯ ತಾಳಬಾರದು. ಅವರು ಹಾಕಿಕೊಟ್ಟಿರುವ ದಾರಿಯಲ್ಲಿ ಭಾರತೀಯ ಸಾಗಬೇಕಾಗಿದೆ.

## 32.7 ಮಾದರಿ ಪ್ರಶ್ನೆಗಳು

1. ಉತ್ತರ ಭಾರತ ಸಂಸ್ಕೃತಿಯ ಮುಖ್ಯ ಲಕ್ಷಣಗಳನ್ನು ಪರೀಕ್ಷಿಸಿರಿ.
2. ಸಂಸ್ಕೃತಿ ಪದದ ಅರ್ಥವನ್ನು ವಿವರಿಸಿ, ಉತ್ತರ ಭಾರತ ಸಂಸ್ಕೃತಿಯ ಪರಿಕಲ್ಪನೆಯನ್ನು ತಿಳಿಸಿರಿ.

## 32.8 ಅಧ್ಯಯನಕ್ಕೆ ಪುಸ್ತಕಗಳು


1. Basham A.L. : **The Wonder that was India**
2. Lunia, B.N. : **Evolution of Indian Culture**
3. Panikkar .S. : **Essential Features of Indian Culture**
4. Rangaswamy .L.V. : **Studies in Indian Culture**

## ಟಿಪ್ಪಣಿಗಳು

# ಘಟಕ - 33

## ಆಕರಗಳು : ಪುರಾತತ್ವ

***ರಚನೆ***

**33.0** ಉದ್ದೇಶಗಳು

**33.1** ಪ್ರಸ್ತಾವನೆ

**33.2** ಪುರಾತತ್ವ ಆಕರಗಳು

- **33.2.1** ಉತ್ಖನನ
- **33.2.2** ಶಾಸನಶಾಸ್ತ್ರ
- **33.2.3** ನ್ಯೂನತೆಗಳು
- **33.2.4** ನಾಣ್ಯಶಾಸ್ತ್ರ
- **33.2.5** ಸ್ಮಾರಕಗಳು

**33.3** ಸಾರಾಂಶ

**33.4** ಮಾದರಿ ಪ್ರಶ್ನೆಗಳು

**33.5** ಅಭ್ಯಾಸಕ್ಕೆ ಪುಸ್ತಕಗಳು

## 33.0 ಉದ್ದೇಶಗಳು

ಈ ಘಟಕದ ಅಭ್ಯಾಸದಿಂದ

1. "ಸಾಹಿತ್ಯಿಕ ಆಕರಗಳಿಗೆ ಸಂಬಂಧಿಸಿದಂತೆ ಸಂದಿಗ್ಧತೆಗೆ ಇತಿಹಾಸಜ್ಞ ಒಳಗಾದಾಗ, ಅವನ ರಕ್ಷಣೆಗೆ ಬರುವ ಆಕರವೆಂದರೆ ಪುರಾತತ್ವ" ಎಂಬ ಹೇಳಿಕೆಯನ್ನು ಪರೀಕ್ಷಿಸುವುದು.
2. ಲಿಖಿತ ದಾಖಲೆಗಳು ಅಲಭ್ಯವಾದಾಗ ಪ್ರಾಚೀನ ಭಾರತೀಯ ಇತಿಹಾಸವನ್ನು ಪುನಾರಚಿಸಲು ಭೂ ಉತ್ಖನನಗಳು ಇತಿಹಾಸಜ್ಞನ ನೆರವಿಗೆ ಹೇಗೆ ಬರುತ್ತವೆ ಎನ್ನುವುದನ್ನು ಚರ್ಚಿಸುವುದು.
3. 'ಚರಿತ್ರೆಯ ಆಕರ ಸಾಮಾಗ್ರಿಯಾಗಿ ಶಾಸನಗಳು ಮತ್ತು ನಾಣ್ಯಗಳು ತುಂಬಾ ಮಹತ್ವವಾದವುಗಳು' ಎಂಬುದನ್ನು ಪರಾಮರ್ಶಿಸಲು ಸಾಧ್ಯವಾಗುತ್ತದೆ.

## 33.1 ಪ್ರಸ್ತಾವನೆ

ಉತ್ಖನನದಿಂದಾಗಿ ಲಭ್ಯವಾಗುವ ಶಾಸನಗಳು, ನಾಣ್ಯಗಳು, ಸ್ಮಾರಕಗಳು, ಪ್ರಾಚೀನ ಕಟ್ಟಡಗಳು, ಮಡಿಕೆ-ಮೂಳೆ ತುಂಡುಗಳು, ಕಲ್ಲು-ಲೋಹದ ತುಂಡುಗಳು ಮುಂತಾದವುಗಳ ಒಟ್ಟು ಗುಂಪಿಗೆ ಪುರಾತತ್ವ ಆಕರಗಳು ಎಂದು ಕರೆಯಲಾಗಿದೆ. ಚರಿತ್ರೆಗೆ ಪೂರಕವಾಗಬಹುದಾದಂತಹ ಗತಕಾಲದ ಸಾಮಗ್ರಿಗಳ ಬಗ್ಗೆ ಅಧ್ಯಯನ ನಡೆಸುವ ಶಾಸ್ತ್ರವೇ ಪುರಾತತ್ವ ಶಾಸ್ತ್ರ. ಪುರಾತತ್ವ ಸಾಮಗ್ರಿಗಳನ್ನು ಅಪಾರ ಪ್ರಮಾಣದಲ್ಲಿ ಹೊಂದಿರುವ ಭಾರತವು ನಿಜವಾಗಿ ಈ ವಿಷಯದಲ್ಲಿ ಅದೃಷ್ಟಶಾಲಿ ದೇಶವಾಗಿದೆ. ಬಹಳ ಮುಖ್ಯವಾದ ಪುರಾತತ್ವ ಆಕರಗಳನ್ನು ಕೆಳಕಂಡಂತೆ ವರ್ಗೀಕರಿಸಬಹುದು.

1. ಶಾಸನಶಾಸ್ತ್ರ ಅಥವಾ ಶಾಸನಗಳು
2. ನಾಣ್ಯಶಾಸ್ತ್ರ ಅಥವಾ ನಾಣ್ಯಗಳು
3. ಸ್ಮಾರಕಗಳು ಅಥವಾ ಪ್ರಾಚೀನ ಕಟ್ಟಡಗಳು
4. ಮಡಿಕೆಗಳು ಮತ್ತು ಕಲ್ಲಿನ ಸಾಧನಗಳು, ಉಪಕರಣಗಳು

ಈ ಆಕರಗಳು ಭಾರತದ ಇತಿಹಾಸಪೂರ್ವ ನಾಗರಿಕತೆ ಮತ್ತು ಸಂಸ್ಕೃತಿ ಕುರಿತಂತೆ ಅಮೂಲ್ಯ ಮಾಹಿತಿ ಒದಗಿಸುತ್ತದೆ.

## 33.2 ಪುರಾತತ್ವ ಆಕರಗಳು

ಕ್ರಿ.ಶ. ೧೭೮೪ ರಲ್ಲಿ ಸರ್ ವಿಲಿಯಂ ಜೋನ್ಸ್‌ರು ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದಾಗ, ಭಾರತದಲ್ಲಿ ಪುರಾತತ್ವ ಆಕರಗಳನ್ನು ಅಭ್ಯಾಸ ಮಾಡುವ ಮತ್ತು ಅವುಗಳ ಸಹಾಯದಿಂದ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯನ್ನು ಅರ್ಥೈಸುವ ಪ್ರಕ್ರಿಯೆಗೆ ಚಾಲನೆ ದೊರಕಿತು. ೧೮೩೭ರಲ್ಲಿ ಈ ಸಂಸ್ಥೆಯ ಕಾರ್ಯದರ್ಶಿಯಾಗಿದ್ದ ಜೇಮ್ಸ್ ಪ್ರಿನ್ಸಿಪ್ ಬ್ರಾಹ್ಮೀಲಿಪಿಯನ್ನು ಯಶಸ್ವಿಯಾಗಿ ಅರ್ಥಮಾಡಿಕೊಂಡನು. ಅಲ್ಲದೆ ಖರೋಷ್ಠಿ ಲಿಪಿಯ ಬಗ್ಗೆ ಇದ್ದ ನಿಗೂಢತೆಯನ್ನು ನಿವಾರಿಸಿ, ಓದಿ ತೋರಿಸಿದನು. ಈ ಹಿನ್ನೆಲೆಯಲ್ಲಿ ಬಿ.ಎಲ್. ರೈಸರು ಸಾವಿರಾರು ಶಿಲಾಶಾಸನಗಳನ್ನು ಸಂಶೋಧಿಸಿ, ಇತಿಹಾಸ ರಚನೆಗೆ ಅವುಗಳ ಮಹತ್ವವನ್ನು ತಿಳಿಸಿದರು. ಎ.ಎಸ್. ಆಲ್ಟೇಕರ್ ಮತ್ತು ಆರ್.ಎಸ್. ತ್ರಿಪಾಠಿಯಂತಹ ವಿದ್ವಾಂಸರು

ನಾಣ್ಯಗಳನ್ನು ಸಂಸ್ಕರಿಸಿ ಅವುಗಳ ಐತಿಹಾಸಿಕ ಪ್ರಾಮುಖ್ಯತೆಯನ್ನು ತಿಳಿಸಿದರು. 1904 ರಲ್ಲಿ ಗವರ್ನರ್ ಜನರಲ್ ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಶಾಸನವನ್ನು ಜಾರಿಗೊಳಿಸಿ, ಅದೇ ವರ್ಷ ಸರ್ ಜಾನ್ ಮಾರ್ಷಲ್ ಎಂಬ ವಿದ್ವಾಂಸರನ್ನು ಪುರಾತತ್ವ ಇಲಾಖೆಯ ಡೈರಕ್ಟರ್ ಜನರಲ್‌ನನ್ನಾಗಿ ನೇಮಕಮಾಡಿದನು. ದಯಾರಾಂ ಸಾಹ್ನಿ, ಆರ್.ಡಿ. ಬ್ಯಾನರ್ಜಿ, ಮಾರ್ಟಿಮೊರ್ ವ್ಹೀಲರ್, ಹೆಚ್.ಡಿ. ಸಂಕಾಲಿಯಾ ಮತ್ತು ಎಮ್.ಎಚ್. ಕೃಷ್ಣ ಮುಂತಾದವರು ಪುರಾತತ್ವ ಶಾಸ್ತ್ರದ ಬಗ್ಗೆ ಅಧ್ಯಯನ ಬಗ್ಗೆ ಅದರಲ್ಲೂ ಭೂ-ಉತ್ಖನಗಳ ಮಹತ್ವ ಮತ್ತು ಇತಿಹಾಸ ರಚನೆಯ ವಿಷಯದಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯಾಧಾರಗಳಿಗಿಂತ, ಪುರಾತತ್ವ ಆಕರಗಳು ಹೆಚ್ಚು ಸತ್ಯಾಂಶದಿಂದ ಕೂಡಿವೆ. ಸಾಹಿತ್ಯಾಧಾರಗಳಲ್ಲಿ ಕವಿಗಳು ಕಲ್ಪನೆ-ವರ್ಣನೆ ಮತ್ತು ಪೂರ್ವದೋಷಿತ ವಿಚಾರಗಳಿಂದ ಎತಿಹಾಸಿಕ ಘಟನೆಗಳ ವಸ್ತು ನಿಷ್ಠತೆಗೆ ಅಪಾಯದ ಸಂಕೇತಗಳಾಗಿರುತ್ತವೆ. ಸಾಹಿತ್ಯಾಧಾರಗಳ ಕಂದು-ಕೊರತೆಗಳನ್ನು ಪ್ರಾಚ್ಯಶಾಸ್ತ್ರ ಅಥವಾ ಪುರಾತತ್ವ ಆಕರಗಳು ನೀಗಿಸುತ್ತವೆ. ಶಾಸನಗಳು, ನಾಣ್ಯಗಳು ಮತ್ತು ಸ್ಮಾರಕಗಳು ಭೂ-ಉತ್ಖನಗಳ ಫಲಗಳೇ ಆಗಿವೆ. ನಮ್ಮ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿದುಕೊಳ್ಳುವ ನಮ್ಮ ತವಕದಲ್ಲಿ ಇವುಗಳು ಪ್ರಮುಖ ಆಕರಗಳಾಗಿವೆ.

### 33.2.1 ಉತ್ಖನನ

ವೈಜ್ಞಾನಿಕವಾಗಿ ಭೂಗರ್ಭದಲ್ಲಿ ನಡೆಸುವ ಶೋಧನೆಯೇ ಉತ್ಖನನ. ಹತ್ತೊಂಬತ್ತನೆಯ ಶತಮಾನದಿಂದ ಭಾರತದಲ್ಲಿ ಅನೇಕ ಉತ್ಖನನಗಳನ್ನು ನಡೆಸಲಾಗಿದೆ. ಹರಪ್ಪ, ಬ್ರಹ್ಮಗಿರಿ, ವೈಶಾಲಿ, ಕಸರಪಳ್ಳಿ, ನಾಗರ್ಜುನಕೊಂಡ ಮತ್ತು ಚಂದ್ರವಳ್ಳಿ ಇವು ಉತ್ಖನನದ ಕೆಲವು ಪ್ರಮುಖ ಉದಾಹರಣೆಗಳಾಗಿವೆ. ಸರ್‌ಜಾನ್ ಮಾರ್ಷಲ್‌ರ ತಕ್ಷಶಿಲೆಯ ಭೂ ಉತ್ಖನನಗಳು ಡಾ. ಸ್ಪುನರ್‌ನ್ನರ ನಲಂದಾ-ಪಾಟಲೀ ಪುತ್ರ ಸ್ಥಳಗಳ ಭೂಉತ್ಖನಗಳು, ಪ್ರೊ. ಹೆಚ್. ಡಿ. ಸಂಕಾಲಿಯ ಅವರ ನಾಗರ್ಜುನಕೊಂಡ ನರ್ಮದಾ ಮತ್ತು ಸಾಬರಮತಿ ಕಣಿವೆಗಳಲ್ಲಿನ ಭೂಉತ್ಖನಗಳು, ಭಾರತದ ಇತಿಹಾಸ ಪೂರ್ವ ಜನರ ಜೀವನ ಮತ್ತು ಸಂಸ್ಕೃತಿಯ ಮೇಲೆ ಹೊಸ ಬೆಳಕನ್ನು ಚೆಲ್ಲಿವೆ. ಬೌದ್ಧ ಸಂಘಗಳ ಕೇಂದ್ರಗಳ ಬಗ್ಗೆ ಮತ್ತು ಇಂಡೋ-ಗ್ರೀಕರ ಧಾಳಿಗಳು ಭಾರತೀಯ ಕಲೆ ಮತ್ತು ಧರ್ಮದ ಬೆಳವಣಿಗೆಯ ಮೇಲೆ ಬೀರಿದ ಪ್ರಭಾವದ ಬಗೆಗೆ ಹಾಗೂ ಚಿತ್ರಕಲೆಯ ವಿಕಾಸದ ಬಗ್ಗೆ ಮಾಹಿತಿ ನೀಡಿವೆ. ಈ ಉತ್ಖನನಗಳಲ್ಲಿ ಅಮೂಲ್ಯವಾದ ಚಾರಿತ್ರಿಕ ಹಾಗೂ ಪುರಾತತ್ವ ಸಾಮಗ್ರಿಗಳಾದ ಮಡಿಕೆ, ಆಭರಣಗಳು, ಆಯುಧಗಳು ದೊರೆತಿವೆ. ಹರಪ್ಪ, ಲೋಥಲ್, ಕಲಿಬಂಗನ್ ಮತ್ತು ಮೊಹೆಂಜಾದಾರೋಗಳಲ್ಲಿ ನಡೆದ ಉತ್ಖನನದ ಶೋಧನೆಯಲ್ಲಿ ದೊರೆತ ಸಾಮಗ್ರಿಗಳ ಆಧಾರದಿಂದ ಸಿಂಧೂ ಕಣಿವೆಯಲ್ಲಿನ ಜನರ ಸಾಮಾಜಿಕ - ಆರ್ಥಿಕ-ರಾಜಕೀಯ-ಧಾರ್ಮಿಕ ಬದುಕನ್ನು, ಅಲ್ಲಿನ ಜನರು ನಗರ ಯೋಜನೆ, ಬೃಹತ್ ಸ್ನಾನದ ಘಟ್ಟ ಮತ್ತು ಒಳಚರಂಡಿ ವ್ಯವಸ್ಥೆ ನಿರ್ಮಾಣದಲ್ಲಿ ತೋರಿದ ಎಂಜಿನಿಯರಿಂಗ್ ಕುಶಲತೆಯನ್ನು ಪುನಾರಚಿಸಬಹುದಾಗಿದೆ. ಭಾರತದ ಇತಿಹಾಸ ಪೂರ್ವಕ್ಕೆ ಸೇರಿದ ಶಿಲಾಯುಗಪೂರ್ವ, ಮಧ್ಯಶಿಲಾಯುಗ, ನೂತನಶಿಲಾಯುಗ ಮತ್ತು ಕಬ್ಬಿಣಯುಗಗಳ ಬದುಕನ್ನು ಪುನಾರಚಿಸಲು ನಮಗಿರುವ ಆಕರಗಳೆಂದರೆ ಉತ್ಖನನ ಮತ್ತು ಅನ್ವೇಷಣೆಗಳಲ್ಲಿ ದೊರೆತ ಸಾಮಗ್ರಿಗಳಾಗಿವೆ.

### 33.2.2 ಶಾಸನಶಾಸ್ತ್ರ

ತಾಮ್ರಪತ್ರಗಳು ಮತ್ತು ಕಲ್ಲಿನ ಮೇಲಿನ ಬರಹಗಳ ಅಧ್ಯಯನ ಶಾಸ್ತ್ರವೇ ಶಾಸನಶಾಸ್ತ್ರ. ಬಂಡೆಗಳು, ಕಲ್ಲಿನ ಕಂಬಗಳು, ಕಲ್ಲಿನ ಚಪ್ಪಡಿಗಳು, ಗುಹೆಗಳು, ತಾಮ್ರಪತ್ರಗಳು ಮತ್ತು ಲೋಹದ ಪತ್ರಗಳು ಮುಂತಾದವುಗಳ ಮೇಲೆ ಕೆತ್ತಿದ ಬರಹವನ್ನು ಶಾಸನಗಳು ಎಂದು ಕರೆಯಬಹುದು. ಇಲ್ಲಿನ ಬರಹಗಳು ಆಯಾ ಪ್ರದೇಶದಲ್ಲಿ ಅಂದರೆ ಶಾಲಿವಾಹನ, ವಿಕ್ರಮ ಮತ್ತು ಕಲಿಯುಗ, ಶಕೆಗಳಲ್ಲಿ ಸಂಸ್ಕೃತ, ಪಾಲಿ, ಕನ್ನಡ, ಪ್ರಾಕೃತ, ತೆಲುಗು, ತಮಿಳು ಮತ್ತು ಮಲೆಯಾಳಂ

ಭಾಷೆಗಳಲ್ಲಿವೆ. ಕೆಲವು ಬರಹಗಳು ಸಾಹಿತ್ಯಿಕ ರಚನೆಗಳಾಗಿವೆ. ಅತ್ಯಧಿಕ ಸಂಖ್ಯೆಯ ಬರಹಗಳು ಎಡದಿಂದ ಬಲಕ್ಕೆ ಬ್ರಾಹ್ಮಿ ಭಾಷೆಯಲ್ಲಿ ಬರೆದ ಶಾಸನಗಳಾಗಿವೆ. ಕೆಲವೊಂದು ಶಾಸನಗಳು ಖರೋಷ್ಠಿ ಭಾಷೆಯಲ್ಲಿ ಬಲದಿಂದ ಎಡಕ್ಕೆ ಬರೆದವುಗಳಾಗಿವೆ. ಈ ಶಾಸನಗಳಲ್ಲಿ ಬರಹಗಳ ಉದ್ದೇಶಗಳು ಹೀಗಿವೆ.

1. ದಾನ-(ಸಾರ್ವಜನಿಕ -ಖಾಸಗಿ) ದಾಖಲಿಸುವುದು.

2. ಚಕ್ರವರ್ತಿಯ ಮಹಾನ್ ಸಾಧನೆಗಳನ್ನು ಸ್ಮರಿಸುವುದಕ್ಕಾಗಿ. ಇವುಗಳಲ್ಲಿ ಸಾಮಾನ್ಯವಾಗಿ ಚಕ್ರವರ್ತಿಯ ಹೆಸರು, ಅವರ ಬಿರುದುಗಳು ಮತ್ತು ದಿನಾಂಕವನ್ನು ದಾಖಿಸಲಾಗಿರುತ್ತದೆ. ಪ್ರಾಚೀನ ಭಾರತದ ಶಾಸನಗಳನ್ನು ಅ. ದತ್ತಿಶಾಸನಗಳೆಂದು, ಆ. ಧಾರ್ಮಿಕ ಶಾಸನಗಳೆಂದು ಇ. ಆಡಳಿತಾತ್ಮಕ ಶಾಸನಗಳೆಂದು ಮತ್ತು ಈ. ಜ್ಞಾಪನಾ ಶಾಸನಗಳೆಂದು ವಿಂಗಡಿಸಬಹುದು.

3. ಭಾರತದಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಕಾಲಕ್ಕೆ ಸೇರಿದ ಶಾಸನಗಳೆಂದರೆ ಅಶೋಕ ಮೌರ್ಯನ (ಕ್ರಿ.ಪೂ. 273-233) ಶಾಸನಗಳು. ಈತನ ಶಾಸನಗಳನ್ನು 'ಧರ್ಮಲಿಪಿ' ಎಂದು ಕರೆಯಲಾಗಿದೆ. ಇವು ಕಲ್ಲುಬಂಡೆ ಮತ್ತು ಕಂಬಗಳ ಮೇಲೆ ಕೊರೆದ ಚಕ್ರವರ್ತಿಯ ಆದೇಶಗಳಾಗಿವೆ. ಭಾರತದ ಅನೇಕ ಭಾಗಗಳಲ್ಲಿ ಇವು ಬ್ರಾಹ್ಮೀಲಿಪಿ ಮತ್ತು ಪಾಲಿ ಭಾಷೆಗಳಲ್ಲಿ ನಮಗೆ ದೊರೆಕಿವೆ. ಇಲ್ಲಿಯವರೆಗೆ ಪರಿಶೋಧಿಸಿದ ಅಶೋಕನಿಗೆ ಸಂಬಂಧಪಟ್ಟ ಶಾಸನಗಳಲ್ಲಿ ೧೪ ಬಂಡೆಯ ಮೇಲಿನ ಬರಹಗಳು ಮತ್ತು ೭ ಶಿಲಾಸ್ತಂಬಗಳ ಮೇಲಿನ ಬರಹಗಳು ಪ್ರಮುಖವೆಂದು ಪರಿಗಣಿತವಾಗಿವೆ. ಈ ಶಾಸನಗಳ ನೆರವಿನಿಂದ ಮೌರ್ಯ ಸಾಮ್ರಾಜ್ಯದ ಮೇರೆಗಳನ್ನು ಗುರುತಿಸುವುದು ಸಾಧ್ಯ. ಅದರಲ್ಲೂ ೯, ೧೨ ಮತ್ತು ೧೩ ನೇ ಸಂಖ್ಯೆಯ ಬಂಡೆಗಲ್ಲು ಶಾಸನಗಳಲ್ಲಿ ನಮಗೆ ಅವನ ಕಾಲದ ಕಳಿಂಗ ಯುದ್ಧ ಆಡಳಿತ, ಲೋಕಕಲ್ಯಾಣ ಕಾರ್ಯಕ್ರಮ, ನೀತಿ ಬೋಧನೆ, ಬೌದ್ಧ ಧರ್ಮದ ಪ್ರಸಾರ ಮುಂತಾದ ವಿಷಯಗಳನ್ನು ಕುರಿತ ವಿವರಗಳು ದೊರಯುತ್ತವೆ. ಕಳಿಂಗದ ಚರಿತ್ರೆ ಬಗ್ಗೆ ನಮಗೆ ಯಾವುದೇ ಸಾಹಿತ್ಯಿಕ ಆಕರ ದೊರೆತಿಲ್ಲ.

4. ಚಕ್ರವರ್ತಿ ಖಾರವೇಲನ ಬಗ್ಗೆ ವಿವರ ನೀಡುವ ಹಾಥಿಗುಂಪಾ ಶಾಸನವು ಮತ್ತೊಂದು ಅಮೂಲ್ಯ ಆಕರವಾಗಿದೆ. ಇದು ಒರಿಸ್ಸಾದಲ್ಲಿ ಕಟಕ್‌ಬಳಿಯ ಉದಯಗಿರಿ ಬೆಟ್ಟದ ಗುಹೆಯ ಶಾಸನ. ಇದು ಪ್ರಾಕೃತ ಭಾಷೆಯಲ್ಲಿ ಬ್ರಾಹ್ಮೀ ಲಿಪಿಯಲ್ಲಿ ಬರೆಯಲ್ಪಟ್ಟಿದೆ. ಖಾರವೇಲನು ಜೈನಮುನಿಗಳ ವಾಸಕ್ಕಾಗಿ ಉದಯಗಿರಿ ಬೆಟ್ಟದಲ್ಲಿ ಭವ್ಯವಾದ ವಸತಿ ಮತ್ತು ಸಭಾ ಮಂದಿರವನ್ನು ನಿರ್ಮಿಸಿದ ವಿಷಯ ತಿಳಿಯುತ್ತದೆ. ಚಕ್ರವರ್ತಿ ಖಾರವೇಲನು ಪಟ್ಟಕ್ಕೇರಿದ ನಂತರದ ೧೩ ವರ್ಷಗಳ ಕಾಲ ಅವನು ನಡೆಸಿದ ದಿಗ್ವಿಜಯ, ದಂಡಯಾತ್ರೆ, ಸಿದ್ಧಿ-ಸಾಧನೆಗಳ ಬಗ್ಗೆ ಅದು ಅಮೂಲ್ಯವಾದ ಮತ್ತು ಅಪರೂಪವಾದ ವಿವರಗಳನ್ನು ಒದಗಿಸುತ್ತದೆ. ಕ್ಷಾಮ ಪರಿಹಾರ ಕ್ರಮವಾಗಿ ಅರಸನು ಕಟ್ಟಿಸಿದ ಕೆರೆ ಮತ್ತು ಕಟ್ಟೆಗಳ ಬಗ್ಗೆ ಇದು ಮಾಹಿತಿ ನೀಡುತ್ತದೆ. ಸಮುದ್ರಗುಪ್ತನಿಗೆ ಸಂಬಂಧಿಸಿದ ಅಲಹಾಬಾದ್ ಸ್ಥಂಭದ ಶಾಸನವು ಕವಿ ಮತ್ತು ದಂಡನಾಯಕನಾಗಿದ್ದ ಹರಿಸೇನನಿಂದ ರಚಿತವಾಗಿದ್ದು ಸಂಸ್ಕೃತ ಭಾಷೆಯ ೩೩ ಸಾಲುಗಳ ಮತ್ತೊಂದು ಅಮೂಲ್ಯ ಪ್ರಶಸ್ತಿಯಾಗಿದೆ. ಸಮುದ್ರಗುಪ್ತನ ಸಿದ್ಧಿ -ಸಾಧನೆಗಳನ್ನು ಇಲ್ಲಿ ದಾಖಲಿಸಲಾಗಿದೆ. ಅವನು ದಕ್ಷಿಣ ಪ್ರಾಂತ್ಯಗಳಲ್ಲಿ ಮತ್ತು ಉತ್ತರ ಪ್ರಾಂತ್ಯಗಳಲ್ಲಿ ನಡೆಸಿದ ಆರ್ಯಾವರ್ತದಲ್ಲಿನ ಸೈನಿಕ ಕಾರ್ಯಾಚರಣೆಗಳ ವಿವರವನ್ನು ಅದು ನೀಡುತ್ತದೆ. ಸಮುದ್ರ ಗುಪ್ತನು ಉತ್ತರ ಭಾರತದಲ್ಲಿ ಒಂಬತ್ತು ರಾಜರುಗಳನ್ನು ಮತ್ತು ದಕ್ಷಿಣದಲ್ಲಿ ಹನ್ನೆರಡು ರಾಜರುಗಳನ್ನು ಸೋಲಿಸಿದ್ದರ ವಿವರ

ದೊರೆಯುತ್ತದೆ. ಏಳು ಪ್ರಕಾರ ನಾಣ್ಯ ಬಿಡುಗಡೆ ಮಾಡಿದ ಸಮುದ್ರಗುಪ್ತನ ಸಾಮ್ರಾಜ್ಯ ಪೂರ್ವದಲ್ಲಿ ಬ್ರಹ್ಮಪುತ್ರ ನದಿಯಿಂದ ದಕ್ಷಿಣದ ನರ್ಮದಾ ನದಿಯಾವರೆಗೂ ಹಬ್ಬಿತು ಎನ್ನುವ ವಿಷಯ ಈ ಶಾಸನದಿಂದ ತಿಳಿಯುತ್ತದೆ.

5. ಇಮ್ಮಡಿ ಪುಲಿಕೇಶಿಗೆ ಸಂಬಂಧಿಸಿದ ಐಹೊಳೆ ಶಾಸನವು ಆರಂಭದ ಕಾಲದ ಚಾಳುಕ್ಯ ಚಕ್ರವರ್ತಿಗಳು ಧಾರ್ಮಿಕ ನೀತಿಯ ಮೇಲೆ ಅದು ಬೆಳಕು ಚೆಲ್ಲುತ್ತದೆ. ಪುಲಿಕೇಶಿಯು ಹರ್ಷವರ್ಧನನ ಜೊತೆ ನಡೆಸಿದ ಯುದ್ಧದ ಬಗ್ಗೆ ಈ ಶಾಸನದಲ್ಲಿ ಹೇಳಲಾಗಿದೆ. ನರ್ಮದಾ ನದಿ ದಂಡೆಯಲ್ಲಿನ ಅವನ ಸೋಲಿನ ಬಗ್ಗೆ ಮತ್ತು ಉಭಯತರು ಮಾಡಿಕೊಂಡ ಒಪ್ಪಂದದ ಬಗ್ಗೆ ಅಲ್ಲಿ ಸೂಚನೆಯಿದೆ.

6. ಮಾಳ್ವರ ರಾಜ ಯಶೋವರ್ಮನ್‌ಗೆ (ಚಕ್ರವರ್ತಿ ಎನ್ನುವ ಬಿರುದು ಹೊಂದಿದ್ದ) ಸಂಬಂಧಿಸಿದ ಹಾಗೆ ಮಾಂಡೋಸರ್ ಶಾಸನ ವಿಷಯ ತಿಳಿಸುತ್ತದೆ. ಗಿರಿನಾರ್ ಶಾಸನ, ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಗುಜರಾತ ಪ್ರಾಂತದ ಅಧಿಪತಿಯಾಗಿದ್ದ ಮಹಾ ಕ್ಷೇತ್ರದ ರುದ್ರದಾಮನು ಬರೆಸಿದ ಶಾಸನವಾಗಿದೆ. ಇದರಲ್ಲಿ ಗಿರ್ನಾರ್ ಬಳಿಯಿದ್ದ ಸುದರ್ಶನ ಕರೆಯ ಚರಿತ್ರೆ ಮತ್ತು ಸಮಕಾಲೀನ ರಾಜಕೀಯ ಪರಿನಿಧಿತಿಗಳನ್ನು ವಿವರಿಸಲಾಗಿದೆ.

7. ಮೆಹರೊಲಿ ಸ್ಥಂಭದ ಶಾಸನ ಉತ್ತರ ಭಾರತದ ಎರಡನೇ ಚಂದ್ರಗುಪ್ತನ ದಿಗ್ವಿಜಯ, ರಾಜನೀತಿ ಮತ್ತು ಸಾಂಸ್ಕೃತಿಕ ಚರಿತ್ರೆಗೆ ಸಂಬಂಧಿಸಿದ ಅನುಕೂಲವಾಗುವಂತಹ ಅಮೂಲ್ಯ ಮಾಹಿತಿಯನ್ನು ಒದಗಿಸುತ್ತವೆ.

8. ಪ್ರಾಚೀನ ಭಾರತದ ಮತ್ತೊಂದು ಮರೆತುಹೋದ ರಾಜಮನೆತನವಾದ ಪ್ರತಿಹಾರ ಸಾಮ್ರಾಜ್ಯಕ್ಕೆ ಸೇರಿದ ಭೋಜನಿಗೆ ಸಂಬಂಧಿಸಿದ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳ ಬಗ್ಗೆ ಗ್ವಾಲಿಯರ್ ಪ್ರಶಸ್ತಿಯು ವಿವರವನ್ನು ಒದಗಿಸುತ್ತವೆ. ನಾಸಿಕ ಗುಹೆಯ ಶಾಸನಗಳು ಗೌತಮಿ ಬಿಲ್ಸಾರಿ ಚರಿತ್ರೆಯನ್ನು ತಿಳಿಸುತ್ತದೆ. ಅಲ್ಲದೆ, ಇದು ಬೌದ್ಧ ಧರ್ಮದ ಪ್ರಸಾರ ಮತ್ತು ಭಾರತದ ಚಿತ್ರಕಲೆಯ ಬೆಳವಣಿಗೆಯನ್ನು ವಿವರಿಸುತ್ತದೆ. ಸಿಂಧೂ ಕೊಳ್ಳದ ನಾಗರೀಕತೆಯ ಪ್ರದೇಶದಲ್ಲಿ ಕಾಣುವ ೨೫೦೦ ಕ್ಕೂ ಹೆಚ್ಚು ಮುದ್ರೆಗಳ ಮೇಲಿನ ಶಾಸನಗಳು ಅವರ ಜೀವನ ಕ್ರಮ, ಧರ್ಮ, ಕಲೆ ಮತ್ತು ಅವರ ಚಿತ್ರಲಿಪಿ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ.

9. ಬೆಸ್‌ನಗರ ಗರುಡ ಸ್ಥಂಬ ಶಾಸನವು ಗೌತಮ ಬುದ್ಧನ ಜೀವನವನ್ನು ತಿಳಿಸುತ್ತದೆ.

10. ತಕ್ಷಶಿಲೆಯಲ್ಲಿನ ಶಾಸನವು ಎರಡನೇ ಕ್ಯಾಡಫೀಸಸ್‌ನ ನಂತರ ಕಾನಿಷ್ಕನು ಕುಶಾನರ ದೊರೆಯಾಗಿ ಅಧಿಕಾರಕ್ಕೆ ಬಂದನೆಂದು ಮತ್ತು ಆತನು ಬೌದ್ಧ ಧರ್ಮಕ್ಕೆ ರಾಜಾಶ್ರಯ ನೀಡಿದ ಮಾಹಿತಿ ದೊರೆಯುತ್ತದೆ.

*ಶಾಸನಗಳ ಮಹತ್ವ*

ಶಾಸನಗಳ ಮಹತ್ವವನ್ನು ಡಾ. ಆರ್.ಎಸ್. ತ್ರಿಪಾಠಿಯವರು ಹೀಗೆ ಗುರುತಿಸಿದ್ದಾರೆ. "ರಾಜ-ಮಹಾರಾಜರುಗಳ ಆಳ್ವಿಕೆಗೆ ಸಂಬಂಧಿಸಿದ ಕಾಲಘಟ್ಟವನ್ನು ನಿಗಧಿಪಡಿಸಲು ಇವು ಅಮೂಲ್ಯವಾದ ಆಕರಗಳಾಗಿವೆ. ಸಾಹಿತ್ಯಿಕ ಮತ್ತು ಇತರೆ ಆಕರಗಳಿಂದ ಪಡೆದ ಮಾಹಿತಿಗೆ ಪೂರಕವಾದ ವಿವರ ಶಾಸನಗಳಿಂದ ದೊರೆಯುತ್ತದೆ".

ಕೆಲವೊಮ್ಮೆ ವಿದೇಶಗಳಲ್ಲಿ ದೊರೆತ ಉದಾಹರಣೆಗೆ ಏಷ್ಯಾ ಮೈನರ್‌ನಲ್ಲಿನ ಬೋಗಾಜ್ ಕೊಯಿ ಶಾಸನಗಳಲ್ಲಿನ ವೇದಕಾಲದ ದೇವ-ದೇವತೆಗಳ ಉಲ್ಲೇಖದಿಂದ ಆರ್ಯರ ಕ್ಷೇತ್ರಕಾರ್ಯದ ವಿವರವನ್ನು ಗುರುತಿಸಬಹುದಾಗಿದೆ. ಭಾರತ ಮತ್ತು ಇರಾನ್‌ಗಳ ನಡುವಿನ ಸಂಬಂಧವನ್ನು ಪರ್ಸಿಪೊಲಿಸ್ ಮತ್ತು ನಕ್ಷಾ-ಎ-ರುಸ್ತಂಗಳಲ್ಲಿ ದೊರೆತ ಶಾಸನಗಳು ದೃಢಪಡಿಸುತ್ತವೆ. ಪ್ರಾಚೀನ ಕಾಲದಲ್ಲಿ ಭಾರತ ಮತ್ತು ದೂರಪ್ರಾಚ್ಯಗಳ ನಡುವಿನ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳ ಬಗ್ಗೆ ಅನೇಕ ಶಾಸನಗಳು ಬೆಳಕು ಚೆಲ್ಲುತ್ತವೆ. ಚಾರಿತ್ರಿಕ ಭೂಗೋಳದ ಬಗ್ಗೆಯೂ ಶಾಸನಗಳು ಬೆಳಕು ಚೆಲ್ಲುತ್ತವೆ.

ಇದೇ ರೀತಿ ತಾಮ್ರ ಪತ್ರಗಳು ಅವುಗಳ ಮೇಲಿನ ಬರಹಗಳು ಉತ್ತರ ಭಾರತದ ಮತ್ತು ದಕ್ಷಿಣ ಭಾರತದ ಅನೇಕ ರಾಜಮನೆತನಗಳಿಗೆ ಸೇರಿದ ರಾಜ-ಮಹಾರಾಜರುಗಳು ಹಾಗೂ ಖಾಸಗಿ ವ್ಯಕ್ತಿಗಳು ನೀಡಿದ ದಾನ-ಉಂಬಳಿ-ದತ್ತಿಗಳಿಗೆ ಸಂಬಂಧಿಸಿದ ವಿವರಗಳನ್ನು ಒದಗಿಸುತ್ತವೆ. ಪ್ರಾಚೀನ ಕಾಲಕ್ಕೆ ಸೇರಿದ ಕುಟುಂಬಗಳ ವಂಶವೃಕ್ಷಕ್ಕೆ ಮತ್ತು ಇತರೆ ಉಪಯುಕ್ತ ಮಾಹಿತಿಗೂ ಇವು ಆಕರಗಳಾಗಿವೆ. ತಾಮ್ರಪತ್ರಗಳು ಪ್ರಾಚೀನ ಕಾಲದಲ್ಲಿ ಸಾಹಿತ್ಯ, ಶಿಕ್ಷಣ ಮತ್ತು ಧಾರ್ಮಿಕ ಕೇಂದ್ರಗಳಾಗಿ ಅಗ್ರಹಾರಗಳು ಮತ್ತು ಬ್ರಹ್ಮಪುರಿಗಳು ಹೇಗೆ ಕಾರ್ಯನಿರ್ವಹಿಸಿದವು ಮತ್ತು ಅವುಗಳಿಗೆ ಕೊಟ್ಟ ಭೂದಾನದ ವಿವರಗಳನ್ನು ಕಾಣುತ್ತೇವೆ.

ಇನ್ನೊಂದು ಬಗೆಯ ಶಾಸನಗಳೆಂದರೆ ವೀರರು, ಸತಿ, ನಿಷಿಧಿಗಳಿಗೆ ಸಂಬಂಧಿಸಿದ ಕಲ್ಲು ಸ್ಮಾರಕಗಳು. ಇವು ನಿರ್ದಿಷ್ಟ ಕಾಲದ ಯುದ್ಧ, ಯುದ್ಧಗಳಲ್ಲಿ ಉಪಯೋಗಿಸಿದ ಆಯುಧಗಳು, ಸಾಮಾಜಿಕ, ಧಾರ್ಮಿಕ ಸಾಂಸ್ಕೃತಿಕ ಮತ್ತು ಕಲೆಗಳಿಗೆ ಸಂಬಂಧಿಸಿದ ವಿವರಗಳನ್ನು ಸಾಮಾಜಿಕ - ಧಾರ್ಮಿಕ ಸಂಪ್ರದಾಯಗಳನ್ನು ಒದಗಿಸುತ್ತವೆ. ಶಾಸನಗಳು ಅಧಿಕೃತ ವಿವರಗಳ ಆಕರಗಳಾಗಿವೆ. ಲಿಖಿತ ದಾಖಲೆಗಳಲ್ಲಿ ದೊರೆಯುವ ಸಂಗತಿಗಳನ್ನು ಪರಾಮರ್ಶೆ ಮಾಡಲು ಶಾಸನಗಳು ತುಂಬಾ ಉಪಯುಕ್ತ ಆಕರಗಳಾಗಿವೆ.

### *33.2.3 ಶಾಸನಗಳ ನ್ಯೂನತೆಗಳು*

ಶಾಸನಗಳು ಅತ್ಯಂತ ಮಹತ್ವದ ಮೂಲಧಾರವಾಗಿದ್ದರೂ ಕೆಲವು ಕುಂದುಕೊರತೆಗಳನ್ನು ಹೊಂದಿವೆ. ಶಾಸನಗಳ ವಿಷಯ ವ್ಯಾಪ್ತಿ ಸೀಮಿತವಾಗಿ, ಅವುಗಳ ಒದಗಿಸುವ ಮಾಹಿತಿಗಳು ಭಾಗಶಃ ಅಪೂರ್ಣವಾಗುರುವುದರಿಂದ, ಐತಿಹಾಸಿಕ ವ್ಯಕ್ತಿ ಮತ್ತು ಘಟನೆಗಳನ್ನು ಪರಾಮರ್ಶೆ ಮಾಡುವುದು ಅಸಾಧ್ಯವಾಗುವುದು. ಶಾಸನೋಕ್ತವಾದ ವಿವರಗಳೆಲ್ಲವು ಐತಿಹಾಸಿಕ ಸತ್ಯವೆನ್ನಲಾಗದು ಅವುಗಳಲ್ಲಿಯು ಅತಿಶಯೋಕ್ತಿ ಮತ್ತು ರಂಜಿತ ವಿಚಾರಗಳನ್ನು ಕಾಣಲು ಸಾಧ್ಯ. ಪರಸ್ಪರ ದೊರೆಗಳು ಯುದ್ಧದಲ್ಲಿ ತಮಗೆ ಜಯ ಲಭಿಸಿತೆಂದು ತಂತಮ್ಮ ಶಾಸನಗಳಲ್ಲಿ ಹೇಳಿಕೊಂಡಿದ್ದ ಉದಾಹರಣೆಗೆ ಹರ್ಷವರ್ಧನನು ಕೂಡ ಇಮ್ಮಡಿ ಪುಲಿಕೇಶಿ ಕೈಯಲ್ಲಿ ತಾನು ಅನುಭವಿಸಿದ ಸೋಲನ್ನು ಒಪ್ಪಿಕೊಂಡಿಲ್ಲ. ಪುಲಿಕೇಶಿಯ ಐಹೊಳೆ ಶಿಲಾಶಾಸನವು ಹರ್ಷನ ಪರಾಭವವನ್ನು ನಿರೂಪಿಸುತ್ತದೆ. ಹ್ಯೂಯನ್‌ತ್ಸಾಂಗ್‌ನ ಕೃತಿ ಸಿ-ಯು-ಕಿ. ಪುಲಕೇಶಿಯು ಹರ್ಷನ ಮೇಲೆ ಸಾಧಿಸಿದ ಸೈನಿಕ ವಿಜಯವನ್ನು ದೃಢೀಕರಿಸುತ್ತದೆ. ಕೆಲವು ಶಾಸನಗಳಲ್ಲಿ ಐತಿಹ್ಯಗಳು ಮತ್ತು ಉತ್ಪ್ರೇಕ್ಷೆಗಳು ಸೇರಿರುವುದರಿಂದ ಐತಿಹಾಸಿಕ ಸತ್ಯಗೋಚರಿಸುವುದಿಲ್ಲ. ಕಾರಣ ಶಿಲಾಶಾಸನಗಳನ್ನು ಉಪಯೋಗಿಸುವವರ ವಿವಿಧ ಕಾಲಗಳ ಲಿಪಿ, ಭಾಷೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು, ಇತರ ಆಕರಗಳ ಹಿನ್ನೆಲೆಯಲ್ಲಿ ಶಾಸನಗಳನ್ನು ವಿಶ್ಲೇಷಿಸಿ, ಇತಿಹಾಸ ರಚನೆಗೆ ಬಳಸಿದರೆ, ಶಾಸನಗಳು ಒಳ್ಳೆಯ ಐತಿಹಾಸಿಕ ದಾಖಲೆಗಳಾಗಿವೆ.

### 33.2.4 ನಾಣ್ಯಶಾಸ್ತ್ರ

ಭಾರತದ ನ್ಯೂಮಿಸ್‌ಮ್ಯಾಟಿಕ್ಸ್ ಸೊಸೈಟಿಯು ನಾಣ್ಯಶಾಸ್ತ್ರ ಅಭ್ಯಾಸಕ್ಕೆ ಅಮೋಘಸೇವೆ ಸಲ್ಲಿಸುತ್ತದೆ. ನಾಣ್ಯಗಳನ್ನು ಕುರಿತ ಅಧ್ಯಯನವೇ ನಾಣ್ಯಶಾಸ್ತ್ರ. ಶಾಸನಗಳು ತುಂಬಿಕೊಡಲಾರದ ಮಾಹಿತಿಯನ್ನು ನಾಣ್ಯಗಳು ತುಂಬಿಕೊಡುತ್ತವೆ. ಲಿಖಿತ ದಾಖಲೆಗಳಲ್ಲಿನ ವಿವರವನ್ನು ಸಮರ್ಥಿಸುವ ಸಾಕ್ಷಿಗಳನ್ನು ಇವು ಒದಗಿಸುತ್ತವೆ. ಲಿಖಿತ ದಾಖಲೆಗಳಲ್ಲಿ ವಿವರವನ್ನು ಸಮರ್ಥಿಸುವ ಸಾಕ್ಷಿಗಳನ್ನು ಇವು ಒದಗಿಸುತ್ತವೆ. ಲಿಖಿತ ದಾಖಲೆಗಳಲ್ಲಿ ಕಂಡುಬರುವ ಲೋಪಗಳನ್ನು ನಾಣ್ಯಗಳು ಒದಗಿಸುವ ಮಾಹಿತಿಯಿಂದ ಸರಿಪಡಿಸಬಹುದು. ಕ್ರಿ.ಪೂ. 300 ರಿಂದ ಕ್ರಿ.ಶ. 300 ರ ಪ್ರಾಚೀನ ಭಾರತ ಚರಿತ್ರೆಯ ಘಟನೆಗಳನ್ನು ವಿಶ್ಲೇಷಿಸಲು ಮತ್ತೊಂದು ಬಹುಮುಖ್ಯ ದಾರಿದೀಪವೆಂದರೆ ನಾಣ್ಯಗಳು. ಅನೇಕ ರಾಜಮನೆತನಗಳ ಆಳ್ವಿಕೆ, ಆಳ್ವಿಕೆಯ ಕಾಲಘಟ್ಟ, ಚಕ್ರವರ್ತಿಗಳ ಆಳ್ವಿಕೆ ಅವಧಿ ಮುಂತಾದ ಕಾಲಾನುಕ್ರಮಣಿಕೆಯು ಸಮಸ್ಯೆಗಳಿಗೆ ಇವು ಒರೆಗಲ್ಲುಗಳಾಗಿವೆ. ನಾಣ್ಯಗಳ ಮೇಲಿನ ಅಲೇಖ್ಯ (Legend) ಚಿಹ್ನೆಗಳು, ಚಿತ್ರಗಳು ಮತ್ತು ಅವುಗಳ ಧಾತುಗಳ ಸಹಾಯದಿಂದ ರಾಜರುಗಳ ಹೆಸರುಗಳು, ಅವರ ಕಾಲಾವಧಿ, ಅವರ ಅಭಿರುಚಿ, ಅವರ ಮನೆತನ ವಂಶಾವಳಿ, ಆಡಳಿತ ಮುಂತಾದ ವಿವರಗಳು ಅಲ್ಲಿ ಮುದ್ರಣಗೊಂಡಿರುತ್ತವೆ. ವಿಷ್ಕ, ಸತ್ಮಾನ್, ಕೃಷ್ಣಲಾ, ಕಾಷ್ಮಿಪ, ಸುವರ್ಣ ಮುಂತಾದವು ಪ್ರಾಚೀನ ಭಾರತದಲ್ಲಿದ್ದ ನಾಣ್ಯಗಳ ಹೆಸರುಗಳು.

ಎರಡನೆಯ ಹಂತದ ವೈದಿಕ ಕಾಲದಲ್ಲಿ ಜನರಿಗೆ ನಾಣ್ಯಗಳ ಬಳಕೆ ತಿಳಿದಿತ್ತು ಎನ್ನಲಾಗಿದೆ (ವಿ.ಎ. ಸ್ಮಿತ್). ಬ್ಯಾಕ್ಟೀರಿಯನ್ ಮತ್ತು ಇಂಡೋ ಗ್ರೀಕ್, ಪಾರ್ಥಿಯನ್ ಮತ್ತು ಸ್ಕಿಥಿಯನ್ ಚರಿತ್ರೆಗೆ ಮತ್ತು ಅವರ ಚಕ್ರವರ್ತಿಗಳ ಬಗ್ಗೆ ಇರುವ ಏಕೈಕ ಮುಖ್ಯ ಆಕರಗಳೆಂದರೆ ನಾಣ್ಯಗಳು. ಕುಷಾಣರ ಹಾಗೂ ಶಾತವಾಹನರ ಇತಿಹಾಸಕ್ಕೆ ಲಭ್ಯವಿರುವ ಏಕೈಕ ಮುಖ್ಯ ಆಕರಗಳೆಂದರೆ ನಾಣ್ಯಗಳು. ಈ ನಾಣ್ಯಗಳ ಮೇಲೆ ಗ್ರೀಕ್ ಮತ್ತು ಖರೋಷ್ಠಿ ಭಾಷೆ ಲಿಪಿಗಳಲ್ಲಿರುವ ಬರಹಗಳಿಂದ ಈ ಚಕ್ರವರ್ತಿಗಳು ಉತ್ತರ ಭಾರತವನ್ನು ಆಳಿದ್ದರು ಎಂಬುದು ತಿಳಿಯುತ್ತದೆ. ಕೆಲವು ಚಕ್ರವರ್ತಿಗಳ ವೈಯುಕ್ತಿಕ ಸಾಧನೆಗಳನ್ನು ತಿಳಿಸಿಕೊಡುತ್ತವೆ. ಉದಾಹರಣೆ ಸಮುದ್ರಗುಪ್ತನ ನಾಣ್ಯಗಳು. ಸಮುದ್ರಗುಪ್ತನ ಅಶ್ವಮೇಧ ನಾಣ್ಯವು ಅವನ ಜೀವತ ಕಾಲದಲ್ಲೇ ಅಲಹಾಬಾದ್ ಶಾಸನವನ್ನು ಬರೆಯಿಸಲಾಗಿದೆ ಎಂಬುದನ್ನು ದೃಢಪಡಿಸುತ್ತದೆ. ಅಲ್ಲಿರುವ ವೀಣೆಯ ವಿನ್ಯಾಸವು ಅವನ ಸಂಗೀತಾಭಿರುಚಿಯ ಸಂಕೇತವಾಗಿದೆ. ಎರಡನೇ ಚಂದ್ರಗುಪ್ತನ ಬೆಳ್ಳಿ ನಾಣ್ಯಗಳು ಪಶ್ಚಿಮ ಶಕರ ಸೋಲನ್ನು ತಿಳಿಯಲು ಆಕರಗಳಾಗಿವೆ. ಗುಪ್ತರ ನಾಣ್ಯದಲ್ಲಿ ಕಾಣುವ 'ಶಿವ' ಹಾಗೂ ಕುಷಾನರ ನಾಣ್ಯದಲ್ಲಿ ಕಾಣುವ 'ಲಕ್ಷ್ಮಿ' ಚಿತ್ರಗಳು, ಗುಪ್ತರು ಶಿವ ಮತ್ತು ಲಕ್ಷ್ಮಿಯ ಉಪಾಸಕರಾಗಿರುವ ವಿಷಯವನ್ನು ತಿಳಿಸುತ್ತದೆ.

ನಾಣ್ಯಗಳು ಧಾರ್ಮಿಕ ನೀತಿಯ ವಿವರವನ್ನು ಒದಗಿಸುತ್ತವೆ. ಉದಾಹರಣೆಗೆ ನಾಣ್ಯಗಳ ಮೇಲಿನ ಶಿವ, ವಿಷ್ಣು, ದುರ್ಗಾ ಮುಂತಾದ ಆಕೃತಿಗಳು ಚಕ್ರವರ್ತಿಯಾದ ದೇವತೆಯ ಅನುಯಾಯಿಯಾಗಿದ್ದ ಎಂಬುದನ್ನು, ಅವನ ಮನೆತನ ಯಾವ ಧರ್ಮದ ಅನುಯಾಯಿಗಳಾಗಿದ್ದರೆಂಬ ಸಂಗತಿಯನ್ನು ಸೂಚಿಸುತ್ತವೆ. ನಾಣ್ಯಗಳನ್ನು ಚಿನ್ನ, ಬೆಳ್ಳಿ, ತಾಮ್ರ ಮತ್ತು ಮಿಶ್ರಿತ ಲೋಹಗಳಿಂದ ತಯಾರಿಸಲಾಗುತ್ತಿತ್ತು. ಯಾವ ಲೋಹದಿಂದ ನಾಣ್ಯವನ್ನು ಮಾಡಲಾಗಿದೆ ಮತ್ತು ಅದು ಎಷ್ಟು ಪರಿಶುದ್ಧವಾದುದು ಎಂಬುದರ ಮೇಲೆ ಆ ಕಾಲದ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳಬಹುದಾಗಿದೆ. ಗುಪ್ತರ ಮತ್ತು ಹರ್ಷವರ್ಧನರ ಬೆಳ್ಳಿ-ಬಂಗಾರದ ನಾಣ್ಯಗಳು ಅವರ ಆರ್ಥಿಕ ಸಮೃದ್ಧತೆಯನ್ನು ಸೂಚಿಸುತ್ತವೆ. ಅವು ಯಾವ ಯಾವ ಪ್ರದೇಶಗಳಲ್ಲಿ ದೊರೆತಿವೆ ಎಂಬುದರ ಆಧಾರದ ಮೇಲೆ ಪ್ರಾಚೀನ ಭಾರತದ ಸಾಮ್ರಾಜ್ಯಗಳ ವಿಸ್ತೀರ್ಣವನ್ನು ನಿಗದಿಪಡಿಸಬಹುದಾಗಿದೆ. ಅವುಗಳ ವಿನ್ಯಾಸ ಮತ್ತು ಉತ್ಪಾದನೆ ಸ್ವರೂಪದ ಆಧಾರದ ಮೇಲೆ ಆ

ಕಾಲದ ವೈಜ್ಞಾನಿಕ ಸಾಧನೆಯನ್ನು ಮತ್ತು ಕಲಾಕೌಶಲ್ಯವನ್ನು ತಿಳಿದುಕೊಳ್ಳಬಹುದಾಗಿದೆ. ಬೇರೆ ಬೇರೆ ಕಾಲಾವಧಿಯಲ್ಲಿ ಚಕ್ರವರ್ತಿಗಳು ನಡೆಸಿದ ಆಕ್ರಮಣಗಳ ಭೌಗೋಳಿಕ ಸ್ವರೂಪದ ಮೇಲೆ ನಾಣ್ಯಗಳು ಬೆಳಕು ಚೆಲ್ಲುತ್ತವೆ. ಒಂದು ಕಾಲಘಟ್ಟಕ್ಕೆ ಸಂಬಂಧಿಸಿದ ಭಾಷೆ ಮತ್ತು ಲಿಪಿಯ ಸ್ವರೂಪವನ್ನು ನಾಣ್ಯಗಳಿಂದ ತಿಳಿದುಕೊಳ್ಳಬಹುದಾಗಿದೆ. ಹೀಗೆ, ನಾಣ್ಯಗಳು ಇತಿಹಾಸ ಅಭ್ಯಾಸಕ್ಕೆ ಪ್ರಮಾಣಭೂತ ಆಕರಗಳಾಗಿವೆ.

### *33.2.5 ಸ್ಮಾರಕಗಳು*

ನಾಣ್ಯಗಳು ಮತ್ತು ಶಾಸನಗಳನ್ನು ಬಿಟ್ಟರೆ ಪ್ರಾಚೀನ ಕಾಲದ ಬಗೆಗಿನ ಮತ್ತೊಂದು ಆಕರವೆಂದರೆ ಕಟ್ಟಡಗಳು. ಇವು ಕಲ್ಲಿನ ಅಥವಾ ಲೋಹದ ವಿಗ್ರಹಗಳು ಕಲಾತ್ಮಕ ಕಟ್ಟಡಗಳು ಟೆರಾಕೋಟದ ಆಕೃತಿಗಳು, ಆಭರಣಗಳು, ಅಲಂಕಾರದ ಸುಗಂಧ ದ್ರವ್ಯಗಳು, ಮಡಕೆಗಳು ಮತ್ತು ಅನೇಕ ಇತರೆ ಅವಶೇಷಗಳಾಗಿವೆ. ಭಾರತೀಯ ಕಲೆಯ ವಿಕಾಸ ಮತ್ತು ಚರಿತ್ರೆಯನ್ನು ಗುರುತಿಸಲು ಇರುವ ಪ್ರಮುಖ ಮೂಲಗಳು. ಇವು ಸ್ಮಾರಕಗಳು, ವಾಸ್ತುಶಿಲ್ಪ ಮತ್ತು ಚಿತ್ರಕಲೆಗಳ ರೂಪದಲ್ಲಿಯೂ ದೊರೆಯುತ್ತವೆ. ಈ ನಿಟ್ಟಿನಲ್ಲಿ ಹರಪ್ಪಾ, ಮೊಹೆಂಜೊಧಾರೊ, ನಾಸಿಕ, ದಕ್ಷಿಣ ಬಿಹಾರ, ಪಾಟಲೀಪುತ್ರ, ತಕ್ಷಶಿಲೆ, ಔದ್, ಕಾಶಿ, ನಳಂದ, ನಾಗಾರ್ಜುನಕೊಂಡ, ಕನೋಜ, ಸಾರನಾಥ, ಸಾಂಚಿ ಅಯೋಧ್ಯ ಮುಂತಾದ ಕಡೆಗಳ ಸ್ಮಾರಕಗಳು ಉತ್ತರ ಭಾರತ ಇತಿಹಾಸ ಮತ್ತು ಸಂಸ್ಕೃತಿ ಅಭ್ಯಾಸಕ್ಕೆ ಯೋಗ್ಯ ಆಕರಗಳು.

ಭಾರತೀಯ ಆಧ್ಯಾತ್ಮಿಕತೆಯನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಪ್ರಮುಖ ಮೂಲವೆಂದರೆ ವಾಸ್ತು. ಆರಂಭದಲ್ಲಿ ಭಾರತೀಯ ವಾಸ್ತುವಿನ ಮೇಲೆ ಪ್ರಭಾವ ಬೀರಿದ ಸಂಗತಿಯೆಂದರೆ ಬೌದ್ಧಧರ್ಮ. ಬೌದ್ಧರ ಸ್ತೂಪಗಳು, ಚೈತ್ಯಾಲಯಗಳು, ವಿಹಾರಗಳು ಮುಂತಾದ ಕಟ್ಟಡಗಳಲ್ಲಿ ಇದನ್ನು ಕಾಣಬಹುದು. ಈ ಬಗ್ಗೆ ವಾಸ್ತು ಸ್ಮಾರಕಗಳ ಅಂದಿನ ಕಾಲದ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳನ್ನು ಅರಿತುಕೊಳ್ಳಬಹುದಾಗಿದೆ. ಜಾವದಲ್ಲಿರುವ ಶಿವಾಲಯ ಮತ್ತು ಮಧ್ಯ ಜಾವ ಪ್ರದೇಶದ ಬೃಹತ್ ದೇವಾಲಯಗಳ ಮೂರ್ತಿಗಳು ಜಾವದಲ್ಲಿ ಸ್ಥಾಪಿತವಾದ ಭಾರತೀಯ ವಸಾಹತುವಿನ ನೆಲೆ ಮತ್ತು ಭಾರತೀಯ ಸಂಸ್ಕೃತಿಯ ಹೊರದೇಶಗಳಲ್ಲಿ ಬೀರಿದ ಪ್ರಭಾವವನ್ನು ತಿಳಿಸುವ ಆಕರಗಳಾಗಿವೆ.

ಭಾರತದ ಪ್ರಾಚೀನ ವಾಸ್ತುವಿನ ಅಭಿವ್ಯಕ್ತಿಯನ್ನು ಸಿಂಧೂ ಕಣಿವೆಯ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ. ತಕ್ಷಶಿಲೆಯಲ್ಲಿ ನಡೆದ ಉತ್ಖನನ ನಮಗೆ ಕುಶಾನ ಮತ್ತು ಗಾಂಧಾರ ಕಲಾ ಪ್ರಕಾರದ ಬಗ್ಗೆ ಅಪಾರ ಮಾಹಿತಿ ಒದಗಿಸುತ್ತದೆ. ಭಾರತದ ಸಾಂಸ್ಕೃತಿಕ ಮತ್ತು ಧಾರ್ಮಿಕ ಚರಿತ್ರೆಯನ್ನು ಕಟ್ಟುವಲ್ಲಿ ವಾಸ್ತು ತುಂಬಾ ಉಪಯುಕ್ತ ಮಾಹಿತಿ ಒದಗಿಸಿದೆ. ಇನ್ನೊಂದು ಪ್ರಮುಖ ಆಕರವೆಂದರೆ ಚಿತ್ರಕಲೆ. ಪ್ರಾಚೀನ ಭಾರತೀಯರ ಧಾರ್ಮಿಕ ಮತ್ತು ಸಾಂಸ್ಕೃತಿಕ ಮನೋಭಾವದ ಬಗ್ಗೆ ಇದು ಮಾಹಿತಿ ಒದಗಿಸುತ್ತದೆ. ಪ್ರಾಚೀನ ಕಾಲದ ಚಿತ್ರಕಲೆಯು ಧಾರ್ಮಿಕ ವಿಷಯಗಳನ್ನು ಕೇಂದ್ರವಸ್ತುವನ್ನಾಗಿ ಹೊಂದಿರುವುದನ್ನು ನೋಡಬಹುದಾಗಿದೆ. ಅಜಂತ ಮತ್ತು ಎಲ್ಲೋರ ಗುಹೆಗಳಲ್ಲಿನ ಸುಂದರ ಚಿತ್ರಗಳು ಜನರು ಕಲೆಯ ಬಗ್ಗೆ ಇಟ್ಟುಕೊಂಡಿದ್ದ ಅಭಿರುಚಿಯನ್ನು ಸೂಚಿಸುತ್ತವೆ. ಅಜಂತಾದಲ್ಲಿ ಇಡೀ ಪ್ರಾಚೀನ ಭಾರತದ ವಿಹಂಗಮ ನೋಟಕ್ಕೆ ಸಾಕ್ಷಿಯಾಗಿ ಅಲ್ಲಿನ ಚಿತ್ರಗಳಿದ್ದಾವೆ.

## 33.3 ಸಾರಾಂಶ

ಪ್ರಾಚೀನ ಭಾರತ ಚರಿತ್ರೆಯ ಪ್ರಾಥಮಿಕ ಆಕರಗಳೆಂದರೆ ಶಾಸನಗಳು, ನಾಣ್ಯಗಳು ಮತ್ತು ಸ್ಮಾರಕಗಳನ್ನು ಒಳಗೊಂಡ ಪುರಾತತ್ವ ಸಾಮಾಗ್ರಿಗಳಾಗಿವೆ. ಅಶೋಕನ ಶಾಸನಗಳು, ಹಂತಿಗುಂಪ ಶಾಸನ, ಅಲಹಾಬಾದ್ ಕಂಬದ ಶಾಸನ, ಐಹೊಳೆ ಶಾಸನ, ಗಿರಿನಾರ್ ಶಾಸನ, ಗ್ವಾಲಿಯರ್ ಪ್ರಶಸ್ತಿ ಮುಂತಾದ ಅಂತಹ ಪ್ರಮುಖ ಆಕರಗಳಾಗಿವೆ. ಪ್ರಾಚೀನ ಭಾರತದ ಆಡಳಿತಾತ್ಮಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ವರೂಪವನ್ನು ಅವು ತಿಳಿಸಿಕೊಡುತ್ತವೆ. ಶಾಸನಗಳ ಆಧಾರದ ಮೇಲೆ ಲಿಪಿ ಮತ್ತು ಭಾಷೆಯ ಚರಿತ್ರೆಯನ್ನು ಕಟ್ಟಬಹುದಾಗಿದೆ. ನಾಣ್ಯಗಳ ಆಧಾರದ ಮೇಲೆ ಚಕ್ರವರ್ತಿಗಳ ಹೆಸರು, ಅವರ ಪಟ್ಟಾಭಿಷೇಕದ ದಿನಾಂಕ, ಅವರ ಅಭಿರುಚಿ, ಅವರ ಧಾರ್ಮಿಕ ನೀತಿ ಮುಂತಾದ ವಿಷಯಗಳನ್ನು ಗುರುತಿಸಬಹುದಾಗಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ನಾಣ್ಯಗಳು ಸಾಮ್ರಾಜ್ಯದ ಆರ್ಥಿಕ ಸಮೃದ್ಧತೆಯ ಸೂಚಿಗಳಾಗಿವೆ. ಭೌಗೋಳಿಕ ಸಂಗತಿಗಳು ಚಾರಿತ್ರಿಕ ಘಟನೆಗಳಿಗೆ ಹೇಗೆ ಕಾರಣವಾದವು ಎಂಬುದನ್ನು ಅವು ಸೂಚಿಸುತ್ತವೆ. ಶಾಸನಗಳು ಮತ್ತು ನಾಣ್ಯಗಳಂತೆ ವಾಸ್ತು, ಶಿಲ್ಪ ಮತ್ತು ಚಿತ್ರಕಲೆಗಳನ್ನು ಒಳಗೊಂಡ ಪುರಾತತ್ವ ಸ್ಮಾರಕಗಳು ಜನರ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಯನ್ನು ಅರಿತುಕೊಳ್ಳಲು ಪ್ರಮುಖ ಸಾಮಗ್ರಿಗಳಾಗಿವೆ. ಭಾರತೀಯ ಕಲೆ ಮತ್ತು ಆಧ್ಯಾತ್ಮಿಕತೆಯ ವಿಕಾಸ ಮತ್ತು ಬೆಳವಣಿಗೆಯ ಮೇಲೆ ಪುರಾತತ್ವ ಸ್ಮಾರಕ-ಸಾಮಗ್ರಿಗಳು ಬೆಳಕು ಚೆಲ್ಲುತ್ತವೆ. ಮೇಲ್ಕಾಣಿಸಿದ ಪುರಾತತ್ವ ಆಕರಗಳ ವಿಶ್ಲೇಷಣೆಯಿಂದ ತಿಳಿಯುವ ಅಂಶವೆಂದರೆ ಭಾರತೀಯರಲ್ಲಿ ಐತಿಹಾಸಿಕ ಪ್ರಜ್ಞೆ ಇರಲಿಲ್ಲವೆನ್ನುವ ಹೇಳಿಕೆ ಸಮಂಜಸವಲ್ಲ. ಉತ್ತರ ಭಾರತ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಇವೆಲ್ಲ ಅವಶ್ಯ ಮಾಹಿತಿ ನೀಡುತ್ತವೆ.

## 33.4 ಮಾದರಿ ಪ್ರಶ್ನೆಗಳು

1. ಉತ್ತರ ಭಾರತದ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನದಲ್ಲಿ ಪುರಾತತ್ವ ಆಕರಗಳ ಮಹತ್ವವನ್ನು ಕುರಿತು ಚರ್ಚಿಸಿರಿ.
2. ಕ್ರಿ.ಶ. ೧೩೦೦ ರವರೆಗೆ ಉತ್ತರ ಭಾರತದ ಚರಿತ್ರೆಯನ್ನು ಅಧ್ಯಯನ ಮಾಡುವಲ್ಲಿ ಶಾಸನಗಳು ಮತ್ತು ನಾಣ್ಯಗಳ ಮಹತ್ವವೇನು ಎಂಬುದನ್ನು ಪರಿಶೀಲಿಸಿ.

## 33.5 ಅಭ್ಯಾಸಕ್ಕೆ ಪುಸ್ತಕಗಳು


1. Altekar .A.S. : **Ancient India**
2. Majumdar .R.C.(Ed.) : **The Classical Age.**
3. Rangaswamy .C.V. : **Studies in Indian Culture**
4. Sharma .R.C. : **Ancient India**
5. Mittal .A.K. : **Political and Cultural History of India.**

## ಟಿಪ್ಪಣಿಗಳು

# ಘಟಕ - 34

## ಸಾಹಿತ್ಯಿಕ ಆಕರಗಳು

*ರಚನೆ*

**34.0** ಉದ್ದೇಶಗಳು

**34.1** ಪ್ರಸ್ತಾವನೆ

**34.2** ಸಾಹಿತ್ಯಿಕ ಆಕರಗಳು

**34.2.1** ವೇದಗಳು

**34.2.2** ಬ್ರಾಹ್ಮಣಗಳು ಮತ್ತು ಅರಣ್ಯಕಗಳು

**34.2.3** ಉಪನಿಷತ್ತುಗಳು ಮತ್ತು ಸ್ಮೃತಿಗಳು

**34.2.4** ಮಹಾಕಾವ್ಯಗಳು

**34.2.5** ಪುರಾಣಗಳು

**34.2.6** ಜೀವನ ಚರಿತ್ರೆ ಗ್ರಂಥಗಳು

**34.2.7** ಕಾಲಾನುಕ್ರಮಣಿಕೆ ವೃತ್ತಾಂತ, ರಾಜಕಾರಣ ಮತ್ತು ವ್ಯಾಕರಣಗಳು

**34.2.8** ಅಭಿಜಾತ ಸಂಸ್ಕೃತ ಸಾಹಿತ್ಯ

**34.2.9** ವೈಜ್ಞಾನಿಕ ಕೃತಿಗಳು

**34.2.10** ಬೌದ್ಧ ಸಾಹಿತ್ಯ

**34.2.11** ಜೈನ ಸಾಹಿತ್ಯ

**34.3** ವಿದೇಶ ಪ್ರವಾಸಿಗರ ವೃತ್ತಾಂತ

**34.3.1** ಗ್ರೀಕ್ ಬರಹಗಾರರು

**34.3.2** ಚೀನಾದ ಬರವಣಿಗೆಗಾರರು

**34.3.3** ಟಿಬೇಟ್ ಯಾತ್ರಿಕರು

**34.3.4** ಮುಸ್ಲಿಂ ಯಾತ್ರಿಕರ ಬರವಣಿಗೆಗಳು

**34.4** ಸಾರಾಂಶ

**34.5** ಮಾದರಿ ಪ್ರಶ್ನೆಗಳು

**34.6** ಅಭ್ಯಾಸಕ್ಕೆ ಪುಸ್ತಕಗಳು

## 34.0 ಉದ್ದೇಶಗಳು

ಈ ಘಟಕವನ್ನು ಅಭ್ಯಾಸ ಮಾಡುವುದರಿಂದ

1. ಉತ್ತರ ಭಾರತದ ಚರಿತ್ರೆ ಮತ್ತು ಸಂಸ್ಕೃತಿ ಕುರಿತಂತೆ ದೊರೆತಿರುವ ಬ್ರಾಹ್ಮಣ, ಬೌದ್ಧ ಮತ್ತು ಜೈನ ಸಾಹಿತ್ಯ ಆಕರ ಸಾಮಗ್ರಿಯ ಮಹತ್ವವನ್ನು,
2. ವಿದೇಶಿ ಪ್ರವಾಸಿಗರ ವೃತ್ತಾಂತವು ಅಧ್ಯಯನಕ್ಕೆ ಹೇಗೆ ಉಪಯುಕ್ತವಾಗುತ್ತದೆ ಎಂಬುದನ್ನು,
3. ವಿದೇಶಿ ಪ್ರವಾಸಿಗರು ನಮ್ಮ ಭಾಷೆ, ಆಚರಣೆಗಳು ಮತ್ತು ಸಂಪ್ರದಾಯಗಳಿಗೆ ವಿದೇಶೀಯರಾಗಿದ್ದರು. ಇಲ್ಲಿನ ಚಾರಿತ್ರಿಕ ಸಂಗತಿಗಳ ಬಗ್ಗೆ ಬರೆಯುವಾಗ ಅವರು ಕಟ್ಟುಕತೆ ಕಲ್ಪನೆ ಮಾಡಿಕೊಂಡ ಸಂಗತಿಗಳನ್ನು ಬರೆದಿರುವರು. ಇಂತಹವುಗಳನ್ನು ಆಕರ ಸಾಮಗ್ರಿಯಾಗಿ ಬಳಸುವಾಗ ಯಾವ ಎಚ್ಚರಿಕೆ ಇಟ್ಟುಕೊಳ್ಳಬೇಕು ಎಂಬುದು ತಿಳಿಯಲು ಈ ಘಟಕದ ಅಭ್ಯಾಸ ನೆರವಾಗುತ್ತದೆ.

## 34.1 ಪ್ರಸ್ತಾವನೆ

ಆಕರಗಳು ಎಂದರೆ ಗತಕಾಲಕ್ಕೆ ಸೇರಿದ ಸಾಮಗ್ರಿಗಳು. ಅವುಗಳ ಆಧಾರದಿಂದ ಪ್ರಾಚೀನ ಭಾರತದ ಇತಿಹಾಸವನ್ನು ಪುನರ್ ರಚಿಸಬಹುದಾಗಿದೆ. ಇಲ್ಲಿನ ಸೂತ್ರವೆಂದರೆ ಆಕರವಿಲ್ಲವೆಂದರೆ ಚರಿತ್ರೆಯಿಲ್ಲ. ಇತಿಹಾಸಪೂರ್ವ ಬುಡಕಟ್ಟು ಸಮಾಜದಿಂದ ಇಂದಿನ ಗಣಕಯುಗದವರೆಗಿನ ಭಾರತೀಯ ಇತಿಹಾಸವನ್ನು ಚಾರಿತ್ರಿಕ ವಿವಿಧ ರೂಪದಲ್ಲಿರುವ, ಇಂತಹ ಚಾರಿತ್ರಿಕ ಸಾಮಗ್ರಿಗಳನ್ನು ಆಕರಗಳೆಂದು ಕರೆಯುತ್ತೇವೆ. ಪ್ರಾಚೀನ ಭಾರತದ ಇತಿಹಾಸದ ವಿದ್ಯಾರ್ಥಿಗಳು ಎದುರಿಸಬೇಕಾಗಿರುವ ಸಮಸ್ಯೆಯೆಂದರೆ ಚಾರಿತ್ರಿಕ ಸಾಮಗ್ರಿಗಳ ಅಲಭ್ಯತೆ. ಪ್ರೊ. ನೀಲಕಂಠಶಾಸ್ತ್ರಿಗಳು ಹೇಳುವಂತೆ ಭಾರತದ ಇತಿಹಾಸವನ್ನು ಹೇಗೆ ಬರೆಯಲಾಗಿದೆಯೆಂದರೆ ಅಲ್ಲಿ ಭಾರತವೇ ಗೈರು ಹಾಜರಾಗಿದೆ. ಚಾರಿತ್ರಿಕ ಸಾಮಗ್ರಿಗಳನ್ನು ಜೋಪಾನವಾಗಿ ಕಾಯ್ದಿಡುವ ಮಹತ್ವ ಭಾರತೀಯರಿಗೆ ತಿಳಿದಿರಲಿಲ್ಲವೆಂಬುದು ಇದರಿಂದ ಸೂಚಿತವಾಗುತ್ತದೆ. ಈ ಕಾರಣದಿಂದಾಗಿ ತುಂಬಾ ಮಹತ್ವದ ಬೌದ್ಧಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳು ನಡೆದಿದ್ದರೂ ಕೂಡ ಒಬ್ಬ ಹೆರೋಡೋಟಿಸ್ ಅಥವಾ ಥುಸಿಡೈಡ್ಸ್ ಅಥವಾ ಲೈವಿ ಅಥವಾ ಟಾಕ್ಟಿಟಸ್‌ನಂತಹ ಒಬ್ಬ ಚರಿತ್ರಾಕಾರನನ್ನು ಭಾರತಕ್ಕೆ ಸೃಷ್ಟಿಸುವುದು ಸಾಧ್ಯವಾಗಲಿಲ್ಲ. ಏನೆಲ್ಲ ಚಾರಿತ್ರಿಕ ಸಾಹಿತ್ಯ ಲಭ್ಯವಿತ್ತೋ ಅದೆಲ್ಲ ವಿದೇಶಿ ಆಕ್ರಮಣದಿಂದಾಗಿ ನಾಶವಾಗಿ ಹೋಯಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ಆಲ್‌ಬರುನಿ ಹೇಳಿದ ಕೆಳಗಿನ ಮಾತುಗಳು ಸರಿಯೆನಿಸುತ್ತವೆ.

"ಹಿಂದೂಗಳು ಚಾರಿತ್ರಿಕ ಸಂಗತಿಗಳ ಬಗ್ಗೆ ಹೆಚ್ಚು ಗಮನ ನೀಡಲಿಲ್ಲ. ಚಾರಿತ್ರಿಕ ಸಂಗತಿಗಳ ಕಾಲಾನುಕ್ರಮ ವಿವರಣೆಗೆ ಅವರು ಲಕ್ಷ್ಯ ನೀಡಲಿಲ್ಲ. ಈ ಬಗೆಯ ಮಾಹಿತಿಗಾಗಿ ತುಂಬಾ ಒತ್ತಾಯ ಮಾಡಿದರೆ ಏನನ್ನು ತೋಚದೆ ಅವರು ಅನಿವಾರ್ಯ ಕಥೆ ಹೇಳುತ್ತಾರೆ". ಜೆ.ಎಫ್. ಫ್ಲೀಟ್ ಮತ್ತು ಆರ್.ಎಸ್. ತ್ರಿಪಾಠಿಯವರು ಸಹ ಭಾರತೀಯರು ಐತಿಹಾಸಿಕ ಘಟನೆಗಳ ಅಧ್ಯಯನಕ್ಕೆ ಗಮನ ಕೊಡಲಿಲ್ಲವೆನ್ನುತ್ತಾರೆ.

***ಪ್ರಾಚೀನ ಭಾರತೀಯ ಚರಿತ್ರೆಯ ಆಕರಗಳು***

ಭಾರತೀಯ ಚರಿತ್ರೆಯ ಆರಂಭಕಾಲದ ಆಕರಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ೧. ಸಾಹಿತ್ಯಿಕ ಆಕರಗಳು, ೨. ಪುರಾತತ್ವ ಆಕರಗಳು.

ಸಾಹಿತ್ಯಿಕ ಆಕರಗಳೆಂದರೆ ಭಾರತೀಯರೆ ರಚಿಸಿರುವ ಪ್ರಾಚೀನ ಪವಿತ್ರ ಕೃತಿಗಳು, ಸಾಂಪ್ರದಾಯಿಕ ಸಾಹಿತ್ಯ, ಚಾರಿತ್ರಿಕ ಸಾಹಿತ್ಯ ಮುಂತಾದವು ಮತ್ತು ವಿದೇಶಿ ಪ್ರವಾಸಿಗರು ದಾಖಲಿಸಿರುವ ವಿವರಗಳು.

## 34.2 ಸಾಹಿತ್ಯಿಕ ಆಕರಗಳು

ಸಾಹಿತ್ಯಿಕ ಆಕರಗಳನ್ನು ಧಾರ್ಮಿಕ ಮತ್ತು ಧರ್ಮೇತರ ಸಾಹಿತ್ಯವೆಂದು ವಿಂಗಡಿಸಬಹುದು. ಧಾರ್ಮಿಕ ಸಾಹಿತ್ಯವು

1. ಬ್ರಾಹ್ಮಣ ಸಾಹಿತ್ಯಿಕ ಆಕರಗಳು
2. ಬೌದ್ಧ ಸಾಹಿತ್ಯಿಕ ಆಕರಗಳು ಮತ್ತು
3. ಜೈನ ಸಾಹಿತ್ಯಿಕ ಆಕರಗಳನ್ನು ಒಳಗೊಂಡಿದೆ.

*ಬ್ರಾಹ್ಮಣ ಸಾಹಿತ್ಯಿಕ ಆಕರಗಳು*

ಬ್ರಾಹ್ಮಣ ಸಾಹಿತ್ಯದ ಬೃಹತ್ ಗಣಿ ಭಾರತವೆಂದು ಹೇಳಬಹುದು. ಪ್ರಾಚೀನ ಭಾರತದ ಚರಿತ್ರೆಯ ಪುನರ್ ರಚನೆಯಲ್ಲಿ ಅವು ಮಹತ್ವದ ಪಾತ್ರ ನಿರ್ವಹಿಸಿವೆ.

### *34.2.1 ವೇದಗಳು*

ಆರ್ಯರ ಜೀವನದ ವಿವಿಧ ಆಯಾಮಗಳ ಮೇಲೆ ಬೆಳಕು ಚೆಲ್ಲುವ ಗ್ರಂಥಗಳೇ ವೇದಗಳು. ವೇದಗಳು ನಾಲ್ಕು - ಋಗ್ವೇದ, ಯಜುರ್ವೇದ, ಅಥರ್ವಣವೇದ ಮತ್ತು ಸಾಮವೇದ. ಇವು ಪ್ರಾಚೀನ ಬ್ರಾಹ್ಮಣ ಸಾಹಿತ್ಯ ಕೃತಿಗಳಾಗಿವೆ. ಆರ್ಯರ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸಂಗತಿಗಳನ್ನು ಅರಿತುಕೊಳ್ಳಲು ಅವು ತುಂಬಾ ಸಹಾಯಕವಾಗುತ್ತವೆ. ಆರ್ಯರು ನೆಲಸಿದ ಭೌಗೋಳಿಕ ಪ್ರದೇಶದ ವಿವರ ಅವುಗಳಲ್ಲಿ ದೊರೆಯುತ್ತದೆ. ಅವರ ಪ್ರಕೃತಿ ಆರಾಧನೆಯ ಬಗ್ಗೆ ಮಾಹಿತಿ ಅಲ್ಲಿ ದೊರೆಯುತ್ತದೆ.

### *34.2.2 ಬ್ರಾಹ್ಮಣಗಳು ಮತ್ತು ಅರಣ್ಯಕಗಳು*

ಬ್ರಾಹ್ಮಣಗಳು ವೈದಿಕ ಯಜ್ಞಗಳ ತತ್ವಗಳನ್ನು (ನಿಯಮಗಳು) ಧಾರ್ಮಿಕ ಆಚರಣೆಯ ವಿಧಿವಿಧಾನಗಳನ್ನು ವಿವರಿಸುತ್ತದೆ. ವೈದಿಕ ಶ್ಲೋಕಗಳು ಮತ್ತು ಸಂಹಿತೆಗಳು ಇವುಗಳಲ್ಲಿ ಅಡಕವಾಗಿವೆ. ಐತರೀಯ ಶತಪತ, ಪಂಚವಿಷ್ ಮತ್ತು ಗೋಪತ ಇತ್ಯಾದಿ ಪ್ರಮುಖ ಬ್ರಾಹ್ಮಣಕಗಳು ಮತ್ತು ಅರಣ್ಯಕಗಳು ಆರ್ಯರ ಸಾಮಾಜಿಕ ಮತ್ತು ಧಾರ್ಮಿಕ ಜೀವನವನ್ನು ತಿಳಿಸುತ್ತವೆ. ಗುರುವಿನ ಸನ್ನಿಧಾನದಲ್ಲಿ ಪಡೆದ ಜ್ಞಾನದಿಂದ ಬರೆದ ಗ್ರಂಥಗಳಿಗೆ ಉಪನಿಷತ್ತುಗಳೆಂದು ಕರೆಯುತ್ತೇವೆ. ಇವುಗಳಲ್ಲಿ ವಿರ್ರಹದ್‌ರಣ್ಯಕ (Vrihadaranyak) ಮತ್ತು ಛಂದೋಗ್ಯ (Chhandogya) ಉಪನಿಷತ್ತುಗಳು ವೇದಗಳ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಜೀವನ ತಿಳಿಯಲು ಸಹಾಯಕ ಆಕರಗಳಾಗಿವೆ.

### *34.2.3 ಉಪನಿಷತ್ತುಗಳು ಮತ್ತು ಸ್ಮೃತಿಗಳು*

ಇವುಗಳು ಆರ್ಯರ ಸಮಕಾಲೀನ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳನ್ನು ತಿಳಿಯುವಲ್ಲಿ ಸಹಕಾರಿಯಾಗಿವೆ. ವೇದಗಳ ನಿರ್ದಿಷ್ಟ ಆರು ವಿಚಾರಗಳನ್ನು, ಅಂದರೆ ಶಿಕ್ಷೆ, ಕಲ್ಪ, ವ್ಯಾಕರಣ, ನಿರುಕ್ತ ಛಂದ ಮತ್ತು ಜ್ಯೋತಿಷ್ಯ ವಿಷಯಗಳ ಅಧ್ಯಯನ ವೇದಾಂಗಗಳಲ್ಲಿ ಕಾಣುತ್ತೇವೆ. ಧರ್ಮಸೂತ್ರಗಳು ಪ್ರಾಚೀನ ಭಾರತದ ಸಾಮಾಜಿಕ-ಧಾರ್ಮಿಕ ಜೀವನದ ಮೇಲೆ ಬೆಳಕು ಬೀರಿವೆ.

ಮನುಸ್ಮೃತಿ, ನಾರದ ಸ್ಮೃತಿ ಮತ್ತು ಯಜ್ಞವಲ್ಕ್ಯ ಮುಂತಾದ ಸ್ಮೃತಿಗಳು ಆಯಾಕಾಲದ ಸಾಮಾಜಿಕ ವ್ಯವಸ್ಥೆ ಮತ್ತು ಆಚರಣೆಗಳನ್ನು ಮತ್ತು ಸ್ತ್ರೀಯರ ಸ್ಥಿತಿಗಳನ್ನು ಅರಿಯಲು ಸಹಾಯಕವಾಗಿವೆ.

### 34.2.4 ಮಹಾಕಾವ್ಯಗಳು

ಆ ಕಾಲದ ಜನರು ಜೀವನದ ಸ್ಪಷ್ಟ ಚಿತ್ರವನ್ನು ನೀಡುವ ಎರಡು ಮಹಾಕಾವ್ಯಗಳೆಂದರೆ ರಾಮಾಯಣ ಮತ್ತು ಮಹಾಭಾರತ. ಈ ಮಹಾಕಾವ್ಯಗಳನ್ನು ಪೌರಾಣಿಕ ಕಥನ ಕೃತಿಗಳೆಂದು ಪರಿಗಣಿಸಿದ್ದರೂ ಅವು ಆರ್ಯರು ಮತ್ತು ಆರ್ಯೇತರ ನಡುವಿನ ಘರ್ಷಣೆ ಬಗ್ಗೆ ಹಾಗೂ ಆರ್ಯರು ಹೇಗೆ ಆರ್ಯೇತರರನ್ನು ಸೋಲಿಸುವಲ್ಲಿ ಯಶಸ್ವಿಯಾದರೂ ಎಂಬುದರ ಬಗ್ಗೆ ಚಾರಿತ್ರಿಕ ಸಾಮಗ್ರಿಯನ್ನು ಒದಗಿಸುತ್ತವೆ. ಅಂದು ಚಕ್ರವರ್ತಿಗಳು ತಮ್ಮ ಸಾರ್ವಭೌಮತ್ವವನ್ನು ಹೇಗೆ ಪ್ರತಿಷ್ಠಾಪಿಸಿಕೊಳ್ಳುತ್ತಿದ್ದರು, ಚಕ್ರವರ್ತಿಗಳ ಅಧಿಕಾರ ಬಲ ಎಷ್ಟೊಂದು ಅಗಾಧವಾಗಿತ್ತು ಎಂಬುದರ ಬಗ್ಗೆ ಅಲ್ಲಿ ಉಲ್ಲೇಖವಾಗಿರುವ ಅಶ್ವಮೇಧಯಜ್ಞದ ವಿವರಗಳಿಂದ ತಿಳಿಯುತ್ತದೆ. ದಶರಥ, ರಾಮ, ಯುಧಿಷ್ಠರ, ದುರ್ಯೋಧನ ಮುಂತಾದ ಹೆಸರುಗಳು ಅಲ್ಲಿ ಉಲ್ಲೇಖಗೊಂಡಿವೆ. ಆರ್ಯರು ದಕ್ಷಿಣ ಭಾರತದ ಕಡೆ ಸಾಧಿಸಿಕೊಂಡ ವಿಸ್ತರಣೆ ಹಾಗೂ ಪರಬ್ರಹ್ಮದ ಕಲ್ಪನೆ ಮತ್ತು ವಿಗ್ರಹರಾಧನೆ ಹುಟ್ಟಿಕೊಂಡ ಬಗೆ ಕುರಿತ ವಿವರಗಳು ರಾಮಾಯಣದಲ್ಲಿ ದೊರೆಯುತ್ತವೆ. ಪ್ರಾಚೀನ ಭಾರತದ ರಾಯಭಾರಿಯಾದ ಶ್ರೀಕೃಷ್ಣನ ವ್ಯಕ್ತಿತ್ವವನ್ನು ಮಹಾಭಾರತ ಕಾವ್ಯಾದ ಆಧಾರದ ಮೇಲೆ ಅಂದಾಜು ಮಾಡಬಹುದಾಗಿದೆ. ಭಗವದ್ಗೀತೆಯು ನಿಷ್ಕಾನುಕರ್ಮ ಪರಿಭಾವನೆಯ ವಿವರ ನೀಡುತ್ತದೆ. ಮಹಾಕಾವ್ಯಗಳಿಂದ ಅಂದು ಆಚರಣೆಯಲ್ಲಿದ್ದ ದುಷ್ಟ ಆಚರಣೆಗಳಾದ ಜೂಜೂ, ಬಹುಪತ್ನಿತ್ವ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಸ್ವಯಂವರ ಮುಂತಾದ ಆಚರಣೆ ಬಗ್ಗೆಯು ಅಲ್ಲಿ ಮಾಹಿತಿ ದೊರೆಯುತ್ತದೆ. ಡಾ. ಆರ್.ಎಸ್. ತ್ರಿಪಾಠಿಯವರು "ಮಹಾಕಾವ್ಯಗಳು ಅದ್ಭುತವಾದ ಸಾಮಾಜಿಕ, ಧಾರ್ಮಿಕ ಮತ್ತು ಆಧ್ಯಾತ್ಮ ವಿಷಯ ತಿಳಿಸುತ್ತದೆ. ಕಾಲ ಕ್ರಮೇಣ ರಾಜಕೀಯ ಘಟನೆಗಳ ವೃತ್ತಾಂತ ತಿಳಿಯುವಲ್ಲಿ ಅವುಗಳನ್ನು ಎಚ್ಚರಿಕೆಯಿಂದ ನೋಡಬೇಕಾಗಿದೆ" ಎಂದು ಹೇಳಿದ್ದಾರೆ.

### 34.2.5 ಪುರಾಣಗಳು

ಸಂಸ್ಕೃತದಲ್ಲಿರುವ ಹಿಂದೂಗಳ ಗ್ರಂಥಗಳೇ ಪುರಾಣಗಳು. ಭಾರತೀಯ ಚರಿತ್ರೆಯ ಪುರಾತನತೆ ಬಗ್ಗೆ ಅವು ವ್ಯವಸ್ಥಿತ ದಾಖಲೆಗಳಾಗಿವೆ. ಒಟ್ಟು ೧೮ ಪುರಾಣಗಳಿವೆ. ಈ ಪುರಾಣಗಳನ್ನು ಕ್ರಿ.ಶ. ೩ನೆಯ ಶತಮಾನದಿಂದ ಕ್ರಿ.ಶ. ೧೦೦೦ ದವರೆಗಿನ ಕಾಲಾವಧಿಯಲ್ಲಿ ಬರೆಯಲಾಗಿದೆ ವ್ಯಾಸ ರಚಿತವೆಂದು ಹೇಳಲಾಗಿರುವ ವಿಷ್ಣು ಪುರಾಣ, ಭವಿಷ್ಯ ಪುರಾಣ, ವಾಯು ಪುರಾಣ, ಬ್ರಹ್ಮಾಂಡ ಪುರಾಣ, ಭಾಗವತ ಪುರಾಣ, ಪದ್ಮಪುರಾಣ, ಮತ್ಸ್ಯ ಪುರಾಣಗಳು ಅತಿ ಪ್ರಾಚೀನವಾದವುಗಳೆಂದು ನಂಬಲಾಗಿದೆ.

ಪ್ರತಿಪುರಾಣದಲ್ಲೂ ಪರಿಚ್ಛೇದಗಳಿರುತ್ತವೆ. ಅವುಗಳು ಹೀಗಿವೆ. ೧. ಸರ್ಗ (ಬ್ರಹ್ಮಾಂಡ ಜನ) ೨. ಪ್ರತಿಸರ್ಗ (ಬ್ರಹ್ಮಾಂಡದ ಪುನರ್ ನಿರ್ಮಾಣ) ೩. ವಂಶ (ದೇವತೆ ಮತ್ತು ಋಷಿಗಳ ವಂಶಾವಳಿ) ೪. ಮನ್ವಂತರ (ಮಹಾಯುಗದ ಕಾಲ) ೫. ವಂಶ ಚರಿತ (ಪ್ರಾಚೀನ ರಾಜಮನೆತನಗಳ ವಂಶಾವಳಿ). ಪುರಾಣಗಳಲ್ಲಿ ಪ್ರಾಚೀನ ಸಾಮ್ರಾಜ್ಯಗಳ ಕಾಲಾನುಕ್ರಮಣಿಕೆ ಹಾಗೂ ವಂಶಾವಳಿ ವಿವರಗಳು ದೊರೆಯುತ್ತವೆ. ಪ್ರಾಚೀನ ಭಾರತದ ಚಾರಿತ್ರಿಕ ಭೌಗೋಳವನ್ನು ಪರಿಭಾವಿಸಿಕೊಳ್ಳಲು ಅವು ನೆರವಾಗುತ್ತವೆ. ವಾಯು ಮತ್ತು ಮತ್ಸ್ಯ ಪುರಾಣಗಳು ಮೌರ್ಯ ಮತ್ತು ಗುಪ್ತ ಸಾಮ್ರಾಜ್ಯಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಭಾರತದ ಧಾರ್ಮಿಕ, ಆರ್ಥಿಕ, ರಾಜಕೀಯ ಸನ್ನಿವೇಶ ಕುರಿತ ಚಿತ್ರವನ್ನು ಪುರಾಣಗಳು ನೀಡುತ್ತವೆ. ಪುರಾಣಗಳ ಬಗ್ಗೆ

ಇರುವ ತೊಂದರೆಯೆಂದರೆ ಅವುಗಳ ನಡುವೆ ಪರಸ್ಪರ ವೈರುಧ್ಯಗಳಿವೆ. ಒಂದು ನಿರ್ದಿಷ್ಟ ಪ್ರಸಂಗದ ಬಗ್ಗೆ ವಿವಿಧ ಪುರಾಣಗಳು ವಿವಿಧ ವಿವರಣೆ ನೀಡುತ್ತವೆ. ಅವುಗಳಲ್ಲಿ ಅನೇಕ ಪ್ರಕ್ಷೇಪ ಭಾಗಗಳಿವೆ. ಘಟನೆ ನಡೆದ ಬಹಳ ಕಾಲದ ನಂತರ ಬರೆದಿರುವುದರಿಂದಾಗಿ ಅವುಗಳ ನಡುವೆ ಹೊಸದಾಗಿ ಸೇರಿರುವ ಭಾಗಗಳು ಕಂಡು ಬರುತ್ತವೆ. ಈ ಪುರಾಣಗಳಲ್ಲಿ ಕಟ್ಟುಕತೆ ಮತ್ತು ಚರಿತ್ರೆಯ ಮಿಶ್ರಣವಿದೆ. ಈ ಎಲ್ಲ ಲೋಪದೋಷಗಳಿದ್ದರೂ, ಮಹಾಕಾವ್ಯಯುಗದಿಂದ ಬುದ್ಧನ ಯುಗದವರೆಗಿನ ಕಾಲಖಂಡದ ಬಗ್ಗೆ ಪುರಾಣಗಳು ನಮಗೆ ಅಮೂಲ್ಯ ಮಾಹಿತಿ ಒದಗಿಸುತ್ತವೆ.

### *34.2.6 ಜೀವನ ಚರಿತ್ರೆ ಗ್ರಂಥಗಳು*

ಈ ವರ್ಗದಲ್ಲಿ ಅನೇಕ ಜೀವನ ಚರಿತ್ರೆಗಳು ಸೇರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಬಾಣನ **ಹರ್ಷಚರಿತ** ಕವಿ ವಾಕ್ಪತಿಯ ಪ್ರಾಕೃತ ಕೃತಿ **ಗೌಡವಾಹೋ** ಮತ್ತು ಬಿಲ್ಹಣನ **ವಿಕ್ರಮಾಂಕ ಚರಿತೆ.** ಬಿಲ್ಹಣನು ತನ್ನ ಕೃತಿಯಲ್ಲಿ ಯಗೋವರ್ಮನ್ ಮತ್ತು ವಿದ್ರಮಾದಿತ್ಯನ ಸಾಹಸಗಳನ್ನು ಬಣ್ಣಿಸುತ್ತಾನೆ. **ರಾಮ ಚರಿತವು** ಬಂಗಾಳದ ದೊರೆ ರಾಮ್‌ಪಾಲ್‌ನ ಕಥೆ ಹೇಳುತ್ತದೆ. ಚೌಂದ್‌ಬರ್ದಾಯಿಯ **ಪೃಥ್ವೀರಾಜ ರಾಸೋ** ಮತ್ತು ಹೇಮಚಂದ್ರನ **ಕುಮಾರಪಾಲ ಚರಿತ್ರೆ** ಈ ಕಾಲದ ಇತರ ಮಹತ್ತರ ಜೀವನ ಚರಿತ್ರೆಗಳಾಗಿವೆ. ಇವು ಪ್ರಾಚೀನ ಭಾರತದ ಅಧಿಕೃತ ಚರಿತ್ರೆಯನ್ನೇನು ಕೊಡುವುದಿಲ್ಲ. ಆದರೆ ಅವು ಯುಗಕ್ಕೆ ಸಂಬಂಧಿಸಿದ ಐತಿಹಾಸಿಕ ಸಂಗತಿಗಳ ವಿವರಣೆಗಳನ್ನು ಇವುಗಳಲ್ಲಿ ಕಾಣುತ್ತೇವೆ. ವಾಕ್ಪತಿ **ಗೌಡವಾಹೋ** ಗ್ರಂಥದಲ್ಲಿ ಕನೋಜದ ರಾಜ ಯಶೋವರ್ಮನ **ಘಾರ್ಗಿಯ ಸಂಹಿತೆ** ಭಾರತದ ಮೇಲೆ ಯವಣರ ಧಾಳಿಯನ್ನು ವಿವರಿಸುತ್ತದೆ. ಪರಿಮಳಗುಪ್ತನು ರಚಿಸಿದ **ನವಶಶಾಂಕ ಚರಿತ್ರೆ** ಪಾರ್ಮರ ಮನೆತನದ ಮೂಲವನ್ನು ಹೇಳುವುದು.

ಹರ್ಷನ ಕವಿ ಬಾಣನು ರಚಿಸಿದ ಹರ್ಷಚರಿತೆ ಮುಖ್ಯವಾದ ಕೃತಿಯಾಗಿದ್ದು, ಎಂಟು ಅಧ್ಯಾಯಗಳನ್ನು ಹೊಂದಿದೆ. ಕೆಳಗಿನ ವಿಷಯಗಳನ್ನು ಸಂಗ್ರಹಿಸಲು **ಹರ್ಷ ಚರಿತ** ನೆರವಾಗಿದೆ.

* ರಾಜ್ಯವರ್ಧನ - ಹರ್ಷ ಮತ್ತು ಸಹೋದರಿ ರಾಜ್ಯಶ್ರೀಯ ಬಾಲ್ಯ ಜೀವನ
* ಕ್ರಿ.ಶ. ೭ನೇ ಶತಮಾನದ ಉತ್ತರ ಭಾರತದ ರಾಜಕೀಯ ಸ್ಥಿತಿ-ಗತಿಗಳು.
* ಥಾಣೇಶ್ವರ ನಗರದ ವರ್ಣನೆ ಮತ್ತು ಆಡಳಿತ ಕ್ರಮ.
* ಹೂಣರ, ಮಾಳ್ವರ, ಬಂಗಾಳದ ದೊರೆ ಶಶಾಂಕನ ಮೇಲಿನ ದಿಗ್ವಿಜಯಗಳನ್ನು ಮತ್ತು ದಕ್ಷಿಣದ ಬಾದಾಮಿ ಚಾಲುಕ್ಯರ ದೊರೆ ಎರಡನೇ ಪುಲಕೇಶಿ ಮಾಡಿದ ಯುದ್ಧ ವಿಚಾರ ಮತ್ತು
* ಹರ್ಷವರ್ಧನನು ಬೌದ್ಧಧರ್ಮ ಪ್ರಸಾರದ ಹಿನ್ನೆಲೆಯಲ್ಲಿ ನಡೆಸಿದ ಪ್ರಯಾಗ ಧರ್ಮ ಸಭೆಯ ಬಗ್ಗೆ ತಿಳಿದುಕೊಳ್ಳಲು ಉತ್ತಮ ಆಕರವಾಗಿದೆ.

### *34.2.7 ಕಾಲಾನುಕ್ರಮಣಿಕೆ ವೃತ್ತಾಂತಗಳು, ರಾಜಕಾರಣ ಮತ್ತು ವ್ಯಾಕರಣ ಗ್ರಂಥಗಳು*

*ಕಲ್ಹಣನ ರಾಜತರಂಗಿಣಿ*

ಇದರ ಹೆಸರಿಗೆ ತಕ್ಕುದಾದ ನಂಬಲರ್ಹವಾದ ೧೨ನೇ ಶತಮಾನಕ್ಕೆ ಸೇರಿದ ಐತಿಹಾಸಿಕ ಕಾಲಾನುಕ್ರಮಣಿಕೆ ಗ್ರಂಥವಾಗಿದೆ. ಇದು ಕಾಶ್ಮೀರದ ಅಧಿಕೃತ ಚರಿತ್ರೆಯನ್ನು ಒಳಗೊಂಡಿದೆ. ಕಲ್ಹಣನ ರಾಜತರಂಗಿಣಿ ಕಾಶ್ಮೀರವನ್ನಾಳಿದ ವಿವಿಧ ಮನೆತನಗಳ ವಂಶಾವಳಿಯನ್ನು ತಿಳಿಸುತ್ತದೆ. ಕಲ್ಹಣನು ಭಾರತದ ಶ್ರೇಷ್ಠ ಇತಿಹಾಸಕಾರ. ಈತನ ತಂದೆ ಹರ್ಷನ ಮಂತ್ರಿಯಾಗಿದ್ದನು. ತನಗೆ

ಲಭ್ಯವಾದ ಶಾಸನಗಳನ್ನು, ಪ್ರಾಚೀನ ನಾಣ್ಯಗಳನ್ನು ಮತ್ತು ಸಾಹಿತ್ಯಕ ಸ್ಮಾರಕ-ಅವಶೇಷಗಳನ್ನು ಮತ್ತು ಕಾಲಗಣನೆ ಶಾಸ್ತ್ರವನ್ನು ಮೂಲಾಧಾರಗಳನ್ನಾಗಿ ಬಳಸಿಕೊಂಡು ಕಾಶ್ಮೀರದ ಇತಿಹಾಸವನ್ನು ಕ್ರಿ.ಶ. ೧೧೫೦ ರಲ್ಲಿ ತನ್ನ ಕೃತಿ ರಾಜತರಂಗಿಣಿಯಲ್ಲಿ ವಿಶ್ಲೇಷಿಸಿದ್ದಾನೆ. ಈ ಕೃತಿಯಲ್ಲಿನ ೭ನೇ ಶತಮಾನದವರೆಗಿನ ಘಟನೆಗಳು ಕಟ್ಟುಕತೆ ಮತ್ತು ಐತಿಹ್ಯಗಳಿಂದ ಕೂಡಿದೆ. ಉದಾಹರಣೆಗೆ ರಾಣಾದಿತ್ಯನು ೩೦೦ ವರ್ಷರಾಜ್ಯಭಾರ ಮಾಡಿದನೆನ್ನುವ ಹೇಳಿಕೆ ಅಸತ್ಯದಿಂದ ಕೂಡಿದೆ. ಆದರೆ ಕ್ರಿ.ಶ. ೭ನೇ ಶತಮಾನದಿಂದ ೧೨ನೇ ಶತಮಾನದವರೆಗಿನ ಕಾಶ್ಮೀರದ ಇತಿಹಾಸ ರಾಜತರಂಗಿಣಿಯಲ್ಲಿ ಅಧಿಕೃತ ಚರಿತ್ರೆ ಅಥವಾ ವಸ್ತು ನಿಷ್ಠ ಇತಿಹಾಸವಾಗಿದೆ. ಕಾರಣ ಕಲ್ಹಣ ಭಾರತೀಯ ಪ್ರಥಮ ಅಧಿಕೃತ ಇತಿಹಾಸಕಾರನಾಗಿದ್ದಾನೆ. ಪ್ರಾಚೀನ ಭಾರತದ ಚರಿತ್ರೆ ಬಗ್ಗೆ ಗುಜರಾತಿನ ಕಾಲಾನುಕ್ರಮಣಿಕೆ ಪಟ್ಟಿಯಾದ **ರಾಸಮಾಲಾ** ಮತ್ತು ನೇಪಾಳದ **ಕೀರ್ತಿಕೌಮುದಿನಿ** ಕೃತಿಗಳೂ ಹೆಚ್ಚಿನ ಬೆಳಕು ಚೆಲ್ಲುತ್ತವೆ.

***ಕೌಟಿಲ್ಯನ ಅರ್ಥಶಾಸ್ತ್ರ***

ಧರ್ಮರಕ್ಷಣೆ ಮತ್ತು ಕಲ್ಯಾಣ ರಾಜ್ಯ ಸ್ಥಾಪನೆಗೆ ನಂದರ ವಂಶವನ್ನು ಪತನಗೊಳಿಸಿ ಮೌರ್ಯ ಸಾಮ್ರಾಜ್ಯಕ್ಕೆ ಕಾರಣನಾದ ರಾಜನೀತಿ ತಜ್ಞ ಮತ್ತು ಚಂದ್ರಗುಪ್ತ ಮೌರ್ಯನ ಮಂತ್ರಿ ಕೌಟಿಲ್ಯನು ಅರ್ಥಶಾಸ್ತ್ರವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾನೆ. ಇದು 15 ವಿಭಾಗಗಳನ್ನು ಮತ್ತು 150 ಅಧ್ಯಾಯಗಳನ್ನು ಒಳಗೊಂಡಿದೆ. ಕೌಟಿಲ್ಯ ಅಥವಾ ಚಾಣಕ್ಯನನ್ನು ಭಾರತದ ಮೆಕೆಯವಲ್ಲಿ ಎಂದು ಕರೆದಿದ್ದಾರೆ.

***ರಾಜಕಾರಣ ಮತ್ತು ವ್ಯಾಕರಣ ಕುರಿತು ಶಾಸ್ತ್ರಗಳು***

ಮೌರ್ಯರ ಚರಿತ್ರೆಯನ್ನು ಕ್ರಿ.ಪೂ. ೪ನೆಯ ಶತಮಾನದಿಂದ ಕ್ರಿ.ಪೂ. ೩ನೆಯ ಶತಮಾನದವರೆಗೆ ಪುನಾರಚಿಸಲು ಕೌಟಿಲ್ಯನ ಅರ್ಥಶಾಸ್ತ್ರ ನೆರವಾಗುತ್ತದೆ. ಆಡಳಿತ ಕುರಿತಂತೆಯೂ ಇದರಲ್ಲಿ ವಿವರಣೆಯಿದೆ. ರಾಜರ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ (ಪ್ರಜೆಗಳ ಸುಖದಲ್ಲೆ ರಾಜನ ಸುಖವಿದೆ, ಪ್ರಜೆಗಳಿಗೆ ಸಂತೋಷವಾಗುವ ವಿಷಯ ಒಳ್ಳೆಯದೆಂದು ಭಾವಿಸಬೇಕು) ವಿವರಣೆ ಅದರಲ್ಲಿದೆ. ಸಚಿವ ಸಂಪುಟದ ಜೊತೆ ರಾಜನ ಸಂಬಂಧ ಹೇಗಿರಬೇಕು ಎಂಬುದನ್ನು ಅದರಲ್ಲಿ ಚರ್ಚಿಸಲಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳ ನಿರ್ವಹಣೆಗೆ ಅಗತ್ಯವಾದ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಅದು ಬೆಳಕು ಚೆಲ್ಲುತ್ತದೆ. ಯಶಸ್ವಿ ಸರ್ಕಾರದ ಚಿತ್ರವನ್ನು ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಸ್ಪಷ್ಟವಾಗಿ ಗುರುತಿಸಿದ್ದಾನೆ. ದೊರೆಗಳ ಕರ್ತವ್ಯ, ವಿದೇಶಿ ಸಂಬಂಧಗಳು, ಗೂಢಚಾರವ್ಯವಸ್ಥೆ, ಮಂತ್ರಾಲೋಚನೆ, ಮೈತ್ರಿಕೂಟ, ಸೈನಿಕ ಕೂಟ, ಯುದ್ಧ ಘೋಷಣೆ, ಶಾಂತಿಸಂಧಾನ, ವಿವಾಹ-ವಿಚ್ಛೇದ, ಸ್ತ್ರೀಯರ ಹಕ್ಕುಗಳು, ಆಲಿಪ್ತ ನೀತಿ ತೆರಿಗೆ ವಿಧಾನಗಳು, ಕೃಷಿ, ಉತ್ಪಾದನಾ ಅಂಶಗಳು, ಗಜಶಾಸ್ತ್ರ, ವಾಸ್ತುಶಿಲ್ಪ, ನೌಕಾನಿರ್ಮಾಣ, ವೃದ್ಧರಕ್ಷಣೆ, ಕಾರಾಗೃಹಗಳು, ಮುಂತಾದ ವಿಷಯಗಳನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ. ಸರ್ಕಾರದ ಆಡಳಿತಕ್ಕೆ ಸಂಬಂಧಿಸಿದಂತೆ ಕೌಟಿಲ್ಯರ ಅರ್ಥಶಾಸ್ತ್ರದಲ್ಲಿ ಹೇಳದೆ ಬಿಟ್ಟಿರುವ ವಿಷಯಗಳೇ ಇಲ್ಲ. ೧೯೦೯ರಲ್ಲಿ ಮೈಸೂರಿನ ಪ್ರಾಚ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಶಾಮಶಾಸ್ತ್ರೀಗಳು ಕೌಟಿಲ್ಯನ ಅರ್ಥಶಾಸ್ತ್ರವನ್ನು ಆಂಗ್ಲ ಭಾಷೆಗೆ ಭಾಷಾಂತರ ಮಾಡಿದ್ದಾರೆ.

ಗುಪ್ತರ ಕಾಲದ ರಾಜಕಾರಣ ಕುರಿತಂತೆ ಪ್ರಕಟವಾದ ಗ್ರಂಥವೆಂದರೆ ಕಮಂಡಕನ **ನೀತಿಶಾಸ್ತ್ರ**. ಕೌಟಿಲ್ಯರ ಅರ್ಥಶಾಸ್ತ್ರದ ಪರಿಷ್ಕೃತ ಆವೃತ್ತಿಯಂತೆ ಅದು ಕಾಣುತ್ತದೆ. ವ್ಯಾಕರಣಕ್ಕೆ ಸಂಬಂಧಿಸಿದಂತೆ ಕ್ರಿ.ಪೂ. ನಾಲ್ಕನೆಯ ಶತಮಾನದ ಪಾಣಿನಿಯ **ಮಹಾಭಾಷ್ಯ** ಒಂದು ಮಹತ್ವದ ಕೃತಿ. ಆ ಕಾಲದಲ್ಲಿ ಪ್ರಭುತ್ವಕ್ಕೆ ಭಿನ್ನವಾದ ಸರ್ಕಾರ ವ್ಯವಸ್ಥೆ ಬಗ್ಗೆ ಅಮೂಲ್ಯ ಮಾಹಿತಿಯನ್ನು ಅದು ಒದಗಿಸುತ್ತದೆ. ಮುಂದೆ ಕ್ರಿ.ಪೂ. ಎರಡನೆಯ ಶತಮಾನದಲ್ಲಿ ಪತಂಜಲಿ ಎಂಬ ಮಹಾ ಋಷಿಯ **ಮಹಾಭಾಷ್ಯಾ**

ಎನ್ನುವ ಸಂಸ್ಕೃತ ವ್ಯಾಕರಣ ಟೀಕಾ ಗ್ರಂಥವನ್ನು ಮತ್ತು ಯೋಗದ ವಿಷಯದ ಮೇಲೆ ಮಹತ್ವದ ಒಂದು ಕೃತಿಯನ್ನು ರಚಿಸಿದ. ಪತಂಜಲಿಯು ತನ್ನ ಕೃತಿಯಲ್ಲಿ ಗ್ರೀಕರ ಆಕ್ರಮಣದ ವಿವರ ನೀಡುತ್ತಾನೆ ಮತ್ತು ಕ್ರಿ.ಪೂ. ೩ನೆಯ ಶತಮಾನದಲ್ಲಿ ಅದರಿಂದ ಉಂಟಾದ ಪರಿಣಾಮಗಳನ್ನು ಬಣ್ಣಿಸಿದ್ದಾನೆ.

### 34.2.8 *ಅಭಿಜಾತ ಸಂಸ್ಕೃತ ಸಾಹಿತ್ಯ*

ಭಾರತದ ಚರಿತ್ರೆಯ ಪುನಾರಚನೆಗೆ ಮಹತ್ವದ ಕಾಣಿಕೆಯು ಸಂಸ್ಕೃತದ ನಾಟಕಗಳಿಂದ ಆಗಿದೆ. **ರಘುವಂಶ** ಕೃತಿಯಲ್ಲಿ ಕಾಳಿದಾಸನು ಚಕ್ರವರ್ತಿ ರಘುವಿನ ದಂಡಯಾತ್ರೆ ಬಗ್ಗೆ ವಿವರ ನೀಡುತ್ತಾನೆ. ಕಾಳಿದಾಸನ ರಘುವು ಬೇರಾರು ಅಲ್ಲದೆ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ ಸಮುದ್ರಗುಪ್ತ ಇಲ್ಲವೆ ಚಂದ್ರಗುಪ್ತನೆಂದು ಗುರುತಿಸಿ, ಹೇಳಲಾಗಿದೆ. ಕಾಳಿದಾಸನ ಇತರೆ ಕೃತಿಗಳಾದ ಶಾಕುಂತಲ, **ಮಾಳವಿಕಾಗ್ನಿಮಿತ್ರ** ಮತ್ತು **ಮೇಘದೂತ** ಇವು ಸಿಂಧೂ ನದಿಯ ದಂಡೆಯಲ್ಲಿ ಗ್ರೀಕರನ್ನು ಸೋಲಿಸಿದ ವೀರಾಗಾಧೆಯ ವಿವರವನ್ನು ನೀಡುತ್ತವೆ. ವಿಶಾದ ಮತ್ತು ವಿದರ್ಭಗಳ ನಡುವೆ ನಡೆದ ಯುದ್ಧದ ವಿವರಗಳನ್ನು ಅದು ನೀಡುತ್ತದೆ. ವಿಶಾಖದತ್ತನ **ಮುದ್ರಾರಾಕ್ಷಸ** ಎನ್ನುವ ಸಂಸ್ಕೃತ ನಾಟಕವು ಚಕ್ರವರ್ತಿ ನಂದ ಮತ್ತು ಚಂದ್ರಗುಪ್ತರ ನಡುವಿನ ಯುದ್ಧವನ್ನು ಮೌರ್ಯರ ಮೂಲವನ್ನು ಮತ್ತು ಅವರ ಆಡಳಿತ ಕ್ರಮವನ್ನು ವಿವರಿಸುತ್ತದೆ. ಅಲ್ಲದೆ ಚಾಣುಕ್ಯನ ರಾಜ ತಾಂತ್ರಿಕ ಕೌಶಲ್ಯವನ್ನು ತೋರಿಸುತ್ತದೆ. ಭಾರತೀಯ ಚರಿತ್ರೆಯಲ್ಲಿ ಆಗಿ ಹೋದ ಪವಿತ್ರ ಪ್ರೇಮ ಪ್ರಕರಣಗಳನ್ನು ಸದರಿ ನಾಟಕ ವಿವರಿಸುತ್ತದೆ.

### 34.2.9 *ವೈಜ್ಞಾನಿಕ ಕೃತಿಗಳು*

ವಿಜ್ಞಾನದ ಕ್ಷೇತ್ರದಲ್ಲಿ ಭಾರತೀಯರು ಮಹತ್ವದ ಸಾಧನೆ ಮಾಡಿದ್ದಾರೆ. ಖಗೋಳಶಾಸ್ತ್ರದಲ್ಲಿ ಅವರ ಸಾಧನೆ ಅದ್ವಿತೀಯವಾಗಿದೆ. ವಾಸ್ತವವಾಗಿ ಖಗೋಳಶಾಸ್ತ್ರ ಮತ್ತು ಗಣಿತಶಾಸ್ತ್ರಕ್ಕೆ ಭಾರತೀಯರು ನೀಡಿದ ಕೊಡುಗೆ ಬಗ್ಗೆ ಪಾಶ್ಚಿಮಾತ್ಯರು ಋಣಿಗಳಾಗಿರಬೇಕು. ಆರ್ಯಭಟನ ಕ್ರಿ.ಶ. ೪೭೬ **ಸೂರ್ಯಸಿದ್ಧಾಂತ** ಮತ್ತು **ರೋಮಕ ಸಿದ್ಧಾಂತ** ಎಂಬ ಕೃತಿಗಳು ಖಗೋಳಶಾಸ್ತ್ರದ ಬಗ್ಗೆ ಅಧಿಕೃತ ಗ್ರಂಥಗಳಾಗಿವೆ. ಆರ್ಯಭಟನು ಹಿಂದೂ ಬೀಜಗಣಿತ ಜ್ಞಾನವನ್ನು ಕ್ರೂಢಿಕರಿಸಿ, ದಶಾಂಶಪದ್ಧತಿ, ವರ್ಗಮೂಲ ಮತ್ತು ಘನಮೂಲಗಳನ್ನು ಶೋಧಿಸಿದನು. ಅಲ್ಲದೆ ಸೂರ್ಯಸಿದ್ಧಾಂತ ಕೃತಿಯಲ್ಲಿ ಆರ್ಯಭಟನು ಸೂರ್ಯ ಮತ್ತು ಚಂದ್ರಗ್ರಹಣಗಳಿಗೆ ಶಾಸ್ತ್ರೀಯ ಕಾರಣಗಳನ್ನು ತಿಳಿಸಿದ್ದಾನೆ. ವರಾಹಮಿಹಿರನ **ಬೃಹತ್ ಸಂಹಿತಾ** ಕೃತಿಯಲ್ಲಿ ಜ್ಯೋತಿಷ್ಯಶಾಸ್ತ್ರ, ಲೋಹಶಾಸ್ತ್ರ, ವಾಸ್ತುಶಿಲ್ಪ, ಭೂಗೋಲಶಾಸ್ತ್ರ, ವಿವಾಹ, ಸ್ತ್ರೀಯರ ಶಕುನಗಳು ಮುಂತಾದ ವಿಷಯಗಳ ಚರಿತ್ರೆಯನ್ನು ಕಾಣುವ ಗ್ರಂಥಗಳಾಗಿವೆ. **ಚರಕಸಂಹಿತ** ಮತ್ತು **ಶುಶೃತಸಂಹಿತಗಳು** ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳಾಗಿವೆ. ವಿಜ್ಞಾನವನ್ನು ಕುರಿತ ಗ್ರಂಥಗಳಾಗಿದ್ದರೂ, ಅವು ಅನೇಕ ಚಾರಿತ್ರಿಕ ವಿಷಯದ ಆಕರಗಳಾಗಿವೆ.

### 34.2.10 *ಬೌದ್ಧ ಸಾಹಿತ್ಯ*

ಭಾರತವನ್ನು ಕುರಿತ ಚಾರಿತ್ರಿಕ ಮಾಹಿತಿಯೊದಗಿಸುವ ಮತ್ತೊಂದು ಆಕರವೆಂದರೆ ಬೌದ್ಧಸಾಹಿತ್ಯ. ಈ ಸಾಹಿತ್ಯವು ಮೂರು ಬಗೆಯದ್ದಾಗಿದೆ. ೧. ವಿನಯಪಿಟಕ (ಬೌದ್ಧ ಸನ್ಯಾಸಿಗಳಿಗೆ ನೀತಿ ಸಂಹಿತೆ) ೨. ಸೂತ ಪಿಟಿಕ (ಬೌದ್ಧ ಸಂಘಗಳಲ್ಲಿ ಬುದ್ಧನು ಮಾಡಿದ ಉಪದೇಶಗಳು) ೩. ಅಭಿದಮ್ಮ ಪಿಟಿಕ (ಬುದ್ಧನ ತತ್ವಗಳು) ಈ ಮೂರು ಪ್ರಕಾರಗಳೂ ಪಾಲಿ ಭಾಷೆಯಲ್ಲಿ ಬೌದ್ಧ ಧರ್ಮದ ಸೂತ್ರಗಳನ್ನು, ಉಪದೇಶಗಳನ್ನು ವಿವರಿಸುತ್ತವೆ. ಇವಲ್ಲದೆ ಪಾಲಿ ಭಾಷೆಯಲ್ಲಿರುವ **ಮಿಲಿಂದ್‌ಪನ್ಹ, ದೀಪವಂಶ** ಮತ್ತು **ಮಹಾವಂಶ** ಕೃತಿಗಳು ಚರಿತ್ರೆ ದೃಷ್ಟಿಯಿಂದ ಮಹತ್ವದ ಕೃತಿಗಳಾಗಿವೆ. ಮಿಲಂದ್ ಪನ್ಹ ಕೃತಿಯ ಗ್ರೀಕ್ ದೊರೆ ಮಿನಾನ್‌ದರ್ ಮತ್ತು ಬೌದ್ಧ ಸಂನ್ಯಾಸಿ

ನಾಗಸೇನನ ನಡುವಿನ ಸಂಭಾಷಣೆಯನ್ನು ಒಳಗೊಂಡಿದೆ. ದೀಪವಂಶ ಮತ್ತು ಮಹಾವಂಶಗಳು ಕ್ರಿ.ಪೂ. ಆರನೆಯ ಶತಮಾನದಿಂದ ಕ್ರಿ.ಪೂ. ನಾಲ್ಕನೆಯ ಶತಮಾನದವರೆಗೆ ಭಾರತ ಮತ್ತು ಶ್ರೀಲಂಕಾ, ಬರ್ಮಾ ಮತ್ತು ಜಪಾನ್‌ಗಳ ನಡುವೆ ಇದ್ದ ಸಂಬಂಧದ ಬಗ್ಗೆ ಬೆಳಕು ಚೆಲ್ಲುತ್ತವೆ. ತ್ರಿಪಿಟಕಗಳು ಬುದ್ಧನ ಜೀವನ ಸಂಗತಿಗಳನ್ನು ಮತ್ತು ಕ್ರಿ.ಪೂ. ಆರನೇ ಮತ್ತು ೭ನೇ ಶತಮಾನದ ಹದಿನಾರು ಮಹಾಜನಪದಗಳು ಅಥವಾ ಗಣರಾಜ್ಯಗಳ ಬಗ್ಗೆ ವಿವರಿಸುವ ಗ್ರಂಥಗಳಾಗಿವೆ.

ಸರಿಸುಮಾರು ೫೪೯ ಜಾತಕ ಕತೆಗಳ ಮಹತ್ವವನ್ನು ಅಂದಾಜು ಮಾಡುವುದು ಸಾಧ್ಯವಿಲ್ಲ. ಅವು ಕೇವಲ ಸಾಹಿತ್ಯಿಕ ಕಲಾಕೃತಿಗಳಾಗಿ ಮಾತ್ರ ಮಹತ್ವ ಪಡೆದಿಲ್ಲ. ಇವುಗಳು ಕ್ರಿ.ಪೂ. ೩ನೆಯ ಶತಮಾನ ಕುರಿತ ನಾಗರಿಕತೆಯ ಚರಿತ್ರೆ ಬಗ್ಗೆ ಅತ್ಯಮೂಲ್ಯ ಆಕರಗಳಾಗಿವೆ.

### *34.2.11 ಜೈನ ಸಾಹಿತ್ಯ*

ಜೈನ ಸಾಹಿತ್ಯವು ಪೂರ್ವಗಳು ಅಂಗಗಳು ಮತ್ತು ಉಪಾಂಗಗಳನ್ನು ಒಳಗೊಂಡಿದೆ. ಭಾರತದ ಚರಿತ್ರೆಯ ಪುನಾರಚನೆಗೆ ಅವು ಮಹತ್ವದ ಮಾಹಿತಿ ಒದಗಿಸುತ್ತದೆ. ಮಹಾವೀರನ ಜೀವನ ಮತ್ತು ಉಪದೇಶಗಳನ್ನು ಒಳಗೊಂಡಿರುವ ಜೈನ ಸಾಹಿತ್ಯಕ್ಕೆ ಚಾರಿತ್ರಿಕ ಮಹತ್ವವಿದೆ. ತೀರ್ಥಂಕರ ವಿಚಾರಗಳು, ಮೌರ್ಯರ ಬಗ್ಗೆ ಮಾಹಿತಿ ನೀಡುತ್ತವೆ. ದಾರ್ಶನಿಕ ನೋಟ, ಕಲೆ, ಸಾಹಿತ್ಯ, ಸಾಮಾಜಿಕ ಸ್ಥಿತಿಗತಿಗಳ ಮೇಲೆ ಜೈನ ಸಾಹಿತ್ಯ ಬೆಳಕು ಚಲ್ಲುತ್ತದೆ.

## 34.3 ವಿದೇಶಿ ಪ್ರವಾಸಿಗರ ವಿವರಣೆ

ವ್ಯಾಪಾರ, ಧಾರ್ಮಿಕ ಮತ್ತು ಇತರೆ ಕಾರಣಗಳಿಗಾಗಿ ಗ್ರೀಕ್, ರೋಮನ್, ಚೈನಾ, ಟಿಬೆಟ್, ಮುಸ್ಲಿಮ್ ದೇಶಗಳಿಗೆ ಸೇರಿದ ವಿದೇಶಿ ಪ್ರವಾಸಿಗರು ಭಾರತಕ್ಕೆ ಭೇಟಿ ಕೊಟ್ಟಿದ್ದಾರೆ. ಅವರುಗಳ ಬರಹಗಳಲ್ಲಿ ಭಾರತಕ್ಕೆ ಸಂಬಂಧಿಸಿದ ಮಹತ್ವದ ರಾಜಕೀಯ ಮತ್ತು ಸಾಮಾಜಿಕ ವಿವರಗಳು ದೊರೆಯುತ್ತಿವೆ.

### *34.3.1 ಗ್ರೀಕ್ ಬರಹಗಾರರು*

ವಾಯುವ್ಯ ಭಾರತವನ್ನು ಆಕ್ರಮಿಸಿದ ಸಂಗತಿ, ಹಿರೋಡೋಟಸ್‌ನ ಬರಹಗಳಲ್ಲಿ ಗ್ರೀಕೋಪರ್ಷಿಯನ ದೇಶ ಸಂಬಂಧದ ಬಗ್ಗೆ ಮತ್ತು ಈ ದೇಶಗಳ ನಡುವಿನ ಕ್ರಿ.ಪೂ. ೫ನೆಯ ಶತಮಾನದಲ್ಲಿ ಪ್ರಚಲಿತವಿದ್ದ ಗ್ರೀಕೋ-ಪರ್ಷಿಯನ್ನ್ ಯುದ್ಧಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಅವನು ತನ್ನ **ಹಿಸ್ಟೋರಿಸ್** ಕೃತಿಯಲ್ಲಿ ವಾಯುವ್ಯ ಭಾರತದ ಜೊತೆ ಗ್ರೀಕರಿಗಿದ್ದ ಸಂಬಂಧವನ್ನು ವಿವರಿಸುತ್ತಾನೆ. ಇದೇ ರೀತಿ ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿ ಸೆಲ್ಯುಕಸ್‌ನ ರಾಯಭಾರಿಯಾದ ಮೆಗಾಸ್ತಾನೀಸ್ **ಇಂಡಿಕಾ** ಎನ್ನುವ ಕೃತಿಯನ್ನು ರಚಿಸಿದನು. ಇದರಲ್ಲಿ ಮೌರ್ಯರ ಆಡಳಿತ ವ್ಯವಸ್ಥೆ ಬಗ್ಗೆ, ಮುಖ್ಯವಾಗಿ ಪಾಟಲೀಪುತ್ರದ ಸ್ವಯಂಮಾಡಳಿತ ವ್ಯವಸ್ಥೆ ಬಗ್ಗೆ ಮತ್ತು ಭಾರತೀಯ ಸಮಾಜ, ಭಾರತದ ಗಡಿಗಳು, ಭೌಗೋಳಿಕ ಲಕ್ಷಣಗಳು ಮತ್ತು ಸರಕುಗಳ ಬಗ್ಗೆ ಅಮೂಲ್ಯ ವಿವರವನ್ನು ಒದಗಿಸಲಾಗಿದೆ. ಮೆಗಸ್ತನೀಸ್‌ನು ತನ್ನ ದೇಶದ ಜನರಿಗೆ ಭಾರತದ ಸ್ಥಿತಿಗತಿಗಳನ್ನು ಪರಿಚಯಿಸುವ ಉದ್ದೇಶದಿಂದ ಗ್ರೀಕ್ ಭಾಷೆಯಲ್ಲಿ ಇಂಡಿಕಾ ಗ್ರಂಥವನ್ನು ಬರೆದನು. ಮೌರ್ಯ ರಾಜಧಾನಿ ಪಾಟಲೀಪುತ್ರವು ೯.೫ ಮೈಲು ಉದ್ದ ಮತ್ತು ೧.೭೫ ಅಗಲವಾಗಿದ್ದು ಭಾರತದಲ್ಲೇ ಅಂದಿನ ದಿನಗಳಲ್ಲಿ ದಿವ್ಯ ಮತ್ತು ಬೃಹತ್ ನಗರವೆಂದು ವರ್ಣಿಸಿದ್ದಾನೆ. ಇಲ್ಲಿನ ಪೌರಾಢಳಿತ ನಡೆಸಿಕೊಂಡು ಹೋಗಲು ಮೂವತ್ತು ಸದಸ್ಯರ ಸಮಿತಿ ಸಮರ್ಥರಾಗಿ ಕೆಲಸ ಮಾಡುತ್ತಿದೆ ಎಂದು ತಿಳಿಸಿದ್ದಾನೆ. ಮೌರ್ಯರ ಕ್ರಿಮಿನಲ್ ದಂಡ ಸಂಹಿತೆ ತುಂಬ ಕಠೋರವಾಗಿತ್ತೆಂದು ಇಂಡಿಕಾದಲ್ಲಿ ಬರೆದಿರುವನು. ಅರಿಯನ್ ಪ್ಲುಟಾರ್ಕ್, ಕುರ್ಟಿಸ್ ಡಿಯೋಡರಸ್ ಮುಂತಾದ ಗ್ರೀಕ್

ಬರಹಗಾರರು ಅಲೆಗ್ಸಾಂಡರ್‌ನ ದಂಡಯಾತ್ರೆ ಮತ್ತು ಇದರ ಪರಿಣಾಮಗಳ ಬಗ್ಗೆ ವಿವರ ಒದಗಿಸುತ್ತಾರೆ. ಪ್ರಾಚೀನ ಭಾರತದ ಭೌಗೋಳಿಕ ವಿವರವನ್ನು ಟಾಲಮಿಯು ತನ್ನ ಕೃತಿ ಭಾರತದ ಭೂಗೋಳದಲ್ಲಿ ನೀಡುತ್ತಾನೆ. ಶಾತವಾಹನರ ಚರಿತ್ರೆ ಇಂಡೋ-ಗ್ರೀಕರ ವ್ಯಾಪಾರ, ಭಾರತದ ಕರಾವಳಿ ಪಟ್ಟಣಗಳು ಬಂದರುಗಳು ವಾಣಿಜ್ಯ ಸರಕುಗಳ ಬಗ್ಗೆ ಕ್ರಿ.ಶ. ಒಂದನೇ ಶತಮಾನದ ಅನಾಮದೇಯ ಕೃತಿ **ಪೆರಿಪ್ಲಸ್ ಆಫ್ ಎರಿತ್ರಿಯನ್‌ಸೀ** (ಅರಬ್ಬೀ ಸಮುದ್ರ ಪ್ರದೇಶದ ವ್ಯಾಪಾರ) ಒದಗಿಸುತ್ತದೆ.

### 34.3.2 *ಚೀನಾದ ಬರಹಗಾರರು*

ಮತ್ತೊಂದು ಮಹತ್ವದ ವಿದೇಶಿ ಪ್ರವಾಸಿಗರ ದಾಖಲೆಗಳು ಚೈನಾದ ಯಾತ್ರಿಕರಾದ ಫಾಹಿಯಾನ (ಕ್ರಿ.ಶ. ೩೯೯-೪೧೪) ಹ್ಯೂಯನ್‌ತ್ಸಾಂಗ್ (ಕ್ರಿ.ಶ. ೬೨೯-೬೪೫) ಮತ್ತು ಇತ್ಸಿಂಗ್‌ನ (ಕ್ರಿ.ಶ. ೬೭೩-೬೯೫) ವಿವರಣೆಗಳಾಗಿವೆ. ಬೌದ್ಧ ಸಾಹಿತ್ಯ ಮತ್ತು ಧರ್ಮದಿಂದ ಆಕರ್ಷಿತರಾಗಿ ಇವರು ಭಾರತಕ್ಕೆ ಬಂದರು. ಭಾರತದ ಅಂದಿನ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಸ್ಥಿತಿಗತಿ ಬಗ್ಗೆ ಮಹತ್ವದ ದಾಖಲೆಗಳನ್ನು ಅವರು ಬಿಟ್ಟು ಹೋಗಿದ್ದಾರೆ. ಪಾಹಿಯಾನನು ಎರಡನೇ ಚಂದ್ರಗುಪ್ತನ ಆಡಳಿತ ಕ್ರಮ, ಜನಜೀವನ, ಧರ್ಮ ಪಾಟಲಿಪುತ್ರದ ಕಣ್ಣಿಗೆ ಕಟ್ಟುವಂತಹ ವರ್ಣನೆ ನೀಡಿದ್ದಾನೆ. ಹ್ಯೂಯನ್‌ತ್ಸಾಂಗನ ತನ್ನ ಕೃತಿ ಸಿ-ಯು-ಕಿ ಯಲ್ಲಿ ಭಾರತದ ಕ್ರಿ.ಶ. ೭ನೆಯ ಶತಮಾನದ ಉತ್ತರ ಭಾರತ ಮತ್ತು ದಕ್ಷಿಣ ಭಾರತದ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಯ ವಿವರಣೆಯನ್ನು ಹರ್ಷವರ್ಧನರ ಮತ್ತು ಬಾದಾಮಿ ಚಾಲುಕ್ಯರ ಎರಡನೇ ಪುಲಿಕೇಶಿಯ ಕಾಲಕ್ಕೆ ಒತ್ತು ಕೊಟ್ಟು ವಿವರಿಸಿದ್ದಾನೆ. ಇತ್ಸಿಂಗ್‌ನು ಭಾರತದ ಸಂಪ್ರದಾಯಗಳು, ರಾಜಕೀಯ ಮತ್ತು ಶಿಕ್ಷಣ ಪದ್ಧತಿಯನ್ನು ವಿಶ್ಲೇಷಿಸಿದ್ದಾನೆ.

### 34.3.3 *ಟಿಬೇಟ್ ಯಾತ್ರಿಕರು*

ಟಿಬೆಟ್ಟಿನ ಯಾತ್ರಾರ್ಥಿ ತಾರಾನಾಥನು ತನ್ನ ಕೃತಿ ಬೌದ್ಧ ಧರ್ಮದ ಚರಿತ್ರೆಯಲ್ಲಿ ನೀಡಿರುವ ಮಾಹಿತಿ ಭಾರತ-ಟಿಬೇಟ್ ಚರಿತ್ರೆ ಮತ್ತು ಸಂಬಂಧಗಳನ್ನು ತಿಳಿಸುವ ಗ್ರಂಥವಾಗಿದೆ.

### 34.3.4 *ಮುಸ್ಲಿಂ ಯಾತ್ರಿಕರ ಬರವಣಿಗೆಗಳು*

ತನ್ನ ಪ್ರಭು, ಮಹಮದ್ ಘಜ್ನಿಯೊಂದಿಗೆ ಭಾರತಕ್ಕೆ ಬಂದ ಮುಸ್ಲಿಮ್ ಇತಿಹಾಸಜ್ಞ ಆಲ್ಬರುನಿಯು ಕ್ರಿ.ಶ. ೧೦೩೦ರಲ್ಲಿ ರಚಿಸಿದ **ತಾಕ್-ಇ-ಹಿಂಧ್** ಕೃತಿಯಲ್ಲಿ ತುಂಬಾ ಮಹತ್ವವಾದ ಹಾಗೂ ವಿದ್ವತ್‌ಪೂರ್ಣವಾದ ಮಾಹಿತಿಯನ್ನು ಸಂಗ್ರಹಿಸಿಟ್ಟಿದ್ದಾನೆ. ಸಂಸ್ಕೃತ ಜ್ಞಾನ ಹೊಂದಿದ್ದ ಅಲ್ಬೆರೂನಿ ಘಜ್ನಿ ಮಹಮದನ ಭಾರತ ದಾಳಿಯ ಬಗ್ಗೆ ವಿವರ ನೀಡುತ್ತಾನೆ. ಅಲ್ಲದೆ, ಸಾಮಾಜಿಕ ಪಿಡುಗುಗಳಾದ ಜಾತಿ ಪದ್ಧತಿ, ಸತಿ ಪದ್ಧತಿ, ವಿದಟಾ ವಿವಾಹ ನಿಷೇಧ, ಭಾರತೀಯರಲ್ಲಿರುವ ಇತಿಹಾಸ ಪ್ರಜ್ಞೆಯ ಅಭಾವ, ಭಾರತ ರಾಜಕೀಯ ದೌರ್ಬಲ್ಯ ಮುಂತಾದ ವಿಷಯಗಳ ಬಗ್ಗೆ ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ. ಇವನು 'ಕರ್ಣತಿಲಕ' ಎನ್ನುವ ಸಂಸ್ಕೃತ ಗ್ರಂಥವನ್ನು ಪರ್ಷಿಯನ್ ಮತ್ತು ಅರೇಬಿಕ್ ಭಾಷೆಗಳಿಗೆ ತರ್ಜುಮೆ ಮಾಡಿದ್ದಾನೆ. ಆಲ್‌ಮಸೂದಿ ಮತ್ತು ಫರಿಸ್ತಾ ಎಂಬ ವಿದೇಶಿ ಪ್ರವಾಸಿಗರು ಭಾರತದ ಮಧ್ಯಕಾಲೀನ ಚರಿತ್ರೆ (ಕ್ರಿ.ಶ. 1340-1400ರ ) ಮೇಲೆ ಬೆಳಕು ಚೆಲ್ಲುವ ಅನೇಕ ರಾಜಕೀಯ ವಿವರಗಳನ್ನು ನೀಡುತ್ತಾರೆ. ಭಾರತದ ಪ್ರಾಚೀನ ಚರಿತ್ರೆಯ ಪುನಾರಚನೆಯಲ್ಲಿ ವಿದೇಶಿ ಪ್ರವಾಸಿಗರ ವೃತ್ತಾಂತಗಳು ತುಂಬಾ ಮಹತ್ವ ಪಡೆದಿವೆ. ಭಾರತೀಯ ಕಾಲಾನುಕ್ರಮಣಿಕೆಗೆ ಸಂಬಂಧಿಸಿದ ಅನೇಕ ಸಮಸ್ಯೆ-ತೊಡಕುಗಳನ್ನು ಪರಿಹರಿಸಲು ಇವು ನೆರವಾಗುತ್ತವೆ. ಅವರ ವರದಿಗಳಲ್ಲಿ ಉತ್ಪ್ರೇಕ್ಷೆಗಳಿವೆ. ವೈಭವೀಕೃತ ವಿವರಣೆಗಳಿವೆ. ಇಲ್ಲಿನ ಭಾಷೆ, ಧಾರ್ಮಿಕ ಸಂಪ್ರದಾಯ, ಜೀವನ ಪದ್ಧತಿ ಅವರಿಗೆ ತಿಳಿದಿರಲಿಲ್ಲ. ಇದರಿಂದಾಗಿ ಅವರ ಬರವಣಿಗೆಯಲ್ಲಿ ಕಟ್ಟು ಕತೆಗಳು ಅಪಾರವಾಗಿವೆ. ಅವರ ವೃತ್ತಾಂತಗಳಲ್ಲಿ ತಪ್ಪು ಮಾಹಿತಿಗಳಿವೆ.

ಉದಾಹರಣೆಗೆ ಮೆಗಾಸ್ತನೀಸನ ಕೃತಿಯಲ್ಲಿ ಭಾರತದಲ್ಲಿ ಗುಲಾಮಿ ಪದ್ಧತಿ ಇರಲೇ ಇಲ್ಲ ಎಂಬ ವಾಕ್ಯಗಳಿವೆ. ಈ ಕಾರಣದಿಂದ ವಿದೇಶಿ ಪ್ರವಾಸಿಗರ ವೃತ್ತಾಂತವನ್ನು ಬಳಸುವಾಗ ತುಂಬಾ ಎಚ್ಚರಿಕೆ ವಹಿಸಬೇಕಾಗುತ್ತದೆ. ಭಾರತದ ಪ್ರಾಚೀನ ಇತಿಹಾಸದ ಪುನಾರಚನೆಯಲ್ಲಿ ವಿದೇಶಿ ಪ್ರವಾಸಿಗರ ಬರಹಗಳನ್ನು ಬಳಸುವಾಗ ಜೋಪಾನವಾಗಿರಬೇಕು.

ಒಟ್ಟಾರೆಯಾಗಿ ಭಾರತದಲ್ಲಿ ಹೆರೋಡೋಟಸ್ ನಂತಹ ಅಥವಾ ಥುಸಿಡೈಡ್ಸ್‌ನಂತಹ ಇತಿಹಾಸಜ್ಞರು ದೊರೆಯುವುದಿಲ್ಲವಾದರೂ ಭಾರತದ ಪ್ರಾಚೀನ ಇತಿಹಾಸದ ಪುನಾರಚನೆಗೆ ಅಗತ್ಯವಾದ ಆಕರಮಾಹಿತಿ ಸಾಕಷ್ಟು ಲಭ್ಯವಿದೆ ಎನ್ನುವ ಅಂಶವನ್ನು ನಾವು ಅಲ್ಲ ಗೆಳೆಯುವಂತಿಲ್ಲ. ಇಂತಹ ಆಕರಗಳನ್ನು ಕ್ರಮಬದ್ಧವಾಗಿ, ಐತಿಹಾಸಿಕ ಪರಿಕಲ್ಪನೆಯಲ್ಲಿ ಉಪಯೋಗಿಸಿ ಉತ್ತರ ಭಾರತ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನ ಮಾಡಬಹುದು.

## 34.4 ಸಾರಾಂಶ

'ಆಕರಗಳಿಲ್ಲದೆ ಚರಿತ್ರೆಯಿಲ್ಲ'ವೆಂಬ ಹೇಳಿಕೆಯು ಪ್ರಾಚೀನ ಭಾರತದ ಚರಿತ್ರೆಯನ್ನು ಅಧಿಕೃತವಾಗಿ ರಚಿಸಲು ಆಕರಗಳು ಎಷ್ಟು ಮಹತ್ವವಾಗಿದ್ದಾವೆ ಎಂಬುದನ್ನು ಸೂಚಿಸುತ್ತದೆ. ಆಕರಗಳನ್ನು ಪುರಾತತ್ವ ಮತ್ತು ಸಾಹಿತ್ಯಿಕವೆಂದು ವರ್ಗೀಕರಿಸಬಹುದು. ಸಾಹಿತ್ಯಿಕ ಆಕರಗಳನ್ನು ಬ್ರಾಹ್ಮಣ ಸಾಹಿತ್ಯ, ಬೌದ್ಧ ಸಾಹಿತ್ಯ ಮತ್ತು ಜೈನ ಸಾಹಿತ್ಯವೆಂದು ಮೂರು ಗುಂಪು ಮಾಡಬಹುದು. ಆರ್ಯ ಬದುಕು, ಅವರು ಉತ್ತರ ಭಾರತದಲ್ಲಿ ಮತ್ತು ದಕ್ಷಿಣ ಭಾರತದಲ್ಲಿ ವಿಸ್ತರಣೆ ಮಾಡಿಕೊಂಡ ಬಗೆಯನ್ನು ಕುರಿತಂತೆ ಅಮೂಲ್ಯ ಮಾಹಿತಿಯು ನಮಗೆ ವೇದಗಳು, ಉಪನಿಷತ್ತುಗಳು, ಮಹಾಕಾವ್ಯಗಳು, ಹದಿನೆಂಟು ಪುರಾಣಗಳು ಮುಂತಾದ ಆಕರಗಳಿಂದ ದೊರೆಯುತ್ತದೆ. ಭಾರತೀಯ ಸಾಮ್ರಾಜ್ಯಗಳ ವಂಶಾವಳಿ ಮತ್ತು ಕಾಲಾನುಕ್ರಮಣಿಕೆಯನ್ನು ನಾವು ಪುರಾಣಗಳಿಂದ ತಿಳಿದುಕೊಳ್ಳಬಹುದು. ಕಲ್ಹಣನ ರಾಜತರಂಗಿಣಿ, ಕೌಟಿಲ್ಯನ ಅರ್ಥಶಾಸ್ತ್ರ, ಪಾಣಿನಿಯ ವ್ಯಾಕರಣ, ಹರ್ಷನ ನಾಟಕ ಮತ್ತು ಕಾಳಿದಾಸನ ಕೃತಿಗಳು, ವಿಶಾಖದತ್ತನ ಮುದ್ರಾರಾಕ್ಷಸ ಮುಂತಾದ ಅಮೂಲ್ಯ ಚಾರಿತ್ರಿಕ ಆಕರಗಳ ನೆರವಿನಿಂದ ಮೌರ್ಯ, ಗುಪ್ತ ಮತ್ತು ಹರ್ಷವರ್ಧನ ಸಾಮ್ರಾಜ್ಯಗಳ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಬೌದ್ಧ ಸಾಹಿತ್ಯಕ್ಕೆ ಸಂಬಂಧಿಸಿದ ಜಾತಕ ಕಥೆಗಳು, ದೀಪವಂಶ, ಮಹಾವಂಶ, ತ್ರಿಪಿಟಕ ಮುಂತಾದವುಗಳು ಬೌದ್ಧ ಧರ್ಮ ಕುರಿತಂತೆ ಹಾಗೂ ಗ್ರೀಕ್ ಮತ್ತು ಸಿಲೋನ್‌ಗಳ ಜೊತೆ ಭಾರತವು ಸಾಧಿಸಿಕೊಂಡಿದ್ದ ಸಂಬಂಧಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಜೈನ ಸಾಹಿತ್ಯಕ್ಕೆ ಸಂಬಂಧಿಸಿದ ಅಂಗಗಳು, ಉಪಾಂಗಗಳು ಜೈನ ತೀರ್ಥಂಕರರ ಉಪದೇಶವನ್ನು, ಅವರ ಜೀವನವನ್ನು, ಕಲೆ, ಸಾಹಿತ್ಯಕ್ಕೆ ಅವರು ನೀಡಿದ ಕಾಣಿಕೆಯನ್ನು ವಿವರಿಸುತ್ತವೆ. ಇದಲ್ಲದೆ ವಿದೇಶಿ ಪ್ರವಾಸಿಗರಾದ ಹೆರೋಡೋಟಸ್, ತಾರನಾಥ, ಫಾಹಿಯಾನ್, ಹ್ಯೂಯನ್‌ತ್ಸಾಂಗ್, ಇತ್ಸಿಂಗ್, ಅಲ್‌ಬುರಾನಿ ಮುಂತಾದವರ ಬರಹಗಳು ಅನೇಕ ಉತ್ಪ್ರೇಕ್ಷಿತ ಹಾಗೂ ಕಟ್ಟುಕತೆಗಳನ್ನು ಒಳಗೊಂಡಿದ್ದರೂ ಪ್ರಾಚೀನ ಭಾರತದ ಚರಿತ್ರೆಯ ಪುನಾರಚನೆಗೆ ಅಮೂಲ್ಯ ಆಕರಗಳಾಗಿವೆ.

## 34.5 ಮಾದರಿ ಪ್ರಶ್ನೆಗಳು

1. ಉತ್ತರ ಭಾರತದ ಕ್ರಿ.ಶ. ೧೩೦೦ ರವರೆಗಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯ ಅಧ್ಯಯನದಲ್ಲಿ ಸಾಹಿತ್ಯಿಕ ಆಕರಗಳ ಮಹತ್ವವನ್ನು ವಿವರಿಸಿ.

2. ಉತ್ತರ ಭಾರತದ ಪ್ರಾಚೀನ ಚರಿತ್ರೆಗೆ ಸಂಬಂಧಿಸಿದ ಸಾಹಿತ್ಯಿಕ ಆಕರಗಳ ಮಹತ್ವವನ್ನು ವಿಮರ್ಶಾತ್ಮಕವಾಗಿ ಚರ್ಚಿಸಿರಿ.

## 34.6 ಅಭ್ಯಾಸಕ್ಕೆ ಪುಸ್ತಕಗಳು


1. Altekar .A.S. : **Ancient India**
2. Majumdar .R.C.(Ed.) : **The Classical Age**
3. Rangaswamy .C.V. : **Studies in Indian Culture**
4. Sharma .R.C. : **Ancient India**
5. Mittal .A.K. : **Political and Cultural History of India**
6. Tripati .R.S. : **History of Ancient India**

## ಟಿಪ್ಪಣಿಗಳು

# ಘಟಕ - 35

# ಇತಿಹಾಸ ಪೂರ್ವ ಸಂಸ್ಕೃತಿ

*ರಚನೆ*


**35.0** ಉದ್ದೇಶಗಳು

**35.1** ಪ್ರಸ್ತಾವನೆ

**35.2** ಇತಿಹಾಸಪೂರ್ವ ಸಂಸ್ಕೃತಿ

- **35.2.1** ಪಾಲಿಯೋಲಿಥಿಕ್ ಯುಗ (ಹಳೆ ಶಿಲಾಯುಗ)
- **35.2.2** ಮೆಸೊಲಿಥಿಕ್ ಯುಗ (ಮಧ್ಯ ಶಿಲಾಯುಗ)
- **35.2.3** ನಿಯೋಲಿಥಿಕ್ ಯುಗ (ನೂತನ ಶಿಲಾಯುಗ)
- **35.2.4** ತಾಮ್ರ ಮತ್ತು ಕಂಚಿನ ಯುಗ
- **35.2.5** ಕಬ್ಬಿಣಯುಗ

**35.3** ಜನಾಂಗಗಳು

**35.4** ಇತಿಹಾಸ ಪೂರ್ವಯುಗದ ಕೊಡುಗೆ

**35.5** ಸಾರಾಂಶ

**35.6** ಮಾದರಿ ಪ್ರಶ್ನೆಗಳು

**35.7** ಹೆಚ್ಚಿನ ಅಭ್ಯಾಸಕ್ಕೆ ಪುಸ್ತಕಗಳು

## 35.0 ಉದ್ದೇಶಗಳು

ಈ ಘಟಕದ ಅಭ್ಯಾಸದಿಂದ ಕೆಳಕಂಡ ಸಂಗತಿಗಳನ್ನು ತಿಳಿದುಕೊಳ್ಳಬಹುದು.

1. ಭೂಮಿಯ ಮೇಲೆ ಜೀವಿಯ ವಿಕಾಸ ಮತ್ತು ಮನುಷ್ಯ ಜೀವಿಯ ವಿಕಾಸದ ಹಂತಗಳು

2. ಭಾರತದ ಇತಿಹಾಸಪೂರ್ವ ಸಂಸ್ಕೃತಿಯ ಅಂದರೆ ಹಳೆಶಿಲಾಯುಗದಲ್ಲಿ, ನೂತನ ಶಿಲಾಯುಗದಲ್ಲಿ ಮತ್ತು ಲೋಹದ ಯುಗದಲ್ಲಿ ಭಾರತದ ಇತಿಹಾಸಪೂರ್ವ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳು

3. ನಾಗರಿಕತೆಯ ಬೆಳವಣಿಗೆಯಲ್ಲಿ ಇತಿಹಾಸಪೂರ್ವಯುಗದ ಮಹತ್ವವನ್ನು ಗುರುತಿಸುವ ದಿಶೆಯಲ್ಲಿ ಇತಿಹಾಸ ಪೂರ್ವಯುಗದ ಕೊಡುಗೆಗಳ ಸಮೀಕ್ಷೆ

## 35.1 ಪ್ರಸ್ತಾವನೆ

ಅನಾದಿ ಕಾಲದಿಂದಲೂ ಬದುಕನ್ನು ಉತ್ತಮಪಡಿಸಿಕೊಳ್ಳಲು ಮನುಷ್ಯನು ನಡೆಸಿದ ಪ್ರಯತ್ನ-ಪರಿಶ್ರಮವೇ ಚರಿತ್ರೆ. ಕಾಡುಗಳನ್ನು ಕಡಿದು, ನೀರಿನ ಮೂಲವನ್ನು ಹುಡುಕಿ, ತಮ್ಮ ತಮ್ಮಲ್ಲೇ ಸಹಕಾರವನ್ನು ರೂಢಿಸಿಕೊಂಡು ಮನುಷ್ಯನು ಮನೆಗಳಲ್ಲಿ ವಾಸಿಸ ತೊಡಗಿದನು. ಬದುಕನ್ನು ಉತ್ತಮವಾಗಿ ಸಾಗಿಸಲು ಅಗತ್ಯವಾದ ಕಲೆ, ಸಾಹಿತ್ಯ ಮತ್ತು ಸಂಗೀತಗಳನ್ನು ಕಂಡುಹಿಡಿದ. ಧಾರ್ಮಿಕ ನಂಬಿಕೆಗಳಿಗೆ ಮತ್ತು ಒಳ್ಳೆಯ ಆಡಳಿತ ನಿರ್ವಹಣೆಗೆ ಅಗತ್ಯವಾದ ಕೆಲವು ನಿಯಂತ್ರಣ ಕ್ರಮಗಳನ್ನು ಅವನು ವಿಕಾಸಗೊಳಿಸಿದನು. ಗತಕಾಲದಿಂದಲೂ ಮನುಷ್ಯನು ನಡೆಸಿಕೊಂಡು ಬಂದ ಈ ಎಲ್ಲ ಚಟುವಟಿಕೆಗಳನ್ನು ಚಾರಿತ್ರಿಕ ಸಾಧನೆಗಳೆಂದು ವಿವರಿಸಬಹುದು. ಬದುಕಿನ ಮೂಲಭೂತ ಅಗತ್ಯಗಳಾದ ಆಹಾರ, ಬಟ್ಟೆ ಮತ್ತು ಆಶ್ರಯಕ್ಕಾಗಿ ಮನುಷ್ಯನು ತನ್ನ ಸುತ್ತಮುತ್ತಲಿನ ಪ್ರದೇಶದಲ್ಲಿ ಪರಿಶೋಧನೆಯನ್ನು ಮತ್ತು ಪ್ರಯೋಗಗಳನ್ನು ನಡೆಸುತ್ತಲೇ ಬಂದಿದ್ದಾನೆ. ಈ ಬಗೆಯ ಮನುಷ್ಯನ ಪ್ರಯತ್ನಗಳು ಯಾವುದೇ ನಿರ್ದಿಷ್ಟ ದೇಶ ಅಥವಾ ಪ್ರದೇಶಕ್ಕೆ ಮೀಸಲಾದ ಸಂಗತಿಯಿಲ್ಲ. ಮನುಷ್ಯ ಸಮುದಾಯವು ಎಲ್ಲೆಲ್ಲಿ ನೆಲೆಗೊಂಡಿತ್ತೊ ಅಲ್ಲೆಲ್ಲ ಇಂತಹ ಸಂಗತಿಗಳು ನಡೆದವು. ಇದು ಬೇರೆ ಬೇರೆ ಸಮುದಾಯಗಳ ನಡುವೆ ವಿಶ್ವವ್ಯಾಪಿ ಸಾಂಸ್ಕೃತಿಕ ಏಕತೆಯನ್ನು ಸಾಧಿಸಿಕೊಳ್ಳಲು ನೆರವಾಯಿತು.

ಮಾನವನ ಜಾಗತಿಕ ಚರಿತ್ರೆಯನ್ನು ಮೂರುಕಾಲುಘಟ್ಟಗಳಲ್ಲಿ ಅಧ್ಯಯನ ಮಾಡಲಾಗುತ್ತದೆ.

೧. **ಇತಿಹಾಸಪೂರ್ವ ಯುಗ.** ಈ ಯುಗದಲ್ಲಿನ ಐತಿಹಾಸಿಕ ಬೆಳವಣಿಗೆಗಳ ಬಗ್ಗೆ ನಮಗೆ ಯಾವುದೇ ಲಿಖಿತ ದಾಖಲೆಗಳು ದೊರೆಯುವುದಿಲ್ಲ.

೨. **ಮೂಲ ಇತಿಹಾಸ ಯುಗ.** ಇತಿಹಾಸಪೂರ್ವ ಮತ್ತು ಇತಿಹಾಸ ಯುಗಗಳ ನಡುವಿನ ಕಾಲವನ್ನು ಮೂಲ ಇತಿಹಾಸಯುಗವೆಂದು ಕರೆಯಲಾಗಿದೆ.

೩. **ಇತಿಹಾಸಯುಗ.** ಐತಿಹಾಸಿಕ ಬೆಳವಣಿಗೆಗಳ ಬಗ್ಗೆ ಲಿಖಿತ ದಾಖಲೆಗಳು ದೊರೆಯುವ ಯುಗ. ಇತಿಹಾಸ ಪೂರ್ವಯುಗದಲ್ಲಿನ ಬೆಳವಣಿಗೆಗಳನ್ನು ತಿಳಿದುಕೊಳ್ಳಲು ನಮಗೆ ಪುರಾತತ್ವಶಾಸ್ತ್ರ ಮತ್ತು ಮಾನವಶಾಸ್ತ್ರಗಳು ನೆರವಾಗುತ್ತವೆ. ಮನುಷ್ಯನ ಐತಿಹಾಸಿಕ ಬೆಳವಣಿಗೆ ಬಗ್ಗೆ ಇವೆರಡೂ ವಿಜ್ಞಾನಗಳು ಹೇಗೆ ಬೆಳಕು ಬೀರುತ್ತವೆ ಎಂಬುದನ್ನು ಈಗ ತಿಳಿದುಕೊಳ್ಳೋಣ.

### *ಭೂಮಿಯ ಮೇಲೆ ಜೀವಿಯ ವಿಕಾಸ*

ಜೀವಿಗಳು ಬದುಕಲು ಸಾಧ್ಯವಿರುವ ಒಂದೇ ಒಂದು ಗ್ರಹವಾದ ಭೂಮಿಯ ಮೇಲೆ ಸಕಲ ಜೀವ ಜಂತುಗಳು ಬದುಕನ್ನು ಸಾಗಿಸುತ್ತಾ ಬಂದಿವೆ. ಭೂಮಿಯು ಹೇಗೆ ಹುಟ್ಟಿ ಬಂತು ಎಂಬುದನ್ನು ಈಗ ತಿಳಿದುಕೊಳ್ಳೋಣ. ಬೆಂಕಿಯ ಚೆಂಡಿನಂತೆ ಉರಿಯುತ್ತಿರುವ ಸೂರ್ಯನಿಂದ ಒಂದು ಭಾಗ ಪ್ರತ್ಯೇಕಗೊಂಡು ಬಿಟ್ಟಿತು. ಆರಂಭದಲ್ಲಿ ಹೀಗೆ ಪ್ರತ್ಯೇಕಗೊಂಡ ಭಾಗವೂ ಉರಿಯುವ ಚೆಂಡಿನಂತೆ ಇತ್ತು. ಕಾಲಕಳೆದಂತೆ ಅದು ಸಂಕುಚಿತಗೊಳ್ಳತೊಡಗಿತು ಮತ್ತು ತಂಪಾಗತೊಡಗಿತು. ಹೀಗೆ ಅದು ಭೂಮಿಯೆಂಬ ಗ್ರಹವಾಯಿತು. ನಾವು ಮತ್ತು ನಮ್ಮಂತೆ ಜೀವ ಜಂತುಗಳೆಲ್ಲ ಬದುಕುತ್ತಿರುವ ಭೂಮಿಯೇ ಒಂದು ಗ್ರಹ. ಈ ಭೂಮಿಯ ಮೇಲೆ ಸಂಭವಿಸಿದ ಆಸ್ಫೋಟಗಳು ಅನೇಕ ಬಗೆಯ ಭೌತಿಕ ಬದಲಾವಣೆಗಳನ್ನು ಉಂಟು ಮಾಡಿದವು ಮತ್ತು ಅಂತಿಮವಾಗಿ ಭೂಮಿಯು ಈಗಿರುವ ರೂಪವನ್ನು ಪಡೆದುಕೊಂಡಿತು.

ಭೂಮಿಯ ಗರ್ಭದಲ್ಲಿದ್ದ ನೀರು ಆಸ್ಫೋಟಿಸಿದ್ದರ ಪರಿಣಾಮವಾಗಿ ಪರ್ವತ ಶಿಖರಗಳು ಉಂಟಾದವು. ಹೀಗೆ ಉಂಟಾದ ಪರ್ವತ ಶಿಖರಗಳ ಗುಂಪಿಗೆ ಮೌಂಟ್ ಎವರೆಸ್ಟ್ ಶಿಖರವೂ ಸೇರುತ್ತದೆ. ಈ ಪರ್ವತ ಶಿಖರಗಳಲ್ಲಿ ಜಲಚರಗಳ ದೈಹಿಕ ಪಳೆಯುಳಿಕೆಗಳು ದೊರೆಯುತ್ತವೆ. ಆರಂಭದ ಹಿಮಯುಗದಲ್ಲಿ ವಾತಾವರಣ ಹವಾಮಾನವು ಜೀವಿಗಳು ಬದುಕಲು ಸಹಾಯಕವಾಗಿರಲಿಲ್ಲ. ಕಾಲ ಕ್ರಮೇಣ ಶೀತದ ಹವಾಮಾನ ಬದಲಾಗಿ ಉಷ್ಣದ ವಾತಾವರಣ ಉಂಟಾಯಿತು. ಇದರಿಂದಾಗಿ ಜೀವಿಯು ಬದುಕಲು ಅನುಕೂಲವಾದ ವಾತಾವರಣ ಉಂಟಾಯಿತು. ಈ ಬಗೆಯ ಹಿತಕರ ವಾತಾವರಣದಿಂದಾಗಿ ಜೀವಜಂತು ಭೂಮಿಯಲ್ಲಿ ಅವತರಿಸಿತು. ಅದು ಲಾರ್ವ ಎಂಬ ರೂಪದ ಕ್ರಿಮಿಯಾಗಿತ್ತು. ಹೀಗೆ ಹುಟ್ಟಿಕೊಂಡ ಮೊದಲ ಜೀವಿಯು ಮುಂದೆ ಪ್ಲಾಗೆಟ್ಟ ಎಂಬ ಮುಂದಿನ ರೂಪಕ್ಕೆ ದಾರಿ ಮಾಡಿಕೊಟ್ಟಿತು. ವಿಜ್ಞಾನಿಗಳ ಪ್ರಕಾರ ಈ ಬಗೆಯ ಜೀವಿಗಳು ಮುಂದೆ ಸಸ್ಯ ರಾಶಿಗೆ ಮತ್ತು ಪ್ರಾಣಿ ಸಂಕುಲದ ಬೆಳವಣಿಗೆಗೆ ಕಾರಣವಾದವು. ಕಾಲಕ್ರಮೇಣ ನರಮಂಡಳ ಮತ್ತು ಮೆದುಳುಗಳುಳ್ಳ ಪ್ರಾಣಿಗಳು ವಿಕಾಸ ಹೊಂದಿದವು. ಜಲಚರ ಪ್ರಾಣಿಗಳಾದ ಮೀನು, ಆಮೆ ಮುಂತಾದವುಗಳನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಒಂದು ಹಂತದಲ್ಲಿ ದೈತ್ಯ ಜೀವಿಗಳಾದ ಸೈನೋಸರ್‌ಗಳು ಹುಟ್ಟಿಕೊಂಡವು. ಆದರೆ ಆ ಜೀವಿಗಳು ಸಂಪೂರ್ಣವಾಗಿ ಅಲ್ಪಕಾಲದಲ್ಲೇ ನಾಶವಾಗಿ ಹೋದವು. ಕಾಲಕ್ರಮೇಣ ಉನ್ನತ ಬೆಳವಣಿಗೆ ಸಾಧಿಸಿಕೊಂಡ ತೀಕ್ಷ್ಣ ಬುದ್ಧಿಯನ್ನು ಪಡೆದುಕೊಂಡ ಸಸ್ತನಿ ವರ್ಗಕ್ಕೆ ಸೇರಿದ ಎದೆ ಹಾಲು ಉತ್ಪಾದನೆ ಮಾಡಬಲ್ಲ ಪ್ರಾಣಿ ಹುಟ್ಟಿಕೊಂಡಿತು. ಅಂತಿಮವಾಗಿ ಭೂಮಿಯ ಮೇಲೆ ಮನುಷ್ಯ ಜೀವಿ ಅವತರಿಸಿತು.

### *ಮನುಷ್ಯ ಜೀವಿಯ ವಿಕಾಸದ ಹಂತಗಳು*

ಪುರಾತತ್ವಕ್ಕೆ ಸೇರಿದ ವಿವಿಧ ಬಗೆಯ ಪುರಾವೆಗಳ ಆಧಾರದ ಮೇಲೆ ಮನುಷ್ಯನ ವಿಕಾಸ ಪಥದಲ್ಲಿ ಐದು ಹಂತಗಳನ್ನು ಗುರುತಿಸಬಹುದಾಗಿದೆ. ಈ ಹಂತಗಳು ಸಾಂಸ್ಕೃತಿಕ ವಿಕಾಸದ ಪರಿಯನ್ನು ಸೂಚಿಸುತ್ತವೆ. ಭೂಮಿಯು ಕಾಲಕ್ರಮೇಣ ಉಷ್ಣಹವಾಮಾನಕ್ಕೆ ಒಳಗಾದ ಪರಿಣಾಮವಾಗಿ ಭೂಮಿಯ ಮೇಲೆ ಮನುಷ್ಯ ಜೀವಿ ಕಾಣಿಸಿಕೊಂಡಿತು. ಅದರ ಮುಖ್ಯ ಲಕ್ಷಣವೆಂದರೆ ನೇರವಾಗಿ ನಿಲ್ಲುವುದು, ನೇರವಾಗಿ ನೋಡುವುದು, ಅಂಗಾಂಗಗಳನ್ನು ಚಲಿಸುವುದು, ಬುದ್ಧಿಶಕ್ತಿ ಮತ್ತು ಮಿದುಳಿನ ಆದೇಶಕ್ಕೆ ಅನುಗುಣವಾಗಿ ವರ್ತಿಸುವುದು ಮುಂತಾದವು. ಹೀಗೆ ಮನುಷ್ಯ ಜೀವಿಯು ಬೇರೆ ಜೀವಿಗಳಿಂದ ಭಿನ್ನತೆಯನ್ನು ಪಡೆದುಕೊಂಡಿತು. ಮಾನವಶಾಸ್ತ್ರಜ್ಞರು ಮನುಷ್ಯ ಜೀವಿಯ ವಿಕಾಸವನ್ನು ವಿವರವಾದ ಅಧ್ಯಯನದ ಅನುಕೂಲಕ್ಕೆ ವಿವಿಧ ಹಂತಗಳಾಗಿ ವರ್ಗೀಕರಿಸಿದ್ದಾರೆ.

ಅವುಗಳೆಂದರೆ

೧. ಆಸ್ಟ್ರೋ ಫೈಥಿಕಸ್

೨. ಸೈನೊನ್‌ಥಿಯಸ್

೩. ರಮಫೈಥಿಕಸ್

೪. ಫಿಥಿಯೋ ಕಾಂಟ್ರೋಪಸ್

೫. ನಿಯಾನ್‌ಡ್ರೆತಲ್

೬. ಹೊಮೋ ಸೇಪಿಯನ್

## 35.2 ಇತಿಹಾಸಪೂರ್ವ ಸಂಸ್ಕೃತಿ

ಡಾ. ಈಶ್ವರಿ ಪ್ರಸಾದ್ ಹೇಳುವಂತೆ 'ಮನುಷ್ಯನನ್ನು ಸಲಕರಣೆಗಳನ್ನು ಬಳಸುವ ಪ್ರಾಣಿ' ಯೆಂದು ಕರೆಯಲಾಗಿದೆ. ತನ್ನ ಸುಖವನ್ನು ಮತ್ತು ಆರಾಮವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಉಪಕರಣಗಳು ಮತ್ತು ಸಲಕರಣೆಗಳ ಬಳಕೆಯಲ್ಲಿ ಮನುಷ್ಯ ಸಾಧಿಸಿದ ಸುಧಾರಣೆಯಿಂದ ಸಂಸ್ಕೃತಿಯಲ್ಲಿ ಪ್ರಗತಿ ಸಾಧ್ಯವಾಯಿತು. ಮನುಷ್ಯನ ಭೌತಿಕ ಚರಿತ್ರೆಯೆಂದರೆ ಉಪಕರಣ ರಹಿತ ಸ್ಥಿತಿಯಿಂದ ಇಂದಿನ ಸಂಕೀರ್ಣ ಯಂತ್ರಗಳ ಯುಗಕ್ಕೆ ನಡೆದ ಪರಿವರ್ತನೆಯ ಚರಿತ್ರೆಯೇ ಆಗಿದೆ.

ಮನುಷ್ಯನ ಚರಿತ್ರೆ ತುಂಬಾ ಪ್ರಾಚೀನವಾದುದು. ಇತಿಹಾಸ ಪೂರ್ವಯುಗದ ಬಗ್ಗೆ ಯಾವುದೇ ಲಿಖಿತ ದಾಖಲೆಗಳು ಇಲ್ಲದಿರುವುದರಿಂದ ಭೂಮಿಯ ಮೇಲೆ ಮೊದಲು ಮನುಷ್ಯ ಅವತರಿಸಿದ್ದು ಯಾವಾಗ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಆದರೆ ಅನೇಕ ವಿದ್ವಾಂಸರು, ವಿಜ್ಞಾನಿಗಳು ಮತ್ತು ಇತಿಹಾಸಜ್ಞರು ತಮ್ಮ ಬೌದ್ಧಿಕ ಕಲ್ಪನೆಯ ನೆರವಿನಿಂದ ಮನುಷ್ಯನ ಮೂಲವನ್ನು ಗುರುತಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಮತ್ತು ಪ್ರಾಚೀನ ಯುಗದಿಂದ ಇಂದಿನ ನಾಗರಿಕ ಯುಗಕ್ಕೆ ಉಂಟಾದ ಪರಿವರ್ತನೆಯ ಪರಿಯನ್ನು ನಿಖರವಾಗಿ ಗುರುತಿಸಿದ್ದಾರೆ. ಪ್ರಾಚೀನ ಯುಗದ ಮನುಷ್ಯನ ಬದುಕು ಅನಾಗರಿಕ-ಅಸಂಸ್ಕೃತ ಸ್ವರೂಪದಲ್ಲಿತ್ತು. ಕಾಲ ಸರಿದಂತೆ ಅವನು ಪ್ರಗತಿ ಸಾಧಿಸಿಕೊಂಡ ಮತ್ತು ಅನುಭವದಿಂದ ಅನೇಕ ಪಾಠ ಕಲಿತುಕೊಂಡ. ಇತಿಹಾಸ ಪೂರ್ವಯುಗದಿಂದ ನಾಗರಿಕ ಯುಗಕ್ಕೆ ನಡೆದ ವಿಕಾಸದಲ್ಲಿ ಕೆಳಕಂಡ ಯುಗಗಳನ್ನು ಗುರುತಿಸಬಹುದಾಗಿದೆ.

೧. ಹಳೆ ಶಿಲಾಯುಗ ಪೂರ್ವಯುಗ

೨. ಮಧ್ಯ ಇತಿಹಾಸ ಪೂರ್ವಯುಗ

೩. ನೂತನ ಶಿಲಾಯುಗ

೪. ತಾಮ್ರ ಮತ್ತು ಕಂಚಿನ ಯುಗ

೫. ಕಬ್ಬಿಣ ಯುಗ

### *35.2.1 ಪಾಲಿಯೋಲಿಥಿಕ್ ಯುಗ (ಹಳೆ ಶಿಲಾಯುಗ)*

ಈ ಯುಗದ ಕಾಲಾವಧಿಯನ್ನು ಕ್ರಿ.ಪೂ. ೨,೫೦,೦೦೦ ರಿಂದ ಕ್ರಿ.ಪೂ. ೧,೦೦,೦೦೦ ರವರೆಗೆ ಎಂದು ಅಂದಾಜು ಮಾಡಲಾಗಿದೆ.

*ಹಳೆಶಿಲಾಯುಗದ ಕೇಂದ್ರಗಳು*

ಪುರಾತತ್ವ ದಾಖಲೆಗಳು ಸೂಚಿಸುವಂತೆ ಪ್ರಾಚೀನ ಮಾನವ ಮೊದಲು ಉದಯಿಸಿದ್ದು ಇಂದಿನ ಪಂಜಾಬ್-ಜಮ್ಮು ಪ್ರದೇಶಕ್ಕೆ ಸೇರಿದ ಸಿಂಧೂ ಮತ್ತು ಜೇಲಮ್ ನದಿಗಳ ಬಯಲು ಪ್ರದೇಶದಲ್ಲಿ ಎಂಬುದು ಸ್ಪಷ್ಟವಾಗಿದೆ. ತದನಂತರ ಈ ಪ್ರದೇಶವನ್ನು ಬಿಟ್ಟು ರಾಜಪುತಾನ, ಗುಜರಾತ್, ಬಂಗಾಳ, ಬಿಹಾರ ಮತ್ತು ಒರಿಸ್ಸಾ ಪ್ರದೇಶಗಳಿಗೆ ವಲಸೆ ಹೋದ ಎನ್ನಲಾಗಿದೆ. ಪ್ರಾಚೀನ ಕಾಲದಲ್ಲಿ ಮನುಷ್ಯ ಬಳಸುತ್ತಿದ್ದ ಉಪಕರಣಗಳ ಅವಶೇಷಗಳು ಈ ಎಲ್ಲ ಸ್ಥಳಗಳಲ್ಲೂ ದೊರೆತಿವೆ ಮತ್ತು ಅವುಗಳ ಕಾಲ ಲಕ್ಷವಲ್ಲದಿದ್ದರೂ ಅನೇಕ ಸಾವಿರ ವರ್ಷಗಳ ಹಿಂದಕ್ಕೆ ಹೋಗುತ್ತದೆ. ನಿಖರವಾಗಿ ಹೇಳುವುದಾದರೆ ಅವುಗಳ ಕಾಲ ಕ್ರಿ.ಪೂ. 5,00,000 ಕ್ಕೆ ಸೇರುತ್ತದೆ.

ಹಳೆಶಿಲಾಯುಗ ಪೂರ್ವಕಲಾಕ್ಕೆ ಸೇರಿದ ಪುರಾತತ್ವ ಸಾಮಗ್ರಿಗಳು ನಮಗೆ ಏಷ್ಯಾ, ಆಫ್ರಿಕಾ ಮತ್ತು ಯುರೋಪಿನ ಅನೇಕ ಪ್ರದೇಶಗಳಲ್ಲಿ ದೊರಕಿವೆ. ಗಂಗಾ-ಸಿಂಧೂ ನದಿ ತಪ್ಪಲನ್ನು ಬಿಟ್ಟು ದೇಶದ ಉಳಿದ ಭಾಗದಲ್ಲೂ ಇಂತಹ ಪುರಾವೆಗಳು ದೊರಕಿವೆ. ದಕ್ಷಿಣ ಭಾರತದಲ್ಲಿ ಅವು ದೊರಕಿವೆ. ಕೊಂಕಣ ಕರಾವಳಿ ಪ್ರದೇಶದಲ್ಲಿ, ಗೋದಾವರಿ ತಪ್ಪಲಲ್ಲಿ, ಚಿತ್ತೂರು, ಕಡಪಾ, ಬಳ್ಳಾರಿ, ಮೈಸೂರು, ಧಾರವಾಡ, ಗುಂಟೂರುಗಳಲ್ಲಿ ಪುರಾವೆಗಳು ದೊರಕಿವೆ. ಒಟ್ಟಾರೆ ದೇಶದ ಎಲ್ಲ ಪ್ರದೇಶಗಳಲ್ಲೂ ಇದನ್ನು ಕಾಣಬಹುದು.

ಪಂಜಾಬ್, ರಾಜಪುತಾನ, ಗುಜರಾತ್, ಮಧ್ಯ ಪ್ರದೇಶ, ಕರ್ನಾಟಕ, ಬಿಹಾರ, ಅಸ್ಸಾಮ್, ಬಂಗಾಳ ಮತ್ತು ದಕ್ಷಿಣ ಭಾರತದ ಕೆಲವು ಪ್ರದೇಶಗಳು ಹಳೇಶಿಲಾಯುಗದ ಕೇಂದ್ರಗಳೆಂದು ಹೇಳಬಹುದು.

*ಜನತೆ*

ಹಳೆಶಿಲಾಯುಗ ಪೂರ್ವಕಾಲಕ್ಕೆ ಸೇರಿದ ಜನರು ಸಾರಸಗಟಾಗಿ ಅನಾಗರಿಕರಾಗಿದ್ದರು. ಅವರು ಅತ್ಯಂತ ಕಷ್ಟದ ಬದುಕನ್ನು ಬದುಕುತ್ತಿದ್ದರು. ಆಹಾರಕ್ಕಾಗಿ ಅವರು ಕಾಡುಗಳಲ್ಲಿ ಅಲೆದಾಡುತ್ತಿದ್ದರು. ಅವರಿಗೆ ಕೃಷಿ ಬೇಸಾಯವಾಗಲಿ ಅಥವಾ ಬೆಂಕಿಯ ಬಳಕೆಯಾಗಲಿ ತಿಳಿದಿರಲಿಲ್ಲ. ಅರಣ್ಯಗಳಲ್ಲಿ ವಾಸಿಸುತ್ತಿದ್ದ ಕ್ರೂರ ಪ್ರಾಣಿಗಳಿಗಿಂತ ಅವರ ಬದುಕು ಭಿನ್ನವಾಗಿರಲಿಲ್ಲ. ಡಾ. ಮುಜಂದಾರ್ ಹೇಳುವಂತೆ "ಒಟ್ಟಾರೆ, ನಮ್ಮ ದೃಷ್ಟಿಕೋನದಿಂದ ಹೇಳುವುದಾದರೆ ಪ್ರಾಣಿಗಳ ಬದುಕಿಗಿಂತ ಸ್ವಲ್ಪ ಉತ್ತಮವಾದ ಆದರೆ ಅನಾಗರಿಕವಾದ ಬದುಕನ್ನು ಅವರು ಬದುಕುತ್ತಿದ್ದರು".

*ಉಪಕರಣಗಳು*

ಈ ಕಾಲದಲ್ಲಿ ಅನಾಗರಿಕ ಬದುಕನ್ನು ಬದುಕುತ್ತಿದ್ದ ಮನುಷ್ಯ ಸದಾಕಾಲ ಕಾಡಿನಲ್ಲಿ ಕ್ರೂರ ವ್ಯುಗಗಳೊಂದಿಗೆ ಹೋರಾಟ ಮಾಡಬೇಕಾಗಿದ್ದುದರಿಂದ ಅವನು ಕಲ್ಲುಗಳಿಂದ ಕೆಲವು ಉಪಕರಣಗಳನ್ನು ಮಾಡಿಕೊಂಡ. ಈ ಆಯುಧಗಳು ತುಂಬಾ ಚೂಪಾಗಿದ್ದವು. ಆದರೆ ಅವು ಸಂಸ್ಕರಿಸಿ ವಿನ್ಯಾಸಗೊಳಿಸಿದ ಆಯುಧಗಳಾಗಿರಲಿಲ್ಲ. ಅವನು ತಯಾರಿಸಿದ ಆಯುಧಗಳೆಂದರೆ ಕೊಡಲಿ, ಕಡುಗತ್ತಿ, ಉಚ್ಚುಮಣೆ ಮುಂತಾದವು. ಕೈಕೊಲಿಯನ್ನು ಬೆಣಚುಕಲ್ಲಿನಿಂದ ತಯಾರಿಸುತ್ತಿದ್ದರು.

*ವಸತಿಗೃಹಗಳು*

ವಸತಿಗೃಹಗಳನ್ನು ಕಟ್ಟಿಕೊಳ್ಳುವಷ್ಟು ಪ್ರಾಚೀನ ಮಾನವ ಬುದ್ಧಿವಂತನಾಗಿರಲಿಲ್ಲ. ಆಹಾರಕ್ಕಾಗಿ ದೂರ ದೂರದ ಪ್ರದೇಶದವರೆಗೆ ಅವರು ಅಲೆದಾಡುತ್ತಿದ್ದುದರಿಂದ ಕಾಯಂ

ವಸತಿಯೆಂಬುದರ ಅಗತ್ಯ ಅವರಿಗೆ ಬೀಳಲಿಲ್ಲ. ಅನೇಕ ವರ್ಷಗಳು ಕಳೆದ ನಂತರ ಅವರು ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸಲು ತೊಡಗಿದರು.

***ಮರಣದ ನಂತರ ಶವ ಸಂಸ್ಕಾರ***

ಸತ್ತ ಶವವನ್ನು ಹೇಗೆ ಸಮಾಧಿ ಮಾಡಬೇಕೆಂಬುದು ಅವರಿಗೆ ತಿಳಿದಿರಲಿಲ್ಲ. ಸತ್ತ ಸ್ಥಳದಲ್ಲೆ ಶವವನ್ನು ಬಿಟ್ಟು ಬಿಡುತ್ತಿದ್ದರು. ಅದು ಪ್ರಾಣಿ ಪಕ್ಷಿಗಳ ಪಾಲಾಗುತ್ತಿತ್ತು. ಡಾ. ತ್ರಿಪಾಠಿ ಹೇಳುವಂತೆ,

"ಕ್ರಿಯಾವಿಧಿಗಳ ಮೂಲಕ ಶವಕ್ಕೆ ಸಂಸ್ಕಾರ ಮಾಡುವ ಕ್ರಮವನ್ನು ಅವರು ಕಲಿತಿರಲಿಲ್ಲ. ಶವಸಂಸ್ಕಾರಕ್ಕಾಗಿ ಸಮಾಧಿ ತೋಡುವುದು ಅಥವಾ ಗೋರಿಯನ್ನು ಕಟ್ಟುವುದು ಅವರಿಗೆ ಗೊತ್ತಿರಲಿಲ್ಲ".

***ಕಲೆ***

ಪ್ರಾಚೀನ ಮಾನವನು ಜೀವಿಸುತ್ತಿದ್ದ ಕೆಲವು ಗುಹೆಗಳಲ್ಲಿ ಕಾಡು ಪ್ರಾಣಿಗಳ ಚಿತ್ರಗಳನ್ನು ಬಿಡಿಸಿರುವುದು ಕಂಡು ಬಂದಿದೆ. ಕಲೆಯ ಬಗ್ಗೆ ಹಳೆಯ ಶಿಲಾಯುಗ ಪೂರ್ವದ ಮಾನವನಿಗೆ ಇದ್ದ ತುಡಿತ ಇದರಿಂದ ತಿಳಿದು ಬರುತ್ತದೆ.

ಪ್ರಾಚೀನ ಮಾನವನು ಸಾಮಾಜಿಕ ಮತ್ತು ರಾಜಕೀಯ ಜೀವನದಿಂದ ಸಂಪೂರ್ಣ ದೂರವಾಗಿದ್ದ. ಕಾಲಕಳೆದಂತೆ ಕ್ರೂರ ಪ್ರಾಣಿಗಳ ಭಯದಿಂದ ಅವನು ಗುಂಪಿನಲ್ಲಿ ವಾಸಿಸಲು ತೊಡಗಿದ. ಪ್ರಾಚೀನ ಮಾನವನನ್ನು ಕುರಿತು ಡಾ. ತ್ರಿಪಾಠಿ ಹೀಗೆ ಬರೆಯುತ್ತಾರೆ.

"ಪ್ರಾಚೀನ ಮಾನವನು ಅಜ್ಞಾನ ಮತ್ತು ಅನಾಗರಿಕತೆಗಳ ಕೂಪದಲ್ಲಿದ್ದ. ನಾಗರಿಕತೆಯೆಂಬ ಬೆಳಕಿನ ಕಡೆಗೆ ಅವನು ತುಂಬಾ ನಿಧಾನವಾಗಿ ನಡೆಯ ತೊಡಗಿದ".

ಹಳೆಯ ಶಿಲಾಯುಗ ಪೂರ್ವಕಾಲ ಮತ್ತು ನೂತನ ಶಿಲಾಯುಗಗಳ ನಡುವಿನ ಕಾಲವನ್ನು ಮಧ್ಯ ಇತಿಹಾಸ ಪೂರ್ವಯುಗವೆಂದು ಕರೆಯಬಹುದು.

### 35.2.2 *ಮೆಸೊಲಿಥಿಕ್ ಯುಗ (ಮಧ್ಯ ಶಿಲಾಯುಗ)*

ಈ ಯುಗದಲ್ಲಿ ಉಪಕರಣಗಳು ಮತ್ತು ಆಯುಧಗಳಿಗೆ ಸಂಬಂಧಿಸಿದಂತೆ ಅನೇಕ ಸುಧಾರಣೆಗಳು ನಡೆದವು. ಪ್ರಾಣಿಗಳ ಮೂಳೆಯಿಂದ ತಯಾರಿಸಿದ ಆಯುಧಗಳನ್ನು ಹೇಗೆ ಉಪಯೋಗಿಸಬೇಕು ಎಂಬುದನ್ನು ಅವನು ಕಲಿತ. ಆದಿ ಮಾನವನು ಈ ಯುಗದಲ್ಲಿ ಬೆಣಚುಕಲ್ಲುಗಳಲ್ಲದೆ ರಕ್ತ ಶಿಲೆ ಮತ್ತು ಕೆಂಪು ಬೆಣಚುಕಲ್ಲುಗಳಿಂದ ಆಯುಧಗಳನ್ನು ಮಾಡುವುದನ್ನು ಕಲಿತ. ಈ ಯುಗದಲ್ಲಿ ಬಳಕೆಯಾಗುತ್ತಿದ್ದ ಆಯುಧಗಳ ಸಂಖ್ಯೆ ಸೀಮಿತವಾಗಿತ್ತು. ಆದ್ದರಿಂದ ಅವುಗಳನ್ನು ಕಿರು ಆಯುಧಗಳೆಂದು ಕರೆಯಲಾಗಿದೆ. ಈ ಆಯುಧಗಳ ಒಂದು ಕೊನೆಯಲ್ಲಿ ಮರದಿಂದ ಮಾಡಿದ ಹಿಡಿಗಳಿರುತ್ತಿದ್ದವು. ಈ ಯುಗದಲ್ಲಿದ್ದ ಮುಖ್ಯ ಕಸುಬೆಂದರೆ ಬೇಟೆ, ಮನೆಕಟ್ಟುವುದು ಮತ್ತು ಕೃಷಿಗಳ ಬಗ್ಗೆ ಅವನಿಗೆ ಏನೂ ಗೊತ್ತಿರಲಿಲ್ಲ. ಆದರೆ ಈ ಯುಗದಲ್ಲಿ ಸತ್ತ ನಂತರ ಶವಗಳನ್ನು ವಿಧ್ಯುಕ್ತವಾಗಿ ಹೂಳುವ ಕ್ರಮವನ್ನು ಕಲಿತುಕೊಂಡ. ನಾಯಿಯು ಅವರ ಸಾಕು ಪ್ರಾಣಿಯಾಯಿತು. ಮಧ್ಯ ಶಿಲಾಯುಗದ ಕೊನೆಯ ಭಾಗದಲ್ಲಿ ಮಾನವನು ಮಣ್ಣಿನಲ್ಲಿ ಮಡಕೆ ಮಾಡುವುದನ್ನು ಕಲಿತನು.

### 35.2.3 *ನೂತನ ಶಿಲಾಯುಗ*

ನೂತನ ಶಿಲಾಯುಗಕ್ಕೆ ವಿಕಾಸಹೊಂದುವ ದಿಶೆಯಲ್ಲಿ ಮಧ್ಯ ಇತಿಹಾಸಪೂರ್ವಯುಗದ ಕಾಣಿಕೆ ಅಪಾರವಾಗಿದೆ. ಪ್ರಗತಿಗೆ ಅಗತ್ಯವಾದ ಸಂಭವನೀಯ ಸಾಮರ್ಥ್ಯವು ಮನುಷ್ಯನ ವ್ಯಕ್ತಿತ್ವದಲ್ಲಿ

ವಂಶಪಾರಂಪರ್ಯವಾಗಿ ಅಡಗಿರುತ್ತದೆ. ಉಪಕರಣ ಮತ್ತು ಆಯುಧಗಳು ಕಲ್ಲಿನಿಂದಲೇ ತಯಾರಾಗುತ್ತಿದ್ದರೂ, ಜನರಿಗೆ ಲೋಹದ ಬಳಕೆ ಗೊತ್ತಿತ್ತು. ಹಿಂದಿನ ಯುಗಗಳಿಗಿಂತ ಇಲ್ಲಿ ಜನರು ಬಳಸುತ್ತಿದ್ದ ಉಪಕರಣಗಳು ನಯವಾಗಿದ್ದವು. ಸುಂದರವಾಗಿದ್ದವು ಮತ್ತು ಉಜ್ವಲವಾಗಿದ್ದವು. ಈಯುಗಕ್ಕೆ ಸಂಬಂಧಿಸಿದ ಅವಶೇಷಗಳು ತಮಿಳುನಾಡು, ಕರ್ನಾಟಕ, ಆಂದ್ರಪ್ರದೇಶ, ಕಾಶ್ಮೀರ, ಬಂಗಾಳ, ಒರಿಸ್ಸಾ ಮಹಾರಾಷ್ಟ್ರಗಳಲ್ಲಿ ದೊರೆತಿವೆ.

ಈ ಯುಗವು ಕ್ರಿ.ಪೂ. 10,000 ದಿಂದ 3000 ದ ಕಾಲಾವಧಿಯಲ್ಲಿತ್ತು ಎನ್ನಲಾಗಿದೆ. ಮನುಷ್ಯನ ಪ್ರಗತಿ ಇಲ್ಲಿ ತುಂಬಾ ವೇಗವಾಗಿ ನಡೆಯಿತು. ಅಲೆಮಾರಿತನವನ್ನು ಬಿಟ್ಟು ಮಾನವನು ಒಂದು ಸ್ಥಳದಲ್ಲಿ ಜೀವಿಸತೊಡಗಿದನು. ಬೇಸಾಯವನ್ನು ಮಾಡುವುದನ್ನು ಕಲಿತುಕೊಂಡ ಮಾನವನು ಹಣ್ಣುಗಳನ್ನು ಬೆಳೆಯಲು ತೊಡಗಿದ. ಪ್ರಾಣಿಗಳನ್ನು ಸಾಕುವ ಪದ್ಧತಿ ರೂಢಿಗೆ ಬಂದಿತು. ಈ ಯುಗದಲ್ಲಿ ಜನರ ಕಸುಬು ಮುಖ್ಯವಾಗಿ ಬೇಟೆ, ಮೀನುಗಾರಿಕೆ, ಕುರಿ, ಮೇಕೆ ಸಾಗಾಣಿಕೆಗಳಾಗಿದ್ದವು. ಅವರು ಗೋಧಿ, ಬಾರ್ಲಿ, ಮೆಕ್ಕೆಜೋಳ ಮತ್ತು ತರಕಾರಿಯನ್ನು ಬೆಳೆಯಲು ತೊಡಗಿದರು. ಹತ್ತಿ ಮತ್ತು ಉಣ್ಣೆಯಿಂದ ಬಟ್ಟೆಯನ್ನು ನೇಯುವುದನ್ನು ಕಲಿತನು. ಡಾ. ತ್ರಿಪಾಠಿಯವರು ಹೇಳಿರುವಂತೆ ಈ ಯುಗದಲ್ಲಿ ಮಾನವನ ಪ್ರಗತಿ ಅದ್ಭುತವಾಗಿತ್ತು'.

*ಉಪಕರಣಗಳು ಮತ್ತು ಆಯುಧಗಳು*

ಉಪಕರಣ ಮತ್ತು ಆಯುಧಗಳಿಗೆ ಸಂಬಂಧಿಸಿದಂತೆ ನೂತನ ಶಿಲಾಯುಗದಲ್ಲಿ ಮಾನವನು ದೊಡ್ಡ ಪ್ರಗತಿ ಸಾಧಿಸಿದ. ಇಲ್ಲಿಯೂ ಆಯುಧಗಳನ್ನು ಕಲ್ಲಿನಿಂದಲೇ ತಯಾರಿಸಿದರೂ ಅವುಗಳನ್ನು ತಿದ್ದಿ-ತೀಡಿ ವಿನ್ಯಾಸಗೊಳಿಸಲಾಗಿತ್ತು. ಆಯುಧಗಳ ಸಂಖ್ಯೆಯೂ ಅಧಿಕಗೊಂಡಿತು. ಬೇರೆ ಬೇರೆ ಉದ್ದೇಶಗಳಿಗೆ ಬೇರೆ ಬೇರೆ ಆಯುಧಗಳನ್ನು ಬಳಸಲು ತೊಡಗಿದ ಈ ಬಗ್ಗೆ ಮುಜುಂದಾರ್ ಹೀಗೆ ಹೇಳಿದ್ದಾರೆ.

"ನೂತನ ಶಿಲಾಯುಗದಲ್ಲಿ ಮಾನವನು ಕಪ್ಪು ಶಿಲೆಗಳಿಂದ ಆಯುಧಗಳನ್ನು ಮಾಡುತ್ತಿದ್ದ. ಇದಲ್ಲದೆ ಬೆಣಚು, ಬಳಪದ ಕಲ್ಲು, ಅಗ್ನಿಶಿಲೆ, ರಾಚಶಿಲೆ, ಅಭ್ರಕ ಮುಂತಾದ ಕಲ್ಲುಗಳಿಂದಲೂ ಆಯುಧಗಳನ್ನು ಮಾಡುತ್ತಿದ್ದರು".

*ಆಹಾರ*

ನೂತನ ಶಿಲಾಯುಗದ ಮಾನವನು ಆಹಾರದ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸುಧಾರಣೆ ತಂದನು. ಕಾಲ ಕಳೆದಂತೆ ಅವನಿಗೆ ಬೆಂಕಿಯ ಬಳಕೆ ಗೊತ್ತಾಯಿತು. ಆಹಾರವನ್ನು ಬೇಯಿಸಿ ಸೇವಿಸತೊಡಗಿದನು. ಹಣ್ಣು, ಹಾಲು, ಮೊಸರು, ತುಪ್ಪ, ಬೆಣ್ಣೆ ಮತ್ತು ಹಣ್ಣಿನ ರಸ, ತರಕಾರಿ ಮುಂತಾದವುಗಳು ಅವರ ಮುಖ್ಯ ಆಹಾರವಾಗಿತ್ತು. ಅನೇಕ ಪಕ್ಷಿಗಳು ಮತ್ತು ಪ್ರಾಣಿಗಳ ಮಾಂಸವನ್ನು ಅವನು ಸೇವಿಸುತ್ತಿದ್ದನು. ತಾವೇ ಬೆಳೆದ ಗೋಧಿಯಿಂದ ತಯಾರಿಸಿದ ರೊಟ್ಟಿಯನ್ನು ಸೇವಿಸತೊಡಗಿದ. ಡಾ. ತ್ರಿಪಾಠಿ ಹೇಳುವಂತೆ "ಸರಳವಾಗಿದ್ದ ಅವನ ಆಹಾರವು ಧಾನ್ಯ, ಅರಣ್ಯ ಸಾಮಗ್ರಿ, ತರಕಾರಿ, ಹಾಲು, ಜೇನುತುಪ್ಪ, ಕಾಡಿನ ಕಾಳುಗಳನ್ನು ಒಳಗೊಂಡಿತ್ತು.

*ಉಡುಪು*

ಕೃಷಿಯನ್ನು ರೂಢಿಸಿಕೊಂಡ ಮಾನವನು ಹತ್ತಿಯನ್ನು ಬೆಳೆಯಲು ತೊಡಗಿದನು. ನೂಲುವ ಚರಕವನ್ನು ಕಂಡು ಹಿಡಿದ ಮೇಲೆ ಬಟ್ಟೆ ನೇಯುವ ಕಲೆಯನ್ನು ಕಲಿತುಕೊಂಡನು. ಆಧುನಿಕ ಯುಗದ ದೋತಿಗೆ ಹೋಲಿಸಬಹುದಾದ ನೀಳವಾದ ಬಟ್ಟೆಯಿಂದ ತನ್ನ ದೇಹವನ್ನು ಮುಚ್ಚಿಕೊಳ್ಳುವ ಕ್ರಮವನ್ನು ಮಾನವನು ರೂಢಿಸಿಕೊಂಡನು.

*ವಸತಿ ನಿರ್ಮಾಣ*

ವಸತಿಗಾಗಿ ಮನೆಗಳನ್ನು ನಿರ್ಮಿಸುವ ಕಲೆಯನ್ನು ಮಾನವ ರೂಢಿಸಿಕೊಂಡನು. ಮಣ್ಣು ಮತ್ತು ಕಲ್ಲಿನಿಂದ ಮನೆ ಕಟ್ಟುವ ಕೆಲಸ ಆರಂಭವಾಯಿತು. ಈ ಮನೆಗಳ ಒಳಗಿನ ಗೋಡೆಗಳ ಮೇಲೆ ವನ್ಯ ಮೃಗಗಳ ಹಾಗೂ ಸಾಕು ಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗುತ್ತಿತ್ತು. ಈ ಗೋಡೆಗಳ ಮೇಲೆ ಬೇಟೆ ಮತ್ತು ನರ್ತನಗಳ ಚಿತ್ರಗಳನ್ನು ಚಿತ್ರಿಸಲಾಗುತ್ತಿತ್ತು.

*ಮಡಕೆ*

ನೂತನ ಶಿಲಾಯುಗದ ಮಾನವನಿಗೆ ಮಡಕೆ ಮಾಡುವ ಕಲೆ ಗೊತ್ತಿತ್ತು. ಜೇಡಿ ಮಣ್ಣಿನಿಂದ ಮೊದಲು ಮಡಕೆ ಮಾಡಲು ತೊಡಗಿದ. ಆರಂಭದಲ್ಲಿ ಕೈನಿಂದ ಮಡಕೆ ಮಾಡಲಾಗುತ್ತಿತ್ತು. ಕಾಲಾನಂತರ ಕುಂಬಾರನ ಚಕ್ರವನ್ನು ಕಂಡು ಹಿಡಿಯಲಾಯಿತು.

*ಶವಸಂಸ್ಕಾರ*

ತೆರೆದ ಬಯಲಿಗೆ ಶವವನ್ನು ಎಸೆಯುವ, ಪ್ರಾಣಿಗಳಿಗೆ ಆಹಾರವಾಗುವಂತೆ ಶವವನ್ನು ಬಿಸಾಕುವ ಪದ್ಧತಿ ನಿಂತು ಹೋಯಿತು. ಅವರು ಶವಗಳನ್ನು ಎರಡು ರೀತಿ ವಿಲೇವಾರಿ ಮಾಡುತ್ತಿದ್ದರು. ಮೊದಲನೆಯದು ಶವವನ್ನು ಹೂಳುತ್ತಿದ್ದರು. ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ ದೊರೆತ ಅಸ್ತಿಪಂಜರದಿಂದ ಇದು ದೃಢಪಟ್ಟಿದೆ. ಎರಡನೆಯದು ಪೆಟ್ಟಿಗೆಯಲ್ಲಿ ಶವವನ್ನಿಟ್ಟು ಹೂಳುವುದು. ಶವಪೆಟ್ಟಿಗೆಯಲ್ಲಿ ಶವವನ್ನು ಸುಟ್ಟು ಭೂದಿಯಿಡುತ್ತಿರಲಿಲ್ಲ. ಇಡೀ ಶವವನ್ನೇ ಶವಪೆಟ್ಟಿಗೆಯಲ್ಲಿ ಇಡಲಾಗುತ್ತಿತ್ತು.

*ನಾಗರಿಕತೆ*

ದಾರಿಯಲ್ಲಿ ಮಾನವ ಸಾಧಿಸಿಕೊಂಡ ಪ್ರಗತಿ ಹಾಗೂ ಕೃಷಿ, ಕುಂಬಾರಿಕೆ ಮುಂತಾದ ಕುಶಲತೆಗಳನ್ನು ಸಂಪಾದಿಸಿಕೊಂಡ ಪರಿಣಾಮವಾಗಿ ಸಮಾಜದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ಉಂಟಾದವು. ಈ ಯುಗದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕೆಂಬ ಬಲವಾದ ವಾಂಛೆ ಜನರಲ್ಲಿ ವ್ಯಕ್ತವಾದುದನ್ನು ನೋಡಬಹುದು. ಈ ಯುಗದಲ್ಲಿ ಅನೇಕ ಬುಡಕಟ್ಟುಗಳು ರೂಪುಗೊಂಡವು.

### 35.2.4 *ತಾಮ್ರ ಮತ್ತು ಕಂಚಿನ ಯುಗ*

ನೂತನ ಶಿಲಾಯುಗ ಅಂತ್ಯಗೊಂಡ ಮೇಲೆ ಮಾನವನು ಲೋಹಗಳನ್ನು ಬಳಕೆ ಮಾಡ ತೊಡಗಿದನು. ಆರಂಭದಲ್ಲಿ ಅವರು ಚಿನ್ನದ ಮೆರಗಿಗೆ ಆಕರ್ಷಿತಗೊಂಡರು. ಕಾಲಕ್ರಮೇಣ ಅವರು ಗಟ್ಟಿಮುಟ್ಟಾದ ಇತರೆ ಲೋಹಗಳಾದ ತಾಮ್ರ ಮತ್ತು ಕಂಚಿನ ಬಳಕೆಗೆ ತೊಡಗಿದರು. ಆದರೆ ಅವರಿಗೆ ಕಬ್ಬಿಣದ ಬಳಕೆ ಗೊತ್ತಿರಲಿಲ್ಲ. ನಾಗರಿಕತೆಯ ವಿಕಾಸದಲ್ಲಿ ಯಾವ ಲೋಹ ಮೊದಲು ಬಳಕೆಗೆ ಬಂತು ಎಂಬುದರ ಬಗ್ಗೆ ಇತಿಹಾಸಜ್ಞರಲ್ಲಿ ಒಮ್ಮತಾಭಿಪ್ರಾಯವಿಲ್ಲ. ಉತ್ತರ ಭಾರತದಲ್ಲಿ ಕಲ್ಲಿಗೆ ಬದಲಾಗಿ ಲೋಹವನ್ನು ಬಳಸುವುದು ರೂಢಿಗೆ ಬಂದಿತು. ತಾಮ್ರದಿಂದ ಮಾಡಿದ ಸಾಮಗ್ರಿಗಳನ್ನು ಅವರು ಬಳಸುತ್ತಿದ್ದುದರ ಬಗ್ಗೆ ನಮಗೆ ಅವಶೇಷಗಳು ದೊರೆತಿವೆ.

### 35.2.5 *ಕಬ್ಬಿಣದ ಯುಗ*

ಶತಮಾನಗಳು ಕಳೆದ ನಂತರ ಮಾನವನು ಕಬ್ಬಿಣವನ್ನು ಕಂಡುಹಿಡಿದ. ಅದು ತಾಮ್ರ ಮತ್ತು ಕಂಚಿಗಿಂತ ಗಟ್ಟಿಯಾದುದು ಎಂಬುದು ಅವನಿಗೆ ತಿಳಿಯಿತು. ತಾಮ್ರಕ್ಕೆ ಪ್ರತಿಯಾಗಿ ಕಬ್ಬಿಣದ ಬಳಕೆ ರೂಢಿಗೆ ಬಂದಿತು. ಕಬ್ಬಿಣದ ಸಂಶೋಧನೆಯು ನಾಗರಿಕತೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಉಂಟುಮಾಡಿತು. ಭಾರತದಲ್ಲಿ ಆರ್ಯರು ಮೊದಲು ಕಬ್ಬಿಣವನ್ನು

ಬಳಸಿದರೆಂದು ಹೇಳಲಾಗಿದೆ. ತಾಮ್ರ ಮತ್ತು ಕಂಚಿನ ಯುಗವು ಉತ್ತರ ಭಾರತದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ದಕ್ಷಿಣ ಭಾರತದಲ್ಲಿ ಶಿಲಾಯುಗದ ನಂತರ ಕಬ್ಬಿಣ ಯುಗ ಆರಂಭಗೊಂಡಿತು.

ಈ ಯುಗದಲ್ಲಿ ತಾಮ್ರ ಮತ್ತು ಕಂಚನಿಂದ ಆಯುಧಗಳನ್ನು ಮಾಡುವ ಕ್ರಮವನ್ನು ಕೈಬಿಟ್ಟನು. ಉಪಕರಣಗಳಾದ ಖಡ್ಗ, ಕೊಡಲಿ, ಚಾಕು, ಚೂರಿ, ಹಾರೆ ಮುಂತಾದವುಗಳನ್ನು ಈಗ ಕಬ್ಬಿಣದಿಂದ ಮಾಡಿಕೊಳ್ಳತೊಡಗಿದ. ಕಾಲಕ್ರಮೇಣ ಕಬ್ಬಿಣಯುಗದಲ್ಲಿ ನಾಗರಿಕತೆಯ ಮಹತ್ವದ ಪ್ರಗತಿಯನ್ನು ಸಾಧಿಸಿಕೊಂಡಿತು. ಜನರು ಅನೇಕ ಬಗೆಯ ಆಭರಣಗಳನ್ನು ತೊಟ್ಟುಕೊಳ್ಳತೊಡಗಿದರು. ಒಳ್ಳೆಯ ಉಡುಪು ಧರಿಸತೊಡಗಿದರು. ಮನೋರಂಜನೆ ಮತ್ತು ವಿನೋದಗಳಲ್ಲಿ ಕಾಲಕಳೆಯತೊಡಗಿದ. ವಸತಿ ಸೌಕರ್ಯವನ್ನು ಮತ್ತು ಸಂಪರ್ಕ ಸಾಧನವನ್ನು ಉತ್ತಮಪಡಿಸಿಕೊಂಡನು.

ತಾಮ್ರ ಮತ್ತು ಕಂಚಿನ ಯುಗದಲ್ಲಿ ಸಾಧಿಸಿಕೊಂಡ ರಾಜಕೀಯ ಜೀವನಕ್ಕೆ ಸಂಬಂಧಿಸಿದ ಸುಧಾರಣೆ ಕಬ್ಬಿಣಯುಗದಲ್ಲಿ ಸ್ಥಿರವಾಗಿತ್ತು. ಈ ಯುಗದಲ್ಲಿ ಮಾನವನು ಪ್ರಕೃತಿಯ ಶಕ್ತಿಗಳನ್ನು ಪೂಜಿಸತೊಡಗಿದನು.

ನಾಗರಿಕತೆಯ ಆರಂಭದಲ್ಲಿ ಪ್ರಕೃತಿಯ ಜೊತೆ ಮಾನವನು ಸಂಘರ್ಷ ಮಾಡಬೇಕಾಗಿತ್ತು. ಮಾನವನ ಜೀವನ ಆರಂಭವಾದ ಬಹುಮುಖ್ಯ ಕೇಂದ್ರವೆಂದರೆ ಭಾರತ. ಈ ಕಾರಣದಿಂದಾಗಿ ಭಾರತೀಯ ನಾಗರಿಕತೆ ವಿಶ್ವದಲ್ಲೇ ಪ್ರಾಚೀನವಾದುದೆಂದು ಕೀರ್ತಿ ಬಂದಿದೆ. ನಾಗರಿಕತೆಯ ಪ್ರಗತಿಯಲ್ಲಿ ಪ್ರಕೃತಿಯ ಪಾತ್ರವೂ ಮಹತ್ವದ್ದಾಗಿತ್ತು. ವಿವಿಧ ಜನಾಂಗಗಳೂ ನಾಗರಿಕತೆಯ ಪ್ರಗತಿಗೆ ಕಾಣಿಕೆ ನೀಡಿದವು.

## 35.3 ಜನಾಂಗಗಳು

ಉತ್ತರ ಭಾರತವು ಭೌತಿಕವಾಗಿ ಅಸ್ತಿತ್ವಕ್ಕೆ ಬಂದ ಮೇಲೆ ಅಲ್ಲಿ ಮಾನವನು ವಾಸಿಸತೊಡಗಿದನು. ಅನೇಕ ಶತಮಾನಗಳ ನಂತರ ದ್ರಾವಿಡರು, ಆರ್ಯರು, ಪರ್ಶಿಯನ್ನರು, ಗ್ರೀಕರು, ಶಾಕ್ಯರು, ಯಹೂದಿಗಳು, ಹೂಣರು, ಮುಸ್ಲಿಮರು ಮತ್ತು ಯುರೋಪಿನ ಜನಾಂಗ ಭಾರತದೊಳಗೆ ಒಂದಾದ ಮೇಲೆ ಒಂದರಂತೆ ಪ್ರವೇಶಿಸಿದವು. ಭಾರತೀಯರ ಭೌತಿಕ ರೂಪವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನಂತರ ಸರ್ ಹರ್ಬರ್ಟ್‌ರಿಸಲೇ 'ಭಾರತದ ಜನತೆ' ಎಂಬ ತನ್ನ ಗ್ರಂಥದಲ್ಲಿ ವಿವಿಧ ಜನಾಂಗಗಳ ವೈಲಕ್ಷಣಗಳನ್ನು ಹೀಗೆ ಗುರುತಿಸಿದ್ದಾನೆ.

***ಟರ್ಕೋ-ಇರಾನಿಯನ್ ಪ್ರಭೇದ***

ಇಂದು ಪಾಕಿಸ್ಥಾನಕ್ಕೆ ಸೇರಿರುವ ವಾಯುವ್ಯ ಸರಹದ್ದು ಪ್ರದೇಶದಲ್ಲಿ, ಬಲೂಚಿಸ್ಥಾನದ ಆಫ್‌ಘನ್ನರು ಮತ್ತು ಬಲೂಚ್-ಬ್ರಹೂರ್ ಜನಾಂಗವನ್ನು ಪ್ರತಿನಿಧಿಸುತ್ತದೆ.

***ಇಂಡೋ-ಆರ್ಯನ ಪ್ರಭೇದ***

ಪಂಜಾಬ್, ರಾಜಪುತಾನ ಮತ್ತು ಕಾಶ್ಮೀರವನ್ನು ಪ್ರತಿನಿಧಿಸುತ್ತದೆ. ಈ ಜನಾಂಗದ ಜನರು ದೈಹಿಕವಾಗಿ ಅಜಾನುಬಾಹುಗಳು, ಸುಂದರ ವರ್ಣದವರೂ, ಕಪ್ಪು ಕಣ್ಣುಗಳು ಮತ್ತು ಮುಖದ ತುಂಬಾ ಕೂದಲು, ಉದ್ದನೆಯ ತಲೆ ಮತ್ತು ಚೂಪಾದ ಮೂಗನ್ನು ಉಳ್ಳವರಾಗಿರುತ್ತಾರೆ.

*ಸ್ಕಿಥಿಯನ್-ದ್ರಾವಿಡಿಯನ್ ಪ್ರಭೇದ*

ಸಿಂಧ್, ಗುಜರಾತ್ ಮತ್ತು ಮುಂಬೈ ರಾಜ್ಯದ ಜನರು ಸದರಿ ಪ್ರಭೇದಕ್ಕೆ ಸೇರುತ್ತಾರೆ. ಮರಾಠರು ಮತ್ತು ಕೂರ್ಗಿಗಳೂ ಸಹ ಇದೇ ಜನಾಂಗಕ್ಕೆ ಸೇರುತ್ತಾರೆ.

*ಆರ್ಯೋ- ದ್ರಾವಿಡಿಯನ್ ಪ್ರಭೇದ*

ಗಂಗಾ ತಪ್ಪಲು ಪ್ರದೇಶದಲ್ಲಿ ಪಂಜಾಬಿನ ಕೆಲ ಭಾಗಗಳಲ್ಲಿ, ರಾಜಸ್ಥಾನ ಮತ್ತು ಬಿಹಾರಗಳಲ್ಲಿ ಈ ಜನಾಂಗಕ್ಕೆ ಸೇರಿದ ಜನರನ್ನು ನೋಡಬಹುದು.

*ಮಂಗೋಲಾಯ್ಡ್-ದ್ರಾವಿಡಿಯನ್ ಪ್ರಭೇಧ*

ಬಂಗಾಳ ಮತ್ತು ಒರಿಸ್ಸಾಗಳಲ್ಲಿ ವಾಸಿಸುವ ಜನರೇ ಮಂಗೋಲಾಯ್ಡ್ ದ್ರಾವಿಡಿಯನ್ ಜನಾಂಗ.

*ಮಂಗೋಲಾಯ್ಡ್- ಪ್ರಭೇದ*

ಅಸ್ಸಾಮ್, ನೇಪಾಳ, ಭೂತಾನ ಮತ್ತು ಉತ್ತರ ಪ್ರದೇಶದ ಗಡಿಯಲ್ಲಿ, ಪಂಜಾಬ್ ಮತ್ತು ಕಾಶ್ಮೀರದಲ್ಲಿ ಆ ಜನಾಂಗವು ವಾಸಿಸುತ್ತದೆ.

*ದ್ರಾವಿಡಿಯನ್- ಪ್ರಭೇದ*

ಈ ಪ್ರಭೇದಕ್ಕೆ ಸೇರುವ ಜನರನ್ನು ಶ್ರೀಲಂಕಾ, ಗಂಗಾ ಕಣಿವೆ ಪ್ರದೇಶ, ಮದರಾಸು, ಹೈದರಾಬಾದ್ ಮತ್ತು ಮಧ್ಯ ರಾಜ್ಯಗಳಲ್ಲಿ ನೋಡಬಹುದು.

## 35.4 ಇತಿಹಾಸಪೂರ್ವಯುಗದ ಕೊಡುಗೆ

*ಸಾಮಾಜಿಕ ಜೀವನ*

ಬೇಟೆಯುಗದಲ್ಲಿ ಜನರು ಗುಂಪಾಗಿ ಸಂಚರಿಸುತ್ತಿದ್ದರು. ಅವರ ಉದ್ದೇಶ ಆಹಾರ ಸಂಗ್ರಹಣೆಯಾಗಿತ್ತು. ಗುಂಪಿನಲ್ಲಿ ಸಂಚರಿಸುವ ಕಾರಣದಿಂದಾಗಿ ಪರಸ್ಪರ ತಿಳಿದುಕೊಳ್ಳುವುದು ಸಾಧ್ಯವಾಯಿತು. ಅವರೊಳಗೆ ಸಹಕಾರ ಭಾವನೆ ಬೆಳೆಯಿತು. ಇದೇ ಮುಂದೆ ಕೃಷಿ ಸಮುದಾಯ ಮತ್ತು ಕೃಷಿಯೇತರ ಸಮುದಾಯಗಳ ನಡುವಿನ ಸಹಕಾರಕ್ಕೆ ಹಾದಿಯಾಯಿತು. ಒಂದೇ ಕಡೆ ವಾಸಿಸತೊಡಗಿದ ಮೇಲೆ ಸಹಕಾರ ಸಾಮಾನ್ಯವಾಗಿಬಿಟ್ಟಿತು. ಕೆಲವರು ಕೃಷಿಯನ್ನು ಕಸುಬನ್ನಾಗಿ ಮಾಡಿಕೊಂಡರು. ಮತ್ತೆ ಕೆಲವರು ತಾಂತ್ರಿಕ ಕುಶಲತೆಯನ್ನು ಗಳಿಸಿಕೊಂಡು ಕರಕುಶಲ ಕೆಲಸಗಾರರಾದರು. ಮತ್ತೊಂದು ಗುಂಪು ಜನರ ಬಳಿಯಲ್ಲಿದ್ದ ಹೆಚ್ಚುವರಿ ಸಾಮಗ್ರಿಯನ್ನು ಸಂಗ್ರಹಿಸಿಕೊಂಡು ಅಗತ್ಯವಾದವರಿಗೆ ಕೊಡುವ ಕೆಲಸದಲ್ಲಿ ನಿರತವಾಯಿತು. ಇದೇ ವ್ಯಾಪಾರಕ್ಕೆ ನಾಂದಿ ಹಾಡಿತು. ತಾವು ಬದುಕುತ್ತಿರುವ ಸಮುದಾಯಕ್ಕೆ ಒಳ್ಳೆಯವರಾಗಬೇಕೆಂಬುದೇ ಅವರೆಲ್ಲರ ಸಾಮಾನ್ಯ ಉದ್ದೇಶವಾಗಿತ್ತು.

*ಧಾರ್ಮಿಕ ಭಾವನೆ*

ಸಮಾಧಿ ಮತ್ತು ಸ್ಮಶಾನಗಳಲ್ಲಿ ಉತ್ಖನನ ನಡೆಸುವುದರ ಮೂಲಕ ಜನರ ಧಾರ್ಮಿಕ ನಂಬಿಕೆಗಳನ್ನು ಗುರುತಿಸುವುದು ಸಾಧ್ಯ. ಸತ್ತವನು ಬಳಸುತ್ತಿದ್ದ ಉಪಕರಣಗಳನ್ನು ಮತ್ತು ಅವನ ಬಳಿಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯನ್ನು ಸಮಾಧಿಯಲ್ಲಿ ಹೂಳುತ್ತಿದ್ದರು. ಇದರಿಂದ ಸತ್ತವನಿಗೆ ಮರುಜನ್ಮವಿದೆ ಎಂಬ ಅವರು ನಂಬುತ್ತಿದ್ದರು ಎಂಬುದು ತಿಳಿಯುತ್ತದೆ. ತಮ್ಮ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ, ದುಷ್ಟಶಕ್ತಿಯನ್ನು ನಿವಾರಿಸುವ ಸಲುವಾಗಿ ಅವರು

ದೇವಾನು ದೇವತೆಗಳನ್ನು ಪೂಜಿಸುತ್ತಿದ್ದರು. ಪುರೋಹಿತನಿಗೆ ಪ್ರತಿಷ್ಠಿತ ಸ್ಥಾನವಿತ್ತು. ಅವರನ್ನು ಮಾನವ ಮತ್ತು ದೇವರ ನಡುವಿನ ರಾಯಬಾರಿಯೆಂದು ಪರಿಗಣಿಸಲಾಗಿತ್ತು. ಆರಾಧನೆ ವಿಧಾನ ಮತ್ತು ವಿಚಾರಣೆಗಳನ್ನು ಗೋಪ್ಯವಾಗಿಡಲಾಗುತ್ತಿತ್ತು. ಜನರು ಕುರುಡು ಆಚರಣೆ ಮತ್ತು ಮೂಢ ನಂಬಿಕೆಗಳಲ್ಲಿ ಮುಳುಗಿ ಹೋಗಿದ್ದರು. ವೈಜ್ಞಾನಿಕ ಮನೋಭಾವದ ಬೆಳವಣಿಗೆಗೆ ಇದು ತೊಡಕಾಗಿ ಪರಿಣಮಿಸಿತು. ಪ್ರಶ್ನೆ ಮಾಡುವಂತಹ ಗುಣವನ್ನು ಅದು ಬೆಳೆಸಲಿಲ್ಲ.

*ರಾಜಕೀಯ ಜೀವನ*

ಈ ಯುಗದಲ್ಲಿ ಜನರು ರಾಜನಿಗೆ ಅಪಾರ ಶಕ್ತಿಯಿದೆಯೆಂದು ನಂಬಿದ್ದರು. ಹೊರಗಿನ ಶತ್ರುಗಳ ಆಕ್ರಮಣದಿಂದ ಸಮುದಾಯವನ್ನು ರಕ್ಷಿಸುವುದು ಮತ್ತು ಆಂತರಿಕವಾಗಿ ಸಮುದಾಯದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸುವಂತೆ ಮಾಡುವುದೇ ರಾಜಕೀಯ ವ್ಯವಸ್ಥೆಯ ಕರ್ತವ್ಯವಾಗಿತ್ತು. ಮನುಷ್ಯನ ಪ್ರಶ್ನೆ ಮಾಡುವ ಗುಣ, ಅನುಸಂಧಾನ, ಕ್ರಿಯೆಗೆ ಪ್ರತಿಕ್ರಿಯೆ ಇವುಗಳು ಮುಂದೆ ರೂಪುಗೊಳ್ಳಲಿದ್ದು ವೈಚಾರಿಕ ಮನೋಭಾವಕ್ಕೆ ಅಡಿಪಾಯ ಹಾಕಿದವು. ಆದಿ ಕಾಲದಲ್ಲಿ ಪರಿಶ್ರಮ ಮತ್ತು ಪ್ರಯೋಗ ಮೂಲಕ ಮಾನವನು ಕಂಡು ಹಿಡಿದ ಅನೇಕ ಮೂಲಭೂತ ಸಂಗತಿಗಳೇ ಮುಂದೆ ವೈಜ್ಞಾನಿಕ ಸಂಶೋಧನೆ ಹೆಬ್ಬಾಗಿಲುಗಳಾದವು. ಅವರು ಗಳಿಸಿದ ಅನುಭವಗಳೇ ಮುಂದೆ ಆಧುನಿಕ ಸೃಜನಶೀಲ ಪ್ರಯೋಗಗಳಿಗೆ ದಾರಿದೀಪಗಳಾದವು.

ಪ್ರಪಂಚದಲ್ಲಿ ಜನರು ಬದುಕುತ್ತಿದ್ದ ಸನ್ನಿವೇಶ, ವಾತಾವರಣ ಮತ್ತು ಅವರು ಎದುರಿಸುತ್ತಿದ್ದ ಸಮಸ್ಯೆಗಳು ಎಲ್ಲ ಕಡೆ ಒಂದೇ ರೂಪದಲ್ಲಿರಲಿಲ್ಲ. ಆದರೆ ಅವುಗಳನ್ನು ಕುಶಲತೆಯಿಂದ ಪರಿಹರಿಸಿಕೊಳ್ಳುತ್ತಿದ್ದ ಬುದ್ಧಿಶಕ್ತಿ ಮಾತ್ರ ಎಲ್ಲ ಸಮುದಾಯಗಳಿಗೂ ಒಂದೇ ಆಗಿತ್ತು. ತಾಂತ್ರಿಕ ಸಾಧನೆಗಳಲ್ಲಿನ ಏಕರೂಪತೆಯು ವಿಶ್ವದ ವಿವಿಧ ಸಮುದಾಯಗಳ ನಡುವೆ ಸೌಹಾರ್ದಯುತ ಏಕತೆಯನ್ನು ಸಾಧಿಸಿಕೊಳ್ಳಲು ಸಾಧನವಾಯಿತು. ಈ ಒಂದು ಏಕರೂಪಿ ಮತ್ತು ಏಕಕಾರಿ ಸ್ವರೂಪವನ್ನು ಆಧರಿಸಿಯೇ ಮಾನವನ ಜಾಗತಿಕ ಬೆಳವಣಿಗೆ ಎಂಬ ನುಡಿಗಟ್ಟು ಹುಟ್ಟಿಕೊಂಡಿದೆ.

## 35.5 ಸಾರಾಂಶ

ಇತಿಹಾಸಪೂರ್ವ ಯುಗವನ್ನು ಐದು ಬಗೆಗಳಾಗಿ ವರ್ಗೀಕರಿಸಲಾಗಿದೆ.

೧. ಹಳೆಯ ಶಿಲಾಯುಗ

೨. ಮಧ್ಯ ಶಿಲಾಯುಗ

೩. ನೂತನ ಶಿಲಾಯುಗ

೪. ತಾಮ್ರ ಮತ್ತು ಕಂಚಿನಯುಗ

೫. ಕಬ್ಬಿಣಯುಗ

ಗಂಗಾ-ಬ್ರಹ್ಮಪುತ್ರ ಬಯಲು ಪ್ರದೇಶವನ್ನು ಬಿಟ್ಟಿದೆ ಉಳಿದಂತೆ ಭಾರತದ ಹಳೆಯ ಶಿಲಾಯುಗವನ್ನು ಹಾದು ಬಂದಿದೆ. ಜನರ ಜೀವನ ತುಂಬಾ ಕ್ರೂರವಾಗಿತ್ತು. ಕಲ್ಲಿನಿಂದ ಅವರು ಆಯುಧಗಳನ್ನು ಮತ್ತು ಉಪಕರಣಗಳನ್ನು ಮಾಡುತ್ತಿದ್ದರು. ಬೇಟೆ ಮತ್ತು ಹಣ್ಣು ಹಂಪಲುಗಳನ್ನು ಸಂಗ್ರಹಿಸಿ ಅವರು ಬದುಕುತ್ತಿದ್ದರು. ಅವರು ನಗ್ನರಾಗಿರುತ್ತಿದ್ದರು. ಕೆಲವೊಮ್ಮೆ ಪ್ರಾಣಿಗಳ ಚರ್ಮದಿಂದ ಅಥವಾ ಮರದ ತೊಗಟೆಯಿಂದ ದೇಹವನ್ನು ಮುಚ್ಚಿಕೊಳ್ಳುತ್ತಿದ್ದರು. ಮನೆಯಲ್ಲಿ ವಾಸಿಸುವುದು ಅವರಿಗೆ ತಿಳಿದಿರಲಿಲ್ಲ. ಶವವನ್ನು ಹೂಳುವುದು ಅವರಿಗೆ ತಿಳಿದಿರಲಿಲ್ಲ. ಬಯಲು ಪ್ರದೇಶದಲ್ಲಿ ಸತ್ತ ಶವವನ್ನು ಬಿಸಾಕಿ ಬಿಡುತ್ತಿದ್ದರು.

ಮಧ್ಯಶಿಲಾಯುಗದಲ್ಲಿ ಸ್ವಲ್ಪಮಟ್ಟಿನ ನಾಗರಿಕತೆಯಲ್ಲಿ ಸುಧಾರಣೆ ಉಂಟಾಯಿತು. ಸುಧಾರಿಸಿದ ಆಯುಧಗಳನ್ನು ಮತ್ತು ಉಪಕರಣಗಳನ್ನು ಮಾಡುವುದನ್ನು ಮಾನವ ಕಲಿತನು. ಇನ್ನೂ ಬೇಸಾಯ ಗೊತ್ತಿರಲಿಲ್ಲ. ಹಳೆಯ ಶಿಲಾಯುಗದಲ್ಲಿದ್ದಂತೆ ಮಧ್ಯಶಿಲಾಯುಗದಲ್ಲೂ ಬೆಂಕಿಯ ಬಳಕೆ ಇರಲಿಲ್ಲ. ಈ ಯುಗದಲ್ಲಿ ಶವಸಂಸ್ಕಾರದ ಬಗ್ಗೆ ಸ್ವಲ್ಪ ಸುಧಾರಣೆಯಾಗಿದ್ದನ್ನು ನೋಡಬಹುದು.

ನೂತನ ಶಿಲಾಯುಗದಲ್ಲಿ ಮಾನವನು ಗಣನೀಯ ಪ್ರಗತಿ ಸಾಧಿಸಿಕೊಂಡನು. ಅಲೆಮಾರಿ ಜೀವನ ಇಲ್ಲಿ ಕೊನೆಗೊಂಡಿತು. ಒಂದು ಕಡೆ ನೆಲೆ ನಿಲ್ಲುವುದನ್ನು ಕಲಿತನು. ಬೇಸಾಯವನ್ನು ಕಲಿತನು. ಪ್ರಾಣಿಗಳನ್ನು ಸಾಕುವುದು ಪ್ರಾರಂಭವಾಯಿತು. ಇವು ಅವರ ಕಸುಬುಗಳಾದವು. ಈ ಯುಗದಲ್ಲಿ ಅವರು ನಯವಾದ, ಚೂಪಾದ ಮತ್ತು ಸುಂದರವಾದ ಆಯುಧಗಳನ್ನು ಉಪಕರಣಗಳನ್ನು ಮಾಡುವುದನ್ನು ಕಲಿತರು. ಬೆಂಕಿಯ ಬಳಕೆ ಗೊತ್ತಾಯಿತು. ಬೇಯಿಸಿದ ಆಹಾರ ತಿನ್ನುವುದನ್ನು ಕಲಿತನು. ಬೆತ್ತಲೆಯಾಗಿರುವುದು ನಿಂತು ಹೋಯಿತು. ಬಟ್ಟೆ ಧರಿಸುವುದನ್ನು ಕಲಿತನು. ಮನೆ ಕಟ್ಟುವುದು ಅವನಿಗೆ ತಿಳಿಯಿತು. ಶವವನ್ನು ಹೂಳುವ ಇಲ್ಲವೇ ಸುಡುವ ಪದ್ಧತಿ ಜಾರಿಗೆ ಬಂದಿತು.

ಲೋಹದ ಯುಗವನ್ನು ತಾಮ್ರದ ಯುಗ ಮತ್ತು ಕಬ್ಬಿಣದ ಯುಗವೆಂದು ವರ್ಗೀಕರಿಸಬಹುದು. ಮೊದಲು ಆಯುಧಗಳನ್ನು ಮತ್ತು ಸಲಕರಣೆಗಳನ್ನು ತಾಮ್ರ ಮತ್ತು ಕಂಚಿನಿಂದ ಮಾಡಿಕೊಳ್ಳ ತೊಡಗಿದನು. ಆಹಾರ ಮತ್ತು ವಸತಿಗೆ ಸಂಬಂಧಿಸಿದಂತೆ ಅನೇಕ ಸುಧಾರಣೆಗಳಾದವು. ಕಾಲಕ್ರಮೇಣ ತಾಮ್ರ ಮತ್ತು ಕಂಚಿನ ಸ್ಥಳದಲ್ಲಿ ಕಬ್ಬಿಣವು ಬಳಕೆಗೆ ಬಂದಿತು.

ಇತಿಹಾಸಪೂರ್ವಕ್ಕೆ ಸಂಬಂಧಿಸಿದಂತೆ ಇದು ಕೊನೆಯ ಯುಗವಾಗಿ ಪರಿಣಮಿಸಿತು. ಮನುಷ್ಯ ಪ್ರಗತಿ ತೀವ್ರಗತಿಯಲ್ಲಿ ನಡೆಯಿತು. ಇತಿಹಾಸಪೂರ್ವಕ್ಕೆ ಸಂಬಂಧಿಸಿದಂತೆ ಕಬ್ಬಿಣದ ಯುಗವೇ ಅತ್ಯಂತ ನಾಗರಿಕವಾದ ಯುಗವಾಗಿತ್ತು. ಈ ಯುಗದ ನಂತರ ಇತಿಹಾಸಪೂರ್ವ ಆರಂಭವಾಯಿತು. ಕಬ್ಬಿಣ ಯುಗದಲ್ಲೇ ಋಗ್ವೇದದ ರಚನೆಯಾಯಿತು.

## 35.6 ಮಾದರಿ ಪ್ರಶ್ನೆಗಳು

1. ಇತಿಹಾಸಪೂರ್ವ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳನ್ನು ಕುರಿತು ಚರ್ಚಿಸಿರಿ.
2. ಮಧ್ಯ ಶಿಲಾಯುಗ ಮತ್ತು ನೂತನ ಶಿಲಾಯುಗದಲ್ಲಿ ಮಾನವನ ಬದುಕು ಹೇಗಿತ್ತು ಎಂಬುದನ್ನು ಪರಿಶೀಲಿಸಿ.
3. ಇತಿಹಾಸಪೂರ್ವ ಯುಗದ ಕೊಡುಗೆಗಳ ಬಗ್ಗೆ ವಿಮರ್ಶಾತ್ಮಕ ಟಿಪ್ಪಣಿ ಬರೆಯಿರಿ.

## 35.7 ಹೆಚ್ಚಿನ ಅಭ್ಯಾಸಕ್ಕಾಗಿ ಪುಸ್ತಕಗಳು


1. Altekar .A.S. : **Ancient India**
2. Basham .A.L. : **The Wonder that was India**
3. Majumdar .R.C. (Ed) : **The Clasical Age**
4. Sathianathaiah .R. : **History of India, Vol I**
5. Sharma .R.C. : **Ancient India**

## ಟಿಪ್ಪಣಿಗಳು

# ಘಟಕ - 36

# ಹರಪ್ಪಾ ಸಂಸ್ಕೃತಿ : ಉಗಮ ಮತ್ತು ಬೆಳವಣಿಗೆ, ಸಮಾಜ ಮತ್ತು ಧರ್ಮ

*ರಚನೆ*


**36.0** ಉದ್ದೇಶಗಳು

**36.1** ಪ್ರಸ್ತಾವನೆ

**36.2** ನಾಗರೀಕತೆಯ ವಿಸ್ತಾರ

- **36.2.1** ಕಾಲ
- **36.2.2** ಜನರ ಜನಾಂಗೀಯ ಹಿನ್ನೆಲೆ

**36.3** ಸಾಮಾಜಿಕ ಜೀವನ

- **36.3.1** ಸಾಮಾಜಿಕ ವರ್ಗಗಳು
- **36.3.2** ಉಡುಪು ಮತ್ತು ಆಭರಣಗಳು
- **36.3.3** ಆಹಾರ ಮತ್ತು ಸಾಕುಪ್ರಾಣಿಗಳು
- **36.3.4** ಮನೆಬಳಕೆ ವಸ್ತುಗಳು
- **36.3.5** ಮನೋರಂಜನೆ, ಶೌಚಾಲಯ, ಸುಗಂಧ ದ್ರವ್ಯಗಳು, ಔಷಧಗಳು
- **36.3.6** ಕಲೆ, ಮುದ್ರೆಗಳು ಮತ್ತು ಲಿಪಿ
- **36.3.7** ಯುದ್ಧದಲ್ಲಿ ಬಳಸುತ್ತಿದ್ದ ಶಸ್ತ್ರಾಸ್ತ್ರಗಳು

**36.4** ಧರ್ಮ

- **36.4.1** ಶವಸಂಸ್ಕಾರ

**36.5** ಹರಪ್ಪಾ ಮತ್ತು ವೈದಿಕ ಸಂಸ್ಕೃತಿ

**36.6** ಉಪಸಂಹಾರ

**36.7** ಮಾದರಿ ಪ್ರಶ್ನೆಗಳು

**36.8** ಅಭ್ಯಾಸಕ್ಕೆ ಪುಸ್ತಕಗಳು

## 36.0 ಉದ್ದೇಶಗಳು

ಈ ಘಟಕದ ಅಭ್ಯಾಸದಿಂದ ಕೆಳಗಿನ ಸಂಗತಿಗಳನ್ನು ತಿಳಿದುಕೊಳ್ಳುತ್ತೇವೆ.

1. ಐದು ಸಾವಿರ ವರ್ಷಗಳಷ್ಟು ಪ್ರಾಚೀನವಾದ ಭಾರತದ ಈ ಆರ್ಯರ ಪೂರ್ವದ ನಗರ ಸಂಸ್ಕೃತಿಯು ಈಜಿಪ್ಟ್, ಬ್ಯಾಬಿಲೋನಿಯಾ ಮತ್ತು ಮೆಸಪೋಟೋಮಿಯಾ ಸಮಕಾಲೀನ ಸಂಸ್ಕೃತಿ ಎನ್ನುವುದನ್ನು ಅರ್ಥೈಸಿಕೊಳ್ಳುವುದು.

2. ಸಿಂಧೂಕೊಳ್ಳದ ಜನರ ಸಾಮಾಜಿಕ ಜೀವನದ ವಿವಿಧ ಸಂಗತಿಗಳನ್ನು ಅಂದರೆ ಅವರ ಉಡುಪು, ಆಭರಣ, ಆಹಾರ, ಮನೋರಂಜನೆ, ಶೌಚಾಲಯ ವ್ಯವಸ್ಥೆ, ವೈದ್ಯಕೀಯ ವ್ಯವಸ್ಥೆ, ಸುಗಂಧ ದ್ರವ್ಯಗಳು, ಕಲೆ-ಚಿತ್ರಕಲೆ, ಸಂಗೀತ, ನೃತ್ಯ, ಮುದ್ರೆ, ಲಿಪಿ, ಸ್ತ್ರೀಯರ ಸ್ಥಿತಿ-ಗತಿಗಳನ್ನು ಚರ್ಚಿಸುವುದು.

3. ಹರಪ್ಪಾ ಸಂಸ್ಕೃತಿ ಕಾಲದ ಧಾರ್ಮಿಕ ಪರಿಕಲ್ಪನೆ -ಆಚರಣೆಗಳನ್ನು ವಿಶ್ಲೇಷಿಸುವುದು.

## 36.1 ಪ್ರಸ್ತಾವನೆ

1921-22 ರ ಸಿಂಧೂಕೊಳ್ಳದ ಭೂ ಉತ್ಖನನಗಳು ಪ್ರಾಚೀನ ಭಾರತದ ನಾಗರೀಕತೆ ಆರ್ಯರ ಆಗಮನದಿಂದ ಆರಂಭವಾಗಿದೆ ಎನ್ನುವ ನಂಬಿಕೆಯನ್ನು ಸುಳ್ಳು ಮಾಡಿವೆ. ಈ ಭೂ ಉತ್ಖನನಗಳಿಂದ ಸಿಂಧೂಕೊಳ್ಳದ ಪ್ರದೇಶದಲ್ಲಿ ಆರ್ಯರ ಪೂರ್ವಕಾಲದಲ್ಲಿ (ಇತಿಹಾಸ ಪೂರ್ವ) ಈಜಿಪ್ಟ್ ಮತ್ತು ಸುಮೇರಿಯನ್ನು ಸಮಕಾಲೀನತೆ ಹೊಂದಿದ್ದ ನಗರ ಸಂಸ್ಕೃತಿಯನ್ನು ಭಾರತ ಹೊಂದಿತ್ತು ಎನ್ನುವ ಅಂಶ ಬೆಳಕಿಗೆ ಬಂದಿದೆ. ಇಂತಹ ಸಂಸ್ಕೃತಿಯನ್ನೇ ಹರಪ್ಪಾ ಸಂಸ್ಕೃತಿ ಎಂದು ಕರೆದಿರುವರು. ಇದು ಐದು ಸಾವಿರ ವರ್ಷಗಳಷ್ಟು ಹಳೆಯ ಸಂಸ್ಕೃತಿಯಾಗಿದೆ. ಅದರ ಅಂದಿನ ಸಮಾಜ, ಅರ್ಥವ್ಯವಸ್ಥೆ, ನಗರಯೋಜನೆ, ಧಾರ್ಮಿಕ ಆಚರಣೆಗಳು, ಕಲೆ ಇತ್ಯಾದಿ ಲಕ್ಷಣಗಳು ಇದೊಂದು ವ್ಯವಸ್ಥಿತವಾದ ನಗರ ಸಂಸ್ಕೃತಿ ಎನ್ನುವುದನ್ನು ಸ್ಥಿರ ಮಾಡಿವೆ. ಇಂತಹ ಸಂಸ್ಕೃತಿಯ ಅಭ್ಯಾಸಕ್ಕೆ ನಮಗೆ ಲಿಖಿತ ದಾಖಲೆಗಳು ದೊರೆತಿಲ್ಲ. ಪುರಾತತ್ವ ಆಕರಗಳು ಹರಪ್ಪಾ ಸಂಸ್ಕೃತಿಯ ವಿವಿಧ ಮಜಲುಗಳ ಅಧ್ಯಯನಕ್ಕೆ ಮುಖ್ಯ ಮೂಲಾಧಾರಗಳಾಗಿವೆ.

## 36.2 ನಾಗರೀಕತೆಯ ವಿಸ್ತಾರ

ಭಾರತದ ಇತಿಹಾಸದಲ್ಲಿ 1922 ರ ಸಿಂಧೂ ಕಣಿವೆ ನಾಗರಿಕತೆಯ ಶೋಧವು ಅತ್ಯಂತ ಮಹತ್ವದ ಒಂದು ಸಂಗತಿಯಾಗಿದೆ. ಮೊದಲು ಅವಳಿ ಸ್ಥಳಗಳಾದ ಹರಪ್ಪ ಮತ್ತು ಮೊಹಂಜಾದಾರೋಗಳಲ್ಲಿ ನಂತರ ಉಳಿದ ಸ್ಥಳಗಳಲ್ಲಿ ನಡೆದ ಶೋಧನೆ ಐದು ಸಾವಿರ ವರ್ಷಗಳ ಹಿಂದೆಯೇ ಭಾರತದ ವಾಯುವ್ಯ ಪ್ರದೇಶದಲ್ಲಿ ಈಜಿಪ್ಟ್ ಮತ್ತು ಬೆಬಿಲೋನಿಯಾ ಸಮಕಾಲೀನ ಉನ್ನತ ನಾಗರಿಕತೆಯೊಂದು ಬೆಳೆದಿತ್ತೆಂದು ಮತ್ತು ಇದರ ವಿಸ್ತಾರ ಅಪಾರವಾಗಿತ್ತು ಎನ್ನುವ ಅಂಶ ಸಾಬೀತಾಗಿದೆ. ಈ ನಾಗರಿಕತೆಯನ್ನು ಇಂಡೊ ಸುಮೇರಿಯನ್ ಹರಪ್ಪ ಸಂಸ್ಕೃತಿ ಸಿಂಧೂ ಸಂಸ್ಕೃತಿ, ತಾಮ್ರಶಿಲಾಯುಗದ ಸ್ಕೃತಿ ಎನ್ನುವ ಹೆಸರುಗಳಿಂದ ಕರೆಯಲಾಗಿದೆ. ದ್ರಾವಿಡರು ಈ ಸಂಸ್ಕೃತಿಯ ನಿರ್ಮಾಪಕರೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಭಾರತೀಯ ಪುರಾತತ್ವ ಸರ್ವೇಕ್ಷಣ ಸಂಸ್ಥೆಯ ಆರ್.ಡಿ. ಬ್ಯಾನರ್ಜಿಯವರು ಮೊಹಂಜಾದಾರೋ ನಗರದ ಅವಶೇಷವನ್ನು ಗುರುತಿಸಿದರೆ ದಯಾರಾಮ್ ಸಹಾನಿಯವರು ಇಂದಿನ ಪಾಕಿಸ್ತಾನದ ಲಾಹೋರ ಪ್ರದೇಶದಿಂದ 180 ಕಿ.ಮೀ. ದೂರದ ಹರಪ್ಪ ನಗರದ ಅವಶೇಷದ ನೆಲೆಯನ್ನು ಗುರುತಿಸಿದರು. ಪುರಾತತ್ವ ನಿರ್ದೇಶನಾಲಯದ ಮಹಾನಿರ್ದೇಶಕರಾಗಿದ್ದ

ಸರ್ ಜಾನ್ ಮಾರ್ಷಲ್‌ರವರು 1924 ರಿಂದ 1931 ರವರೆಗೆ ಎರಡೂ ಸ್ಥಳಗಳಲ್ಲಿ ವ್ಯಾಪಕ ಉತ್ಖನನ ನಡೆಸಿ ಆರ್ಯರಿಗೆ ಪೂರ್ವದಲ್ಲಿದ್ದ ಪ್ರಾಚೀನ ನಾಗರಿಕತೆಯೊಂದೆ ವಿಶಿಷ್ಟ ಲಕ್ಷಣಗಳನ್ನು ಅನಾವರಣಗೊಳಿಸಿದರು. ಹರಪ್ಪ ಮತ್ತು ಮೊಹಂಜಾದಾರೋ ಪ್ರದೇದ ನಡುವಿನ ವಿಸ್ತೀರ್ಣ ೬೫೦ ಕಿ.ಮೀ ಆಗಿದೆ. ಈ ನಾಗರಿಕತೆಯ ವಿಸ್ತಾರ ಅಪಾರ. ಈ ನಾಗರೀಕತೆಗೆ ಸೇರಿದ ಸುಮಾರು ೧೫೦೦ ಸ್ಥಳಗಳು ಇಂದು ನಮ್ಮ ಗಮನಕ್ಕೆ ಬಂದಿವೆ. ಇವುಗಳಲ್ಲಿ ಸುಮಾರು ೧೦೦೦ ಸ್ಥಳಗಳು ಗುಜರಾತ್, ರಾಜಾಸ್ಥಾನ, ಉತ್ತರ ಪ್ರದೇಶ, ಪಂಜಾಬ್, ಕಾಥೇವಾಡ, ಬಲೂಚಿಸ್ತಾನ (ಸಾತ್‌ಕಾಕೌವ ಮತ್ತು ದಾಬರಕೋಟ್) ಸಿಂದ್ (ಕೊಟಡ್ಜ ಮತ್ತು ಆಲಿಮುರಿದ್) ಮತ್ತು ಹರಿಯಾಣಗಳಲ್ಲಿ ಕಂಡುಬಂದಿವೆ. ಉಳಿದ ೫೦೦ ಸ್ಥಳಗಳು ಇಂದಿನ ಪಾಕಿಸ್ಥಾನದಲ್ಲಿದೆ. ಈ ಎಲ್ಲ ಜಾಗಗಳ ಒಟ್ಟು ಭೂಪ್ರದೇಶದ ಸುಮಾರು ೨.೫ ಲಕ್ಷ ಚದರ ಮೈಲಿಗಳು. ಹಿಮಾಲಯ ತಪ್ಪಲಿನಿಂದ ನರ್ಮದಾತೀರದವರೆಗೂ ಈ ನಾಗರೀಕತೆ ಹರಡಿತ್ತೆಂದು ಇತ್ತೀಚಿನ ಶೋಧನೆಗಳಿಂದ ತಿಳಿದಿದೆ. ಸುಮಾರು ಮೂರು ಸಾವಿರದಷ್ಟು ಪ್ರಾಣಿಗಳ ಚಿತ್ರಗಳಿರುವ ಹಾಗೂ ಬರಹಗಳಿರುವ ಮುದ್ರೆಗಳು ಅಲ್ಲಿ ದೊರಕಿವೆ. ಭಾರತದಲ್ಲಿರುವ ಸಿಂಧೂ ನಾಗರಿಕತೆಗೆ ಸಂಬಂಧಿಸಿದ ಅವಶೇಷಗಳು ದೊರೆತಿರುವ ಇತರ ಸ್ಥಳಗಳೆಂದರೆ, ಕಾಲಿಬಂಗನ್, ರೂಪಾರ್, ಅಲಿಗಿರ್‌ಪುರ್, ದೇಸಾಲ್‌ಪುರ್, ಲೋಥಲ್, ಭಗತ್ರಾಲ್, ನಾಗಾಲಾಂಡ್, ಬನಲಾಲಿ. ಕುನಾಲಿ, ಚಾಂದುದಾರೊ, ನಾಹಲ್, ಗುಜರಾತಿನ ಕಚ್ ಪ್ರಾಂತ್ಯದಲ್ಲಿ ಇತ್ತೀಚೆಗೆ ದೊರೆತ ನೆಲೆಯೆಂದರೆ ದೊಲ್‌ವಿರಾ. ಲೋಥಲ್ ಪ್ರದೇಶದ ಸಂಸ್ಕೃತಿ ಸುಮಾರು ೪೫೦ ಚದರ ಮೈಲಿಗಳು ಹರಡಿದೆ, ಇಲ್ಲಿನ ನಗರ ಯೋಜನೆ, ರಸ್ತೆ ಮತ್ತು ಮನೆಗಳ ವಿನ್ಯಾಸ ಅದ್ಭುತವಾಗಿವೆ.

ಸಿಂಧಿ ಭಾಷೆಯಲ್ಲಿ ಮೊಹಂಜಾದಾರೋ ಎಂದರೆ ಶವಗಳ ಗುಡ್ಡವೆಂದು ಅರ್ಥ. ಇಲ್ಲಿ ನಡೆದ ಉತ್ಖನನಗಳ ಬಹುಮುಖ್ಯ ಲಕ್ಷಣವೆಂದರೆ ಸಿಂಧೂ ನದಿಯ ಉದ್ದಕ್ಕೂ ಹರಪ್ಪದಿಂದ ಮೊಹಂಜಾದಾರೋ ನಗರದವರೆಗೆ ಹರಡಿಕೊಂಡಿರುವ ಎಲ್ಲ ನಗರಗಳ ಸಾಂಸ್ಕೃತಿಕ ಸಾವಯವ ಸಂಬಂಧವಾಗಿದೆ.

### *36.2.1 ಸಿಂಧೂ ನಾಗರಿಕತೆಯ ಕಾಲ*

ಲಿಖಿತ ದಾಖಲೆಗಳಾವುವು ದೊರೆಯದಿರುವುದರಿಂದ ಹರಪ್ಪ ಸಂಸ್ಕೃತಿಯ ಕಾಲವನ್ನು ಪುರಾತತ್ವ ಅವಶೇಷಗಳ ಆಧಾರದ ಮೇಲೆ ಲೆಕ್ಕ ಹಾಕಬೇಕಾಗುತ್ತದೆ. ಸಿಂಧೂ ನಾಗರಿತೆಗೆ ಸೇರಿದ ಅನೇಕ ಮುದ್ರೆಗಳು ನಮಗೆ ದೊರಕಿವೆ. ಸುಮೇರಿಯನ್ ಮತ್ತು ಬೆಬಿಲೋನಿಯನ್ ಐತಿಹ್ಯಕ್ಕೆ ಸಂಬಂಧಿಸಿದ ಜಾಡಿಯೊಂದು ಅಲ್ಲಿ ದೊರಕಿದೆ. ಇದರಿಂದ ಹರಪ್ಪ ಸಂಸ್ಕೃತಿಯು ಮೆಸಪೋಟೋಮಿಯಾ ಮತ್ತು ಬೆಬಿಲೋನಿಯಾ ಸಂಸ್ಕೃತಿಗಳಿಗೆ ಸಮಕಾಲೀನವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಸುಮೇರಿಯನ್ ಮತ್ತು ಸಿಂಧೂ ನಾಗರಿಕತೆಗಳ ನಡುವಿನ ಸಾಮಾನ್ಯ ಲಕ್ಷಣಗಳನ್ನು ಗುರುತಿಸಿದ ಸರ್ ಜಾನ್ ಮಾರ್ಷಲ್‌ರವರು ಸಿಂಧೂ ಸಂಸ್ಕೃತಿಯ ಕಾಲವನ್ನು ಕ್ರಿ.ಪೂ. ೩.೨೫೦ ರಿಂದ ೨೭೫೦ ಎಂದು ಅಂದಾಜು ಮಾಡಿದ್ದಾರೆ. ಇತರೆ ವಿದ್ವಾಂಸರು ಅಲ್ಲಿ ದೊರೆತ ಪಿಂಗಾಣಿ ವಸ್ತುಗಳ ಆಧಾರದ ಮೇಲೆ ಹರಪ್ಪ ಸಂಸ್ಕತಿಯ ಕಾಲವನ್ನು ಕ್ರಿ.ಪೂ. ೩೦೦೦ ವೆಂದು ಹೇಳುತ್ತಾರೆ. ಇತ್ತೀಚೆಗೆ ಮಾರ್ಟಿಮರ್ ವೀಲರ್ ಅದರ ಕಾಲವನ್ನು ಕ್ರಿ.ಪೂ. ೨೫೦೦-೧೫೦೦ ರ ನಡುವೆ ನಿಗದಿ ಪಡಿಸಿದ್ದಾರೆ. ಧರ್ಮಪಾಲ ಅಗರವಾಲರು ಕಾರ್ಬನ್ -೧೪ ಪರೀಕ್ಷೆ ಆಧಾರದ ಮೇಲೆ ಹರಪ್ಪ ಸಂಸ್ಕೃತಿಯ ಕಾಲವನ್ನು ಕ್ರಿ.ಪೂ. ೨೩೦೦-೧೭೫೦ ಎಂದು ನಿರ್ಧರಿಸಿದ್ದಾರೆ.

### 36.2.2 *ಜನರ ಜನಾಂಗೀಯ ಹಿನ್ನೆಲೆ*

ಸಿಂಧೂ ನಾಗರಿಕತೆಯ ಜನರು ಯಾವ ಜನಾಂಗಕ್ಕೆ ಸೇರಿದ್ದರೆಂದು ಹೇಳುವುದು ಕಷ್ಟ. ಅಲ್ಲಿ ದೊರೆತ ಮನುಷ್ಯರ ಅಸ್ಥಿಪಂಜರ ಹಾಗೂ ತಲೆಬುರುಡೆಯ ಆಧಾರದ ಮೇಲೆ ಅಲ್ಲಿನ ಜನರ ಸುಮಾರು ನಾಲ್ಕು ಜನಾಂಗಗಳಿಗೆ ಸೇರಿದ್ದರೆಂದು ನಿರ್ಧರಿಸಲು ಸಾಧ್ಯವಾಗಿದೆ. ಆ ಜನಾಂಗಗಳಾವುವೆಂದರೆ ದ್ರಾವಿಡರು, ಆಸ್ಟ್ರೋಲಾಯ್ಡ್‌ರು, ಆಲ್‌ಪೈನರು ಮತ್ತು ಮಂಗೋಲಾಯ್ಡ್. ಅವರಲ್ಲಿ ಬಹುಸಂಖ್ಯಾತರು ಇಂಡೋ ಆರ್ಯನ್ ಗುಂಪಿಗೆ ಅಥವಾ ದ್ರಾವಿಡ ಜನಾಂಗಕ್ಕೆ ಸೇರಿದ್ದಿರಬಹುದೆಂದು ಹೇಳಬಹುದು. ಕೆಲವು ವಿದ್ವಾಂಸರು ಸಿಂಧೂ ನಾಗರಿಕತೆಯ ಜನರು ಸುಮೇರಿಯನ್ ಅಥವಾ ಕ್ರೀಟಿಯನ್ ಗುಂಪಿಗೆ ಸೇರಿದವರೆಂದು ತಿಳಿಸಿದ್ದಾರೆ. ಆದರೆ ಇಂತಹ ವಾದಗಳಿಗೆ ಇಂದು ಮಹತ್ವ ಉಳಿದಿಲ್ಲ. ಅಲ್ಲಿ ದೊರೆತ ಅಸ್ಥಿಪಂಜರಗಳ ಆಧಾರದ ಮೇಲೆ ಅಲ್ಲಿನ ಜನರಲ್ಲಿ ಪುರುಷನ ಎತ್ತರ ಐದು ಅಡಿ ಮತ್ತು ನಾಲ್ಕೂವರೆ ಇಂಚು ಮತ್ತು ಮಹಿಳೆಯ ಎತ್ತರ ನಾಲ್ಕು ಅಡಿ ಮತ್ತು ನಾಲ್ಕೂವರೆ ಇಂಚು ಎಂಬುದು ತಿಳಿದುಬಂದಿದೆ. ಈ ಜನರು ದ್ರಾವಿಡ ಜನಾಂಗಕ್ಕೆ ಸೇರಿದ್ದವರಾಗಿರಬಹುದೆಂದು ಕೆಲವು ವಿದ್ವಾಂಸರು ವಾದಿಸುತ್ತಾರೆ. ಡಾ. ಹೆಚ್.ಡಿ. ಸಂಕಾಲಿಯ ಹೇಳುವ ಹಾಗೆ, ಈ ಜನರು ಒಂದಕ್ಕಿಂತ ಅಧಿಕ ಜನಾಂಗಕ್ಕೆ ಸೇರಿದ್ದವರೆಂದು ತಿಳಿದು ಬರುತ್ತದೆ.

## 36.3 ಸಾಮಾಜಿಕ ಜೀವನ

### 36.3.1 *ಸಾಮಾಜಿಕ ವರ್ಗಗಳು*

ಮೊಹೆಂಜೊದಾರೋ ಮತ್ತು ಹರಪ್ಪಾ ಪ್ರದೇಶದ ಅವಶೇಷಗಳ ಆಧಾರದ ಮೇಲೆ ಅಲ್ಲಿನ ಸಮಾಜದ ಸ್ವರೂಪ ಮತ್ತು ಸಾಮಾಜಿಕ ಜೀವನವನ್ನು ತಿಳಿಯುತ್ತೇವೆ. ಮಾತ್ರ ಸಮಾಜವನ್ನು ಅಪ್ರತ್ಯಕ್ಷವಾಗಿ ಕಾಣುವ ಈ ಸಮಾಜವು ಪುರೋಹಿತರು, ವರ್ತಕರು, ಕೃಷಿಕರು ಮತ್ತು ಕುಶಲ ಕಸುಬುಗಾರರು ಹಾಗೂ ಕಾರ್ಮಿಕರು ಎಂಬ ನಾಲ್ಕು ಸಾಮಾಜಿಕ ವರ್ಗಗಳನ್ನು ಹೊಂದಿತ್ತು. ಪುರೋಹಿತರು ಸಮಾಜದಲ್ಲಿ ಗೌರವ ಸ್ಥಾನ ಹೊಂದಿ, ಪ್ರಭಾವಶಾಲಿಗಳಾಗಿದ್ದರು.

### 36.3.2 *ಉಡುಪು ಮತ್ತು ಆಭರಣಗಳು*

ಪುರುಷರು ಮತ್ತು ಸ್ತ್ರೀಯರು ಮೇಲುಡಿಗೆ ಮತ್ತು ಕೆಳಬಟ್ಟೆಗಳನ್ನು ಧರಿಸುತ್ತಿದ್ದರು. ಹತ್ತಿಯ ಮತ್ತು ಉಣ್ಣೆಯ ಬಟ್ಟೆಗಳನ್ನು ತಯಾರಿಸುತ್ತಿದ್ದರು.

ಸ್ತ್ರೀಯರೂ, ಪುರುಷರೂ ಆಭರಣಪ್ರಿಯರಾಗಿದ್ದರು. ಕಡಗ, ಬೆರಳು ಉಂಗುರು, ಕೊರಳಹಾರ, ಕಾಲ್ಗಡಗ, ಒಡ್ಯಾಣ ಇಲ್ಲವೆ ಉಡಿದಾರಗಳನ್ನು ಸಾಮಾನ್ಯವಾಗಿ ಎಲ್ಲ ವರ್ಗಗಳ ಸ್ತ್ರೀ ಪುರುಷರು ಧರಿಸುತ್ತಿದ್ದರು. ಇವುಗಳಲ್ಲದೆ ಸ್ತ್ರೀಯರು ಕರಿಮಣಿಸರ, ಬಳೆ, ಕಿವಿಯುಂಗುರು, ಮೂಗುತಿ, ಬೀಸಣಿಕೆಯಾಕಾರದ ಶಿರಭೂಷಣ, ತಲೆಗಟ್ಟುಗಳನ್ನು ಧರಿಸುತ್ತಿದ್ದರು. ಶ್ರೀಮಂತರು ಬಂಗಾರ, ಬೆಳ್ಳಿ, ಹಸ್ತಿದಂತ, ದಂತ, ಮಣಿ ಮುಂತಾದವುಗಳಿಂದ ತಯಾರಿಸಲಾದ ಆಭರಣಗಳನ್ನು ಹೊಂದಿದ್ದರೆ, ಬಡವರು ತಾಮ್ರ, ಕಂಚು, ಎಲುಬು, ಸಿಂಪು, ಮಣಿಗಳಿಂದ ತಯಾರಿಸಲ್ಪಟ್ಟ ಆಭರಣಗಳನ್ನು ಧರಿಸುತ್ತಿದ್ದರು.

ಶೃಂಗಾರಪ್ರಿಯರಾಗಿದ್ದ ಸಿಂಧೂ ನಾಗರಿಕತೆ ಸ್ತ್ರೀಯರು ಸೌಂದರ್ಯವರ್ಧಕ ಸಾಮಾಗ್ರಿಗಳನ್ನು ಬಳಸುವಲ್ಲಿ ಆಧುನಿಕ ಮಹಿಳೆಯರಿಗಿಂತ ಹಿಂದೆ ಬಿದ್ದಿರಲಿಲ್ಲ. ಜನರು ಕಣ್ಣಿಗೆ ಕಾಡಿಗೆ, ತುಟಿಗೆ ಕೆಂಪು ಬಣ್ಣ, ಮುಖವರ್ಣಗಳು ಮತ್ತು ತಲೆಕೂದಲಿಗೆ ಪರಿಮಳದ ತೈಲಗಳನ್ನು ಉಪಯೋಗಿಸುತ್ತಿದ್ದರು. ಅನೇಕ ರೀತಿಯ ಕೇಶಾಲಂಕಾರಗಳಲ್ಲಿ ಪರಿಣಿತರಾಗಿದ್ದರು. ಕಂಚಿನ ಕನ್ನಡಿಗಳನ್ನು ಮತ್ತು ಹಸ್ತಿದಂತದ ಬಾಚಣಿಕೆಗಳನ್ನು ಉಪಯೋಗಿಸುತ್ತಿದ್ದರು.

ಕೆಲವು ಪುರುಷರು ಸಂಪೂರ್ಣ ಮುಂಡನ, ಕೆಲವರು ಅರ್ಧಮುಂಡನ ಮಾಡಿಸಿಕೊಳ್ಳುತ್ತಿದ್ದರು. ಕೆಲವರು ತಲೆಗೂದಲನ್ನು ಮತ್ತು ಗಡ್ಡವನ್ನು ಬೆಳೆಸಿ, ಮೀಸೆಯನ್ನು ಮಾತ್ರ ಬೋಳಿಸಿಕೊಳ್ಳುತ್ತಿದ್ದರು. ಕೆಲವು ಪುರುಷರು ಬೈತಲೆ ತೆಗೆದು ಕೂದಲನ್ನು ಹಿಂದುಗಡೆ ಗಂಟುಹಾಕಿ ಪಟ್ಟಿಯಿಂದ ಕಟ್ಟುತ್ತಿದ್ದರು.

### 36.3.3 *ಆಹಾರ ಮತ್ತು ಸಾಕುಪ್ರಾಣಿಗಳು*

ಗೋಧಿ, ಅಕ್ಕಿ, ಬಾರ್ಲಿ, ಜವೆಗೋಧಿ, ಹಾಲು, ಹೈನದ ಪದಾರ್ಥಗಳು, ಹಣ್ಣುಗಳು, ತರಕಾರಿ, ಖರ್ಜೂರ, ಮಾಂಸ, ಮೀನು, ಕೋಳಿ, ಗೋಮಾಂಸ, ಹಂದಿಮಾಂಸ, ಮೊಟ್ಟೆಗಳು, ಇವರ ಆಹಾರ ಪದಾರ್ಥಗಳಾಗಿದ್ದವು. ಅವರು ಎಮ್ಮೆ, ಕುರಿ, ಎತ್ತು, ಗೂಳಿ, ಆನೆ, ಹಂದಿ, ಒಂಟೆ, ನಾಯಿ, ಆಡು, ಮೇಕೆ, ಕತ್ತೆ, ಕೋಳಿ ಮುಂತಾದ ಪ್ರಾಣಿಗಳನ್ನು ಸಾಕುತ್ತಿದ್ದರು. ಹುಲಿ, ಕರಡಿ, ಕಾಡೆಮ್ಮೆ, ಕೋತಿ, ಕಾಡುಹಂದಿ, ಹಾವು, ಮೊಸಳೆ, ಖಡ್ಗಮೃಗ ಮುಂತಾದ ಮೃಗಗಳ ಪರಿಚಯವಿತ್ತು. ಆದರೆ ಕುದುರೆಯ ಉಪಯೋಗ ಅವರಿಗೆ ಹೆಚ್ಚು ತಿಳಿದಿರಲಿಲ್ಲವೆಂದು ತೋರುತ್ತದೆ.

### 36.3.4 *ಮನೆ ಬಳಕೆಯ ವಸ್ತುಗಳು*

ಸಿಂಧೂ ನಾಗರಿಕತೆಯ ಜನರು ಆ ಕಾಲದ ಇತರ ನಾಗರಿಕತೆಗಳ ಜನರು ಹೊಂದದಿದ್ದ ಸುಧಾರಿತ ಜೀವನದ ಸುಖ-ಸೌಕರ್ಯಗಳನ್ನು ಪಡೆದಿದ್ದರು. ಸಿರಿವಂತರು ಮನೆಗಳಲ್ಲಿ ಕುರ್ಚಿ, ಸುಖಾಸನ, ಕಾಲ್ಮಣೆ, ಮಂಚ, ಮೇಜು, ಮುಂತಾದ ಪೀಠೋಪಕರಣಗಳಿದ್ದವು. ಶೃಂಗಾರ ಸಾಧನಗಳನ್ನು ಇಡಲು, ಹಸ್ತಿದಂತದ, ಮಣ್ಣಿನ ಹಾಗೂ ಶಿಲೆಯ ಜಾಡಿಗಳಿದ್ದವು. ಗಂಡಸರು ವಿವಿಧ ತರಹದ ಕ್ಷೌರದ ಕತ್ತಿಗಳನ್ನು ಬಳಸುತ್ತಿದ್ದರು. ಕಂಚಿನ ತಗಡಿಗೆ ಮೆರಗು ಕೊಟ್ಟು ಕಂಚಿನ ಕನ್ನಡಿಗಳನ್ನು ತಯಾರಿಸುತ್ತಿದ್ದರು. ಮನೆ ಬಳಕೆಯ ನಾನಾ ವಸ್ತುಗಳನ್ನು ಕಲ್ಲು, ಕಂಚು, ತಾಮ್ರ, ಮಣ್ಣು, ಹಸ್ತಿದಂತಗಳಿಂದ ತಯಾರಿಸಲಾಗುತ್ತಿತ್ತು. ಒರಳುಕಲ್ಲು, ಮೀನಿನಗಾಳ, ಸೂಜಿ, ದಬ್ಬಣ, ಚಾಕು, ಕತ್ತರಿ ಮುಂತಾದವುಗಳ ನಿತ್ಯ ಬಳಕೆಯ ವಸ್ತುಗಳಾಗಿದ್ದವು. ಹರಪ್ಪಾ ಜನರಿಗೆ ಕಬ್ಬಿಣದ ಉಪಯೋಗ ಗೊತ್ತಿರಲಿಲ್ಲ.

### 36.3.5 *ಮನೋರಂಜನೆ, ಶೌಚಾಲಯ ಮತ್ತು ಸುಗಂಧ ದ್ರವ್ಯಗಳು, ಔಷಧಿಗಳು*

ಕ್ರೀಡಾ ಕೂಟಗಳೂ ಜನರಿಗೆ ಗೊತ್ತಿದ್ದವು ಮತ್ತು ಅವುಗಳನ್ನು ಇಷ್ಟಪಡುತ್ತಿದ್ದರು. ನೃತ್ಯ, ಸಂಗೀತ, ಪಗಡೆ, ಬೇಟೆ, ಬಂಡಿಕೂಟ, ಹೋರಿಗಳ ಗುದ್ದಾಟ, ಜೂಜಾಟ, ಜೇಡಿಮಣ್ಣಿನಿಂದ ತಯಾರಿಸಿದ ಆಟಿಕೆ ಸಾಮಾನುಗಳು ಮುಂತಾದವುಗಳು ಅಲ್ಲಿನ ಜನರ ಮನರಂಜನೆಯ ಮುಖ್ಯ ಸಾಧನಗಳಾಗಿದ್ದವು. ಲೋಹ, ಕಟ್ಟಿಗೆ ಮತ್ತು ಜೇಡಿಮಣ್ಣಿನಿಂದ ತಯಾರಿಸಿದ ಬೊಂಬೆಗಳು ಮಕ್ಕಳ ಆಟದ ವಸ್ತುಗಳಾಗಿದ್ದವು. ಚಾನ್ಹುದಾರೊ ನಗರವು ಆಟದ ವಸ್ತುಗಳ ಮತ್ತು ಮಣಿಗಳನ್ನು ತಯಾರಿಸುವ ಕೇಂದ್ರವಾಗಿತ್ತು. ನೃತ್ಯ ಮಾಡುತ್ತಿರುವ ಬಾಲಿಕೆಯ ಚಿತ್ರ ಮತ್ತು ಭೂ ಉತ್ಖನನದಲ್ಲಿ ದೊರೆತಿರುವ ತಬಲ ಮತ್ತು ಡೊಳ್ಳು ಸಾಮಗ್ರಿಗಳು ಸಿಂಧುಕೊಳ್ಳ ಜನರ ನೃತ್ಯ ಮತ್ತು ಸಂಗೀತ ಅಭಿರುಚಿಗೆ ಪುರಾವೆಗಳಿವೆ. ಜನರಿಗೆ ಶೌಚಾಲಯ ಹಾಗೂ ಸುಗಂಧ ದ್ರವ್ಯಗಳ ಬಳಕೆ ಗೊತ್ತಿತ್ತು. ಶೌಚಾಲಯದ ಪಾತ್ರೆಯನ್ನು ದಂತ, ಲೋಹ, ಮಣ್ಣು ಮತ್ತು ಕಲ್ಲುಗಳಲ್ಲಿ ಮಾಡುತ್ತಿದ್ದರು. ಶೌಚಾಲಯ ಸಂಸ್ಕೃತಿಯನ್ನು ಮಹಿಳೆಯರೂ ಮೈಗೂಡಿಸಿಕೊಂಡಿದ್ದರು. ಮಹಿಳೆಯರು ಸಮಾಜದಲ್ಲಿ ಗೌರವ ಸ್ಥಾನ ಹೊಂದಿದ್ದಳು. ಹರಪ್ಪ ಸಂಸ್ಕೃತಿಯಲ್ಲಿ ಜನರಿಗೆ ಔಷದೋಪಚಾರ ತಿಳಿದಿತ್ತು. ಬೇವಿನ ಎಲೆಗಳನ್ನು ಗಿಡಮೂಲಿಕೆಗಳನ್ನು ಮತ್ತು ಶಿಲಾಜಿತ್ ಬೇರುಗಳನ್ನು ಔಷಧಿ ತಯಾರಿಸಲು ಉಪಯೋಗಿಸುತ್ತಿದ್ದರು.

### 36.3.6 *ಕಲೆ, ಮುದ್ರೆಗಳು ಮತ್ತು ಲಿಪಿ*

ಅಲಂಕಾರ ಸಹಿತವಾದ ಬಣ್ಣದ ಮಣ್ಣಿನ ಪಾತ್ರೆಗಳು, ಸುಣ್ಣದ ಕಲ್ಲಿನಲ್ಲಿ ತಯಾರಿಸಲ್ಪಟ್ಟ ಪುರುಷರ ಪ್ರತಿಮೆಗಳು, ಮಣ್ಣಿನಿಂದ ನಿರ್ಮಿಸಲಾದ ಸ್ತ್ರೀ ಮೂರ್ತಿಗಳು ಪ್ರಾಣಿಗಳ ಬೊಂಬೆಗಳು, ಮನುಷ್ಯರ ಹಾಗೂ ಪ್ರಾಣಿಗಳ ಸುಂದರ ಚಿತ್ರಗಳನ್ನು ಒಳಗೊಂಡಿರುವ ಮುದ್ರೆಗಳು, ಮನೋಮೋಹಕವಾದ ಆಭರಣಗಳು, ಕಡಗಗಳು, ಕೊರಳಹಾರಗಳು, ಒಡ್ಯಾಣಗಳು, ಚಿನ್ನದ ಆಭರಣಗಳು, ಸಿಂಧೂ ಜನರ ಕಲಾ ಕೌಶಲ್ಯಕ್ಕೆ ಸಾಕ್ಷಿಯಾಗಿವೆ. ಕಲ್ಲು, ಮಣ್ಣು ಮತ್ತು ಕಂಚಿನಿಂದ ತಯಾರಿಸಲ್ಪಟ್ಟ ವಿಗ್ರಹಗಳು ಕಲಾಪೂರ್ಣಯಾಗಿವೆ. ಅವುಗಳ ಅಂಗಾಂಗಗಳ ಪ್ರಮಾಣ ಬದ್ಧತೆ ಸಮರ್ಪಕವಾಗಿದೆ. ಹರಪ್ಪದಲ್ಲಿ ದೊರೆತಿರುವ ನರ್ತಕಿಯ ಕಂಚಿನ ಪ್ರತಿಮೆ ಅಪೂರ್ವವಾಗಿದೆ. ತೋಳಿನವರೆಗೆ ಕಡಗಗಳನ್ನು ಧರಿಸಿರುವ ನರ್ತಕಿಯು ತನ್ನ ನಿತಂಬದ ಮೇಲೆ ಕೈಯಿರಿಸಿದ್ದು, ಬಲಗಾಲಿನ ಮೇಲೆ ನಿಂತುಕೊಂಡಿದ್ದು, ತನ್ನ ಎಡಗಾಲನ್ನು ಮುಂಬದಿಯಲ್ಲಿ ಮೇಲೆತ್ತಿರುವ ನೋಟ ಮನಮೋಹಕವಾಗಿದೆ. ವೈವಿಧ್ಯಮಯವಾದ ಮಕ್ಕಳ ಆಟದ ವಸ್ತುಗಳ ಕಲಾತ್ಮಕವಾಗಿವೆ. ಬಣ್ಣದ ಲೇಪಿತ ಮಡಿಕೆಗಳು ಮತ್ತು ನಾಣ್ಯಗಳು, ಸಾರ್ವಜನಿಕ ಕಟ್ಟಡಗಳ ಮೇಲೆ ಕಾಣುವ ಚಿತ್ರಗಳು ಅವರ ಚಿತ್ರಕಲೆಯ ಅಭಿರುಚಿಯನ್ನು ತೋರಿಸುತ್ತವೆ.

*ಮುದ್ರೆಗಳು*

ಸಿಂಧೂ ನಾಗರಿಕತೆಗೆ ಸೇರಿದ ನಗರ ಪ್ರದೇಶಗಳಲ್ಲಿ ೨೦೦೦ ಕ್ಕೂ ಮಿಕ್ಕಿ ಮುದ್ರೆಗಳನ್ನು ಸಂಗ್ರಹಿಸಲಾಗಿದೆ. ಅವುಗಳನ್ನು ಜೇಡಿಮಣ್ಣಿನಿಂದ ಮಾಡಲಾಗಿದೆ. ಅವುಗಳ ಗಾತ್ರವು ಅರ್ಧಿಂಚಿನಿಂದ ಎರಡೂವರೆ ಇಂಚಿನವರೆಗಿವೆ. ಅವುಗಳ ಆಕಾರವು ಚೌಕಾಕಾರವೂ ಮತ್ತು ಆಯಾತಕಾರದಿಂದ ಕೂಡಿದ್ದವು. ಅವುಗಳ ಮೇಲೆ ಪ್ರಾಣಿಗಳ ಮತ್ತು ಪಕ್ಷಿಗಳ ರೂಪವನ್ನು ಕೆತ್ತಲಾಗಿತ್ತು. ದೊರೆತಿರುವ ಮುದ್ರೆಗಳಲ್ಲಿ ತುಂಬಾ ಕಲಾತ್ಮಕವಾದುದೆಂದರೆ ಆನೆ, ಹುಲಿ, ಎಮ್ಮೆ, ಕೋಣ, ನೀರಾನೆ, ಹೋರಿ, ಜಿಂಕೆ, ಬ್ರಹ್ಮಿಬಸವ ಮುಂತಾದ ಪ್ರಾಣಿಗಳಿಂದ ಸುತ್ತುವರಿದ ಮೂರು ಮುಖಗಳ ನಗ್ನ ಯೋಗಿಯ ಚಿತ್ರವಿರುವ ಮುದ್ರೆ ಈತನ ಸುತ್ತಲೂ ಪ್ರಾಣಿಗಳಿವೆ. ಇದು ಶಿವನ (ಪಶುಪತಿ) ಚಿತ್ರವೆಂದು ವಿಶ್ಲೇಷಿಸಲಾಗಿದೆ. ಕೆಲವು ಮುದ್ರೆಗಳ ಮೇಲುಭಾಗದಲ್ಲಿ ಚಿತ್ರದ ರೂಪದಲ್ಲಿರುವ ಲಿಪಿಗಳಿರುವಂತೆ ಕಾಣುತ್ತದೆ. ಈ ಮುದ್ರೆಗಳಲ್ಲಿ ಬಿಡಿಸಿರುವ ಪ್ರಾಣಿಗಳು ದಷ್ಟಪುಷ್ಟವಾಗಿ ವಿರೋಚಿತವಾಗಿ, ಗಂಭೀರಭಾವದಲ್ಲಿ ಹಾಗೂ ಉಗ್ರರೂಪದಲ್ಲಿ ಮೂಡಿ ಬಂದಿವೆ. ಜೀವಂತವಾಗಿರುವ ಭಾವನೆ ಬರುತ್ತದೆ. ಈ ಮುದ್ರೆಗಳ ಉದ್ದೇಶವು ತಿಳಿದು ಬಂದಿಲ್ಲ. ಮುದ್ರೆಗಳನ್ನು ತಾಯತಗಳಂತೆ ಬಳಸುತ್ತಿದ್ದರೆಂದು ಕಲಾ ವಿದ್ವಾಂಸರಾದ ಸರಕುಗಳ ಮೂಟೆಗಳ ಮೇಲೆ ಮತ್ತು ಮಣ್ಣಿನ ಬಿಲ್ಲೆಗಳ ಮೇಲೆ ಮುದ್ರೆಯೊತ್ತಲು ಮುದ್ರೆಗಳನ್ನು ಉಪಯೋಗಿಸುತ್ತಿದ್ದರೆಂದು ಕೆಲವು ವಿದ್ವಾಂಸರ ವಾದವಾಗಿದೆ.

*ಚಿತ್ರಲಿಪಿ*

ಸಿಂಧೂ ನಾಗರಿಕತೆಯ ಜನರು ತಮ್ಮದೇ ಆದ ಲಿಪಿಯೊಂದನ್ನು ರೂಪಿಸಿಕೊಂಡಿದ್ದರು. ಅವರ ಲಿಪಿಯನ್ನು ಚಿತ್ರಸಂಕೇತ ಭಾಷೆಯೆಂದು ಕರೆಯಬಹುದು. ಇಲ್ಲಿಯವರೆವಿಗೂ ಅದನ್ನು ಓದಲು ಸಾಧ್ಯವಾಗಿಲ್ಲ. ಈ ಕಾರಣದಿಂದಾಗಿಯೆ ಅದನ್ನು ಚಿತ್ರಸಂಕೇತ ಭಾಷೆಯೆಂದು ಕರೆದಿರಬಹುದು. ಮುದ್ರೆಗಳ ಮೇಲೆ ಸುಮಾರು ೪೦೦ಕ್ಕೂ ಮಿಕ್ಕ ವಿಶಿಷ್ಟ ಚಿಹ್ನೆಗಳನ್ನು ಇಲ್ಲಿಯವರೆಗೆ ಗುರುತಿಸಲಾಗಿದೆ. ಪ್ರತಿಯೊಂದು ಚಿಹ್ನೆಯೂ ಒಂದು ನುಡಿಯನ್ನೊ, ಒಂದು ವಿಷಯವನ್ನೊ ಅಥವಾ ಒಂದು ವಿಚಾರವನ್ನೊ ಸಂಕೇತಿಸುತ್ತಿರಬಹುದು. ಆಧುನಿಕ ಉರ್ದು ಭಾಷೆಯಲ್ಲಿ ರೂಢಿಯಲ್ಲಿರುವಂತೆ ಅವರು ಬಲದಿಂದ ಎಡಕ್ಕೆ ಬರೆಯುತ್ತಿದ್ದಿರಬೇಕು. ಸರ್‌ಜಾನ್ ಮಾರ್ಷಲ್

ಮತ್ತು ಡಾ. ಬಿ.ಬಿ. ಲಾಲ್ ಅವರುಗಳ ಪ್ರಕಾರ ಸಿಂಧೂ ನಾಗರಿಕತೆಯ ಲಿಪಿ ಮತ್ತು ಭಾಷೆಗಳು ದ್ರಾವಿಡ ಮತ್ತು ಆರ್ಯರಿಗಿಂತ ಪೂರ್ವ ಕಾಲಕ್ಕೆ ಸೇರಿವೆ.

### 36.3.7 *ಯುದ್ಧದಲ್ಲಿ ಬಳಸುತ್ತಿದ್ದ ಶಸ್ತ್ರಾಸ್ತ್ರಗಳು*

ಯುದ್ಧಗಳಲ್ಲಿ ಕೊಡಲಿ, ಈಟಿ, ಚಾಕು, ಬಾಣ ಮತ್ತು ಕತ್ತಿಗಳನ್ನು ಬಳಸುತ್ತಿದ್ದರು. ಶಸ್ತ್ರಾಸ್ತ್ರಗಳನ್ನು ತಾಮ್ರ ಮತ್ತು ಕಂಚಿನಿಂದ ತಯಾರಿಸುತ್ತಿದ್ದರು. ಅವರು ಬಳಸುತ್ತಿದ್ದ ಶಸ್ತ್ರಾಸ್ತ್ರಗಳು ರಕ್ಷಣಾತ್ಮಕವಾಗಿದ್ದವೇ ವಿನಾ ಆಕ್ರಮಣಕಾರಿಯಾಗಿರಲಿಲ್ಲ.

## 36.4 ಧರ್ಮ

ಸಿಂಧೂ ನಾಗರಿಕತೆಯ ಜನರು ಆಚರಿಸುತ್ತಿದ್ದ ಧಾರ್ಮಿಕ ಆಚರಣೆಗಳ ಬಗ್ಗೆ ನಮಗೆ ಯಾವುದೇ ಸೂಚನೆಗಳು ದೊರೆತಿಲ್ಲ. ಮಣ್ಣಿನಿಂದ ಮಾಡಿದ ಮಹಿಳೆಯರ ವಿಗ್ರಹಗಳು ಅಪಾರ ಸಂಖ್ಯೆಯಲ್ಲಿ ದೊರೆತಿವೆ. ಅವುಗಳನ್ನು ಮಾತೃದೇವತೆಯ ಆರಾಧನೆ ಬಗ್ಗೆ ಸೂಚನೆ ನೀಡುತ್ತವೆ ಎಂದು ಹೇಳಲಾಗಿದೆ. ಒಂದೇ ಒಂದು ಮುದ್ರೆಯಲ್ಲಿ ಪುರುಷ ದೇವತೆಯ ಚಿತ್ರವಿದೆ. ಅದರಲ್ಲಿ ಮೂರು ಕೊಂಬುಗಳು ಮತ್ತು ಆನೆ, ಹುಲಿ, ನೀರಾನೆ, ಎಮ್ಮೆ ಮತ್ತು ಜಿಂಕೆಗಳ ಚಿತ್ರಗಳನ್ನು ಸುತ್ತಲೂ ಕೆತ್ತಲಾಗಿದೆ. ಇದು ಪ್ರಾಚೀನಕಾಲದಲ್ಲಿದ್ದ ಪಶುಪತಿ ಮಹಾದೇವನ ಆರಾಧನೆ ಬಗ್ಗೆ ಸೂಚನೆ ನೀಡುತ್ತಿದೆ ಎಂದು ಹೇಳಲಾಗಿದೆ. ಲಿಂಗ ಮತ್ತು ಮರಗಳ ಆರಾಧನೆ ಅಲ್ಲಿ ವ್ಯಾಪಕವಾಗಿತ್ತು. ಒಂದು ಮುದ್ರೆಯ ಮೇಲೆ ಒಂದು ದೇವತೆಯ ಚಿತ್ರ ಹಾಗೂ ಆಲದ ಮರಗಳನ್ನು ಚಿತ್ರಿಸಲಾಗಿದೆ. ಪ್ರಾಣಿಗಳ ಆರಾಧನೆ ಅಲ್ಲಿ ವ್ಯಾಪಕವಾಗಿದೆ. ಅನೇಕ ಮುದ್ರೆಗಳ ಮೇಲೆ ಪ್ರಾಣಿಗಳ ಚಿತ್ರವನ್ನು ಕೆತ್ತಲಾಗಿದೆ. ಅವುಗಳಲ್ಲಿ ಬಸವ ಅಥವಾ ನಂದಿಯ ವಿಗ್ರಹವು ತುಂಬಾ ಮಹತ್ವದ್ದಾಗಿದೆ. ಅವರು ಸೂರ್ಯ, ಬೆಂಕಿ ಪ್ರಾಣಿ-ಪಕ್ಷಿಗಳನ್ನು, ಮರಗಳನ್ನು ಮತ್ತು ನೀರನ್ನು ಪವಿತ್ರವೆಂದು ಭಾವಿಸಿ ಪೂಜಿಸುತ್ತಿದ್ದರು. ಸಾಕುಪ್ರಾಣಿಗಳು ಜನರ ಸಂಪತ್ತಿನ ಮೂಲಗಳಾಗಿದ್ದವು. ಅವರ ಶಾಂತಿ ಅವುಗಳನ್ನು ಅವಲಂಬಿಸಿತ್ತು. ವಿಗ್ರಹರಾಧನೆ ಅವರಿಗೆ ತಿಳಿದಿತ್ತು. ಸಿಂಧೂ ನಾಗರಿಕತೆಯ ಜನರ ಧಾರ್ಮಿಕ ಆಚರಣೆಗಳಲ್ಲಿ ಕಾಳಿ, ಗಂಗಾ ಪೂಜೆ (ನೀರು) ಶಿವ, ಪ್ರಾಣಿಗಳು, ಮರಗಳು ಮತ್ತು ಸೂರ್ಯನ ಆರಾಧನೆಗಳು ಮುಖ್ಯವಾಗಿದ್ದವು. ಯೋನಿ ಪೂಜೆ, ಏಕಶೃಂಗಿ, ಗೂಳಿ, ತುಳಸಿ, ಅಶ್ವದ ವೃಕ್ಷ ಮತ್ತು ಶಕ್ತಿ ಪೂಜೆ ಜನಪ್ರಿಯಗೊಂಡವು. ಜನಪ್ರಿಯ ಹಿಂದೂ ಧರ್ಮದಲ್ಲಿ ಇಂತಹ ಆಚರಣೆಗಳಿರುವುದನ್ನು ಕಾಣಬಹುದಾಗಿದೆ. ಇಂದು ನಾವು ಆಚರಿಸುತ್ತಿರುವ ಅನೇಕ ಧಾರ್ಮಿಕ ಪೂಜಾವಿಧಿ ವಿಧಾನಗಳು ಸಿಂಧೂ ನಾಗರಿಕತೆ ಕಾಲದಲ್ಲೇ ಇದ್ದುದನ್ನು ಗುರುತಿಸಬಹುದಾಗಿದೆ. ಅಂದ ಮೇಲೆ ಇಂದಿನ ಹಿಂದೂ ಧರ್ಮ ಮತ್ತು ಸಿಂಧೂ ನಾಗರಿಕತೆಯಲ್ಲಿದ್ದ ಧಾರ್ಮಿಕ ನಂಬಿಕೆಗಳ ನಡುವೆ ಸಾವಯವ ಸಂಬಂಧವಿರುವುದನ್ನು ಗುರುತಿಸಬಹುದಾಗಿದೆ. ಸಿಂಧೂ ನಾಗರಿಕತೆಯ ಜನರು ಅಭಿವೃದ್ಧಿಪಡಿಸಿದ್ದ ಧರ್ಮದ ಸಂತಾನವೇ ಇಂದಿನ ಹಿಂದೂ ಧರ್ಮವಾಗಿದೆ.

### 36.4.1 *ಶವಸಂಸ್ಕಾರ*

1946ರಲ್ಲಿ ಮಾರ್ಟಿಮರ್ ವೀಲರ್ ಇವರು ಬೆಳಕಿಗೆ ತಂದ ಪುರಾತತ್ವ ಅವಶೇಷಗಳಿಂದ ತಿಳಿದುಬರುವಂತೆ ಜನರ ಸಾಮಾಜಿಕ-ಧಾರ್ಮಿಕ ನಂಬಿಕೆಗಳಂತೆ ಅಲ್ಲಿ ಮೂರು ಬಗೆಯ ಶವಸಂಸ್ಕಾರ ರೂಢಿಯಲ್ಲಿದ್ದುದು ತಿಳಿದುಬರುತ್ತದೆ.

1. ಶವವನ್ನು ಭೂಮಿಯಲ್ಲಿ ಹೂಳುವುದು, ಪೂರ್ಣಸಮಾಧಿ, ವಿವಿಧ ವಸ್ತುಗಳ ಸಂಗಡ ಶವವನ್ನು ಹೂಳುವುದು.

2. ಶವವನ್ನು ಕ್ರೂರ ಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ತಿನ್ನಲು ಬಿಡುವುದು ಮತ್ತು ನಂತರ ಉಳಿದ ಮೂಳೆ ಅಸ್ತಿಯನ್ನು ಹೂಳುವುದು.

3. ಶವವನ್ನು ಸುಡುವುದು ಮತ್ತು ಶವದ ಬೂದಿಯನ್ನು ಕಲಶದಲ್ಲಿ ತುಂಬಿ ಹೂಳುವುದು.

## 36.5 ಹರಪ್ಪಾ ಮತ್ತು ವೈದಿಕ ಸಂಸ್ಕೃತಿ

ಇವೆರಡರ ನಡುವೆ ಯಾವುದೇ ಸಾದೃಶ್ಯಗಳು ಕಂಡುಬರುವುದಿಲ್ಲ. ವಾಸ್ತವವಾಗಿ ಇವೆರಡರ ನಡುವೆ ಅನೇಕ ವೈದೃಶ್ಯಗಳನ್ನು ಗುರುತಿಸಬಹುದಾಗಿದೆ. ಸಿಂಧೂ ನಾಗರಿಕತೆಯಲ್ಲಿ ಜನರು ಜನನಿಬಿಡವಾದ ನಗರ ಪಟ್ಟಣಗಳಲ್ಲಿ ವಾಸಿಸುತ್ತಿದ್ದನು. ಅಲ್ಲಿ ಉನ್ನತವಾಗಿ ಬೆಳೆದ ನಗರದಲ್ಲಿರಬಹುದಾದ ಎಲ್ಲ ಸೌಲಭ್ಯಗಳೂ ಲಭ್ಯವಿರುತ್ತಿದ್ದವು. ಆದರೆ ವೈದಿಕ ಸಂಸ್ಕೃತಿಗೆ ಸೇರಿದ ಜನರು ಗ್ರಾಮೀಣ ವಾಸಿಗಳಾಗಿದ್ದರು ಮತ್ತು ಕೃಷಿಕರಾಗಿದ್ದರು. ಸಿಂಧೂ ನಾಗರಿಕತೆಯ ಜನರಿಗೆ ನೈರ್ಮಲ್ಯದ ಉನ್ನತ ಪ್ರಜ್ಞೆಯಿತ್ತು. ಆರ್ಯರಿಗೆ ಅಂತಹ ಪ್ರಜ್ಞೆ ಇರಲಿಲ್ಲ. ಸಿಂಧೂ ನಾಗರಿಕತೆಗೆ ಸೇರಿದ ಜನರು ಬೆಳ್ಳಿ, ಕಲ್ಲು, ತಾಮ್ರ ಮತ್ತು ಕಂಚಿನಿಂದ ತಯಾರಿಸಿದ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಆರಂಭದ ವೈದಿಕ ಸಂಸ್ಕೃತಿ ಜನರು ಬೆಳ್ಳಿಯನ್ನು ಬಳಸುವುದನ್ನು ಕಲಿತರು. ಆರ್ಯರ ಜೀವನದಲ್ಲಿ ಮನೆ, ಗೋವು ಮತ್ತು ಕಬ್ಬಿಣಕ್ಕೆ ಅಗ್ರಸ್ಥಾನವಿತ್ತು. ಆದರೆ ಸಿಂಧೂ ನಾಗರಿಕತೆಯಲ್ಲಿ ಇವು ಕಂಡುಬರುವುದಿಲ್ಲ. ಆರ್ಯರು ಮಾಂಸವನ್ನು ಸೇವಿಸುತ್ತಿದ್ದರೆ ವಿನಾ ಮೀನಿನ ಮಾಂಸದ ಬಗ್ಗೆ ಅರಿವು ಇರಲಿಲ್ಲ. ಸಿಂಧೂ ನಾಗರಿಕತೆಗೆ ಸೇರಿದ ಜನರು ಮೀನು ಮುಂತಾದ ಜಲಜರ ಪ್ರಾಣಿಗಳನ್ನು ತಿನ್ನುತ್ತಿದ್ದರು. ಋಗ್ವೇದದ ಕಾಲದಲ್ಲಿ ಕುದುರೆಯು ಬಳಕೆಯಲ್ಲಿದ್ದ ಒಂದು ಪ್ರಾಣಿ. ಸಿಂಧೂ ನಾಗರಿಕತೆಯಲ್ಲಿ ಕುದುರೆಯ ಬಗ್ಗೆ ಜನರಿಗೆ ಅರಿವಿರಲಿಲ್ಲ. ಆರ್ಯರು ಆಕಳನ್ನು ಪವಿತ್ರವೆಂದು ಪೂಜಿಸುತ್ತಿದ್ದರು. ಆದರೆ ಸಿಂಧೂ ನಾಗರಿಕತೆಯ ಅಂತಹ ಆಚರಣೆ ರೂಢಿಯಲ್ಲಿರಲಿಲ್ಲ.

ಆರ್ಯರ ಧಾರ್ಮಿಕ ನಂಬಿಕೆಗಳು ಸಿಂಧೂ ನಾಗರಿಕತೆಯ ಜನರ ಧಾರ್ಮಿಕ ನಂಬಿಕೆಗಳಿಗಿಂತಲೂ ಭಿನ್ನವಾಗಿದ್ದವು. ಆರ್ಯರು ಪ್ರಕೃತಿಯಲ್ಲಿನ ಶಕ್ತಿಯ ಬಿ. ಗುಗಳನು ಪೂಜಿಸುತ್ತಿದ್ದರು. ಆದರೆ ಸಿಂಧೂ ನದಿಯ ನಾಗರಿಕತೆಯ ಜನರಲ್ಲಿ ಅಂತಹ ಆಚರಣೆಯಿರಲಿಲ್ಲ. ವೈದಿಕ ಸಂಸ್ಕೃತಿಯಲ್ಲಿ ಇರಲಿಲ್ಲ, ವಿಗ್ರಹಾರಾಧನೆಯು ಸಿಂಧೂ ನಾಗರಿಕತೆಯಲ್ಲಿ ವಿಗ್ರಹರಾಧನೆಯು ಪ್ರಚಲಿತದಲ್ಲಿತ್ತು. ಆರ್ಯರ ಶಿವ ಮತ್ತು ಶಕ್ತಿಯನ್ನು ಸಿಂಧೂ ನಾಗರಿಕತೆಯ ಜನರು ಪೂಜಿಸುತ್ತಿದ್ದ ತೀವ್ರತೆಯಲ್ಲಿ ಪೂಜಿಸುತ್ತಿರಲಿಲ್ಲ. ಆರ್ಯರಿಗೆ ಆರಾಧನೆಯ ಸಂಕೇತಗಳು ಪರಿಚಿತವಿರಲಿಲ್ಲ. ಸಿಂಧೂ ನಾಗರಿಕತೆಯಲ್ಲಿ ಆರಾಧನೆಯ ಸಂಕೇತಗಳು ಅಸಂಖ್ಯಾತವಾಗಿದ್ದವು. ಆರ್ಯರಿಗೆ ಬೆಂಕಿಯ ಒಡೆಯನಾದ ಅಗ್ನಿಯು ಅತ್ಯಂತ ಪೂಜ್ಯವಾದ ದೇವತೆ, ಸಿಂಧೂ ನಾಗರಿಕತೆಯ ಜನರಿಗೆ ಬರಹದ ಕಲೆ ಕರಗತವಾಗಿತ್ತು. ಆರಂಭದ ಆರ್ಯರಿಗೆ ಬರವಣಿಗೆ ಕಲೆ ಗೊತ್ತಿರಲಿಲ್ಲ. ಸಿಂಧೂ ನಾಗರಿಕತೆಯ ಜನರು ಕಲೆ ಮತ್ತು ಶಿಲ್ಪಶಾಸ್ತ್ರದಲ್ಲಿ ಉನ್ನತ ಸಾಧನೆ ಮಾಡಿದ್ದರು. ಆರ್ಯರಿಗೆ ಇದು ಸಾಧ್ಯವಾಗಿರಲಿಲ್ಲ.

ಈ ಎಲ್ಲ ಭಿನ್ನತೆ-ವೈದೃಶ್ಯಗಳ ಆಧಾರದ ಮೇಲೆ ಸಿಂಧೂ ನಾಗರಿಕತೆಯು ಆರ್ಯರ ನಾಗರಿಕತೆಗಿಂತ ಪೂರ್ವದ್ದು ಎಂಬುದನ್ನು ಸ್ಪಷ್ಟವಾಗಿ ಹೇಳಬಹುದು. ವೈದಿಕ ಸಂಸ್ಕೃತಿಯು ಪ್ರತ್ಯೇಕವಾಗಿ ಸ್ವಾಯತ್ತವಾಗಿ ರೂಪುಗೊಂಡ ನಾಗರಿಕತೆ, ಸಿಂಧೂ ನಾಗರಿಕತೆಯ ಕಾಲವನ್ನು ಕ್ರಿ.ಪೂ. ೩೦೦೦ ವರ್ಷಕ್ಕೆ ಒಯ್ಯಬಹುದಾಗಿದೆ. ಆದರೆ ವೈದಿಕ ಸಂಸ್ಕೃತಿಯ ಕಾಲವನ್ನು ಕ್ರಿ. ಪೂ. ೩೦೦೦ ಕ್ಕಿಂತ ಹಿಂದೆ ಒಯ್ಯಲು ಸಾಧ್ಯವಿಲ್ಲ. ಕೆಲವು ವಿದ್ವಾಂಸರು ವೈದಿಕ ಸಂಸ್ಕೃತಿಯು ಸಿಂಧೂನಾಗರಿಕತೆಗಿಂತ ಪ್ರಾಚೀನವಾದುದೆಂದು ಹೇಳುತ್ತಾರೆ. ಆದರೆ ಉತ್ಖನನದಲ್ಲಿ ಸಿಂದು ಬಂದ

ಅವಶೇಷಗಳ ಆಧಾರದ ಮೇಲೆ ಇದನ್ನು ಒಪ್ಪಲು ಸಾಧ್ಯವಿಲ್ಲ. ನರ್ಮದಾ ಕಣಿವೆ ಮತ್ತು ಮಾಳವ ಪ್ರದೇಶದಲ್ಲಿ ನಡೆದ ಉತ್ಖನನದಲ್ಲಿ ಸಿಕ್ಕಿದ ಅವಶೇಷಗಳ ಆಧಾರದ ಮೇಲೆ ವೈದಿಕ ಪೂರ್ವ ಸಂಸ್ಕೃತಿಯು ಭಾರತದ ಅನೇಕ ಭಾಗಗಳಲ್ಲಿ ನೆಲೆಗೊಂಡಿತ್ತು ಎಂಬುದನ್ನು ಹೇಳಬಹುದಾಗಿದೆ. ಆದ್ದರಿಂದ ಸಿಂಧೂ ನಾಗರಿಕತೆಯ ವೈದಿಕ ಪೂರ್ವದ್ದಾಗಿದೆ. ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ಬೆಳವಣಿಗೆಗೆ ಅದರ ಕಾಣಿಕೆ ಅಪಾರವಾದುದು.

## 36.6 ಉಪಸಂಹಾರ

1920-22ರ ಭೂ ಉತ್ಖನನಗಳು ೫೦೦೦ ವರ್ಷಗಳ ಭಾರತೀಯ ಸಂಸ್ಕೃತಿ ಬೆಳವಣಿಗೆಯನ್ನು ನಮಗೆ ಪರಿಚಯಿಸಿವೆ. ಈ ಸಂಸ್ಕೃತಿಯೇ ಹರಪ್ಪಾ ಸಂಸ್ಕೃತಿ (ಕ್ರಿ.ಪೂ. ೨೫೦೦-೧೫೦೦) ಇದು ಪ್ರಾಚೀನ ಭಾರತೀಯ ನಗರ ಮತ್ತು ಆರ್ಯರ ಪೂರ್ವದ ಸಂಸ್ಕೃತಿಯಾಗಿದೆ. ಹಿಮಾಲಯ ತಪ್ಪಲಿನಿಂದ ನರ್ಮದಾ ತೀರದವರೆಗೆ ಈ ಸಂಸ್ಕೃತಿ ಹರಡಿತ್ತು. ಹರಪ್ಪಾ ಮಹೆಂಜೊದಾರೋ ಪಟ್ಟಣಗಳ ಪ್ರದೇಶದ ನಡುವೆ ಹಬ್ಬಿತ್ತು. ಮಾತೃ ಪ್ರಧಾನ ಸಮಾಜದಲ್ಲಿ ಪುರೋಹಿತರು ಗೌರವ ಸ್ಥಾನ ಹೊಂದಿದ್ದರು. ಜನರು ಸಸ್ಯ ಹಾಗೂ ಮಾಂಸಾಹಾರಿಗಳಾಗಿದ್ದರು, ಜನರು ನೂಲಿನ ಹತ್ತಿ ಮತ್ತು ಉಣ್ಣೆಯ ನೀಟಾದ ಬಟ್ಟೆಗಳನ್ನು ಧರಿಸುತ್ತಿದ್ದರು. ಕೃಷಿ ಜನರ ಪ್ರಧಾನ ಉದ್ಯೋಗವಾಗಿತ್ತು. ಕೃಷಿ-ಕರಕುಶಲ ಕಸಬುದಾರರು, ಕಾರ್ಮಿಕರು ಮತ್ತು ವಿವಿಧ ಜನಾಂಗಗಳು ಇತರ ಸ್ತ್ರೀ ಪುರುಷರು ಆಭರಣ ಪ್ರೀಯರಾಗಿದ್ದು, ಸೌಂದರ್ಯ ಪರಿಕಲ್ಪನೆಗಳನ್ನು ಹೊಂದಿದ್ದರು. ಗೋದಿ, ಅಕ್ಕಿ, ಬಾರ್ಲಿ, ಹಾಲು, ಮಾಂಸ ಅವರ ಆಹಾರವಾಗಿತ್ತು. ನಾಯಿ, ಆನೆ, ಒಂಟೆ, ಕತ್ತೆ, ಕೋಳಿ, ಕುರಿ, ಎಮ್ಮೆ, ಗೂಳಿ ಅವರ ಪ್ರಮುಖ ಸಾಕುಪ್ರಾಣಿಗಳಾಗಿದ್ದವು. ಕ್ರೂರ ಕಾಡುಪ್ರಾಣಿಗಳ ಬಗ್ಗೆ ತಿಳುವಳಿಕೆ ಅವರಲ್ಲಿ ಇತ್ತು. ಆದರೆ ಕುದುರೆಯ ಮತ್ತು ಕಬ್ಬಿಣದ ಉಪಯೋಗ ಅವರಿಗೆ ಗೊತ್ತಿರಲಿಲ್ಲವೆಂದು ತಿಳಿದು ಬರುತ್ತದೆ. ಸಕ್ರಮ ವಿನ್ಯಾಸದ ಮನೆ, ಸ್ನಾನಗೃಹ, ಚರಂಡಿಯ ಸೌಲಭ್ಯಗಳನ್ನು ಪಡೆದಿದ್ದ ಹರಪ್ಪಾ ಸಂಸ್ಕೃತಿಯು ಜನರು ನೃತ್ಯ, ಸಂಗೀತದಲ್ಲಿ ಪರಿಣತೆಯನ್ನು ಸಾಧಿಸಿದ್ದರು. ಸುಗಂಧ ದ್ರವ್ಯಗಳನ್ನು - ಔಷಧಿಗಳನ್ನು ತಯಾರಿಸುವ ಜಾಣ್ಮೆ ಅವರಲ್ಲಿತ್ತು. ಶೌಚಾಲಯ ಸೌಲಭ್ಯ ಹೊಂದಿದ್ದ ಈ ಜನರ ಅವಶೇಷಗಳು ಅದರಲ್ಲೂ ಮುದ್ರೆಗಳು, ಲಿಪಿಗಳು, ಪಕ್ಷಿ-ಪ್ರಾಣಿ ಮತ್ತು ನಿಸರ್ಗದತ್ತವಾದ ಸುಂದರ ಚಿತ್ರಗಳು ಜನರ ಕಲೆ ಮತ್ತು ಚಿತ್ರಕಲೆಗೆ ಪೂರಕವಾದ ದಾಖಲೆಗಳಾಗಿವೆ. ಚಿತ್ರಲಿಪಿಯ ಜ್ಞಾನ ಹೊಂದಿದ್ದ ಸಿಂಧೂ ಕಣಿವೆಯ ಜನರಿಗೆ ಯುದ್ಧಕಲೆ, ಶಸ್ತ್ರಾಸ್ತ್ರಗಳ ಅರಿವು ಇತ್ತು. ಇವರ ಧರ್ಮ ಪರಿಕಲ್ಪನೆ, ಜಾತಿ ಮತ್ತು ವರ್ಗಸಂಘರ್ಷವನ್ನು ತೋರಿಸುವುದಿಲ್ಲ. ಮಾತೃದೇವತೆ, ಶಕ್ತಿ ಪೂಜೆ, ಸೂರ್ಯ ಪೂಜೆ, ಪ್ರಕೃತಿ ಪೂಜೆ, ವಿಗ್ರಹರಾಧನೆ, ಲಿಂಗ ಪೂಜೆಯ ಪರಿಜ್ಞಾನವನ್ನು ಪಡೆದವರಾಗಿದ್ದರು. ಶೈವಧರ್ಮದ ಇತಿಹಾಸವನ್ನು ಹರಪ್ಪಾ ಸಂಸ್ಕೃತಿಯಿಂದ ಗುರುತಿಸುವ ಪ್ರಯತ್ನಗಳನ್ನು ವಿದ್ವಾಂಸರು ಮಾಡುತ್ತಿದ್ದಾರೆ. ಇವರು ತಮ್ಮ ಸಾಮಾಜಿಕ ಮತ್ತು ಧಾರ್ಮಿಕ ಪರಿಕಲ್ಪನೆಯಲ್ಲಿ ಶವಸಂಸ್ಕಾರ ಮಾಡುತ್ತಿದ್ದರು. ಹೂಳುವುದು, ಪ್ರಾಣಿ-ಪಕ್ಷಿಗಳಿಗೆ ತಿನ್ನಲು ಇಡುವುದು ಮತ್ತು ಸುಡುವುದು ಇವರ ಪದ್ಧತಿಯಾಗಿತ್ತು. ಹರಪ್ಪಾ ಮತ್ತು ವೈದಿಕ ಸಂಸ್ಕೃತಿಯ ಲಕ್ಷಣಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದಾಗ, ಹರಪ್ಪಾ ಸಂಸ್ಕೃತಿ ವೈದಿಕ ಪೂರ್ವವಾಗಿದ್ದು, ಪ್ರಾಚೀನ ಭಾರತದ ನಗರ ಸಂಸ್ಕೃತಿಯಾಗಿದೆ.

## 36.7 ಮಾದರಿ ಪ್ರಶ್ನೆಗಳು

1. ಹರಪ್ಪಾ ಸಂಸ್ಕೃತಿ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಜೀವನವನ್ನು ಪರೀಕ್ಷಿಸಿರಿ.
2. ಹರಪ್ಪಾ ಸಂಸ್ಕೃತಿಯ ವಿಸ್ತಾರ ಮತ್ತು ಸಾಮಾಜಿಕ ಜೀವನವನ್ನು ಚರ್ಚಿಸಿರಿ.

## 36.8 ಅಭ್ಯಾಸಕ್ಕಾಗಿ ಪುಸ್ತಕಗಳು


| | | | |
|---|---|---|---|
| 1. | Altekar .A.S. | : | **Ancient India** |
| 2. | Lunia .B.N. | : | **Evoluation of Indian Culture** |
| 3. | Sathianthaier .R. | : | **History of India, Vol I** |
| 4. | Sehan .S. | : | **World History** |
| 5. | Mittal .A.K. | : | **Political and Cultural History of India** |

## ಟಿಪ್ಪಣಿಗಳು

# ಘಟಕ - 37

## ಹರಪ್ಪ ಸಂಸ್ಕೃತಿ - ಆರ್ಥಿಕ ವ್ಯವಸ್ಥೆ, ನಗರ ಯೋಜನೆ - ಅವನತಿ

*ರಚನೆ*

**37.0** ಉದ್ದೇಶಗಳು

**37.1** ಪ್ರಸ್ತಾವನೆ

**37.2** ಅರ್ಥ ವ್ಯವಸ್ಥೆ

- **37.2.1** ಕೃಷಿ
- **37.2.2** ಪಶುಸಂಗೋಪನೆ
- **37.2.3** ಕೈಗಾರಿಕೆಗಳು
- **37.2.4** ವ್ಯಾಪಾರ ಮತ್ತು ವಾಣಿಜ್ಯ

**37.3** ನಗರ ಯೋಜನೆ

- **37.3.1** ನಗರ ಬೀದಿಗಳು
- **37.3.2** ವಸತಿ ಗೃಹಗಳು
- **37.3.3** ಚರಂಡಿ ವ್ಯವಸ್ಥೆ
- **37.3.4** ಸಾರ್ವಜನಿಕ ಸ್ನಾನ ಗೃಹ
- **37.3.5** ಧಾನ್ಯದ ಉಗ್ರಾಣ

**37.4** ಕಲೆ ಮತ್ತು ಕರಕುಶಲ ಕಲೆ

**37.5** ನಾಗರಿಕತೆಯ ಅವನತಿ

**37.6** ಉಪಸಂಹಾರ

**37.7** ಮಾದರಿ ಪ್ರಶ್ನೆಗಳು

**37.8** ಅಭ್ಯಾಸಕ್ಕೆ ಪುಸ್ತಕಗಳು

## 37.0 ಉದ್ದೇಶಗಳು

1. ಹರಪ್ಪಾ ಸಂಸ್ಕೃತಿಯ ಕಾಲದ ಅರ್ಥವ್ಯವಸ್ಥೆ ಮತ್ತು ನಗರ ಯೋಜನೆಗಳ ಬಗ್ಗೆ ಐತಿಹಾಸಿಕ ಜ್ಞಾನದ ಮೇರೆಗಳನ್ನು ವೃದ್ಧಿಗೊಳಿಸಿಕೊಳ್ಳುವುದಾಗಿದೆ.

2. ಅವರ ಕೃಷಿ-ಕೈಗಾರಿಕೆ, ವ್ಯಾಪಕ ಮತ್ತು ವಾಣಿಜ್ಯಗಳ ಬೆಳವಣಿಗೆಯನ್ನು ವಿಶ್ಲೇಷಿಸುವುದು.

3. ಸಿಂಧೂಕೊಳ್ಳದ ನಗರಯೋಜನೆ, ಸ್ನಾನ ಗೃಹ, ಉಗ್ರಾಣ, ಒಳಚರಂಡಿಯ, ರಚನೆಯಲ್ಲಿನ ತಂತ್ರಜ್ಞಾನ, ವಿನ್ಯಾಸ ಮತ್ತು ಅಂದಿನ ಜನರ ಕಲಾಭಿರುಚಿ ಹಾಗೂ ಕರಕುಶಲತೆಯ ಬಗ್ಗೆ ವಿವರಣೆ ಪಡೆಯುವುದು.

4. ಹರಪ್ಪಾ ಸಂಸ್ಕೃತಿಯ ಅವನತಿಗೆ ಕಾರಣಗಳನ್ನು ತಿಳಿದುಕೊಳ್ಳುವುದು.

## 37.1 ಪ್ರಸ್ತಾವನೆ

ಘಟಕ 36 ರಲ್ಲಿ ಹರಪ್ಪಾ ನಗರ ಸಂಸ್ಕೃತಿಯ ಕಾಲ, ವಿಸ್ತಾರ ಮತ್ತು ಸಮಾಜೊ-ಧಾರ್ಮಿಕ ವಿಚಾರಗಳನ್ನು ಅರ್ಥೈಸಿಕೊಂಡೆವು. ಇದೊಂದು ಪ್ರಾಚೀನ ಭಾರತದ ಅಭಿವೃದ್ಧಿಶೀಲ, ನಾಗರೀಕತೆಯಾಗಿದೆ. ಸಿಂಧೂಕೊಳ್ಳದ ನಾಗರೀಕತೆಯಲ್ಲಿ ನಾವು ಕಾಣುವ ನಗರ ಯೋಜನೆ, ವಿವಿಧ ಬೃಹತ್ ಕಟ್ಟಡಗಳು, ಭೂ ಉತ್ಖನನದಲ್ಲಿನ ಅವಶೇಷಗಳು ಅಂದಿನ ಜನರ ಯಂತ್ರ ಮತ್ತು ತಂತ್ರಜ್ಞಾನದ ಅರಿವನ್ನು ಹಾಗೂ ನಾಗರೀಕ ಪ್ರಜ್ಞೆಯನ್ನು ತೋರಿಸುತ್ತವೆ. ಅವರ ಅರ್ಥ ವ್ಯವಸ್ಥೆಯಲ್ಲಿ ಕಾಣುವ ಕೃಷಿ, ಕೈಗಾರಿಕೆ, ಪಶುಸಂಗೋಪನೆ, ವ್ಯಾಪಾರ-ವಾಣಿಜ್ಯ, ಕಲೆ ಮತ್ತು ಕರಕುಶಲತೆಗಳ ವಿವಿಧ ಆಯಾಮಗಳನ್ನು ಚರ್ಚಿಸೋಣ. ವಿವಿಧ ಅಂಶಗಳು ಈ ನಾಗರೀಕತೆಯ ಅವನತಿಗೆ ಕಾರಣವಾಗಿವೆ.

## 37.2 ಅರ್ಥವ್ಯವಸ್ಥೆ

ಹಲವು ನಾಗರಿಕ ಸೌಲಭ್ಯಗಳನ್ನು ಹೊಂದಿದ್ದ ಸಿಂಧೂ ನಾಗರಿಕತೆಯ ಜನರ ಜೀವನಮಟ್ಟವು ಸಮಕಾಲೀನ ನಾಗರಿಕತೆಗಳ ಜನರ ಜೀವನಮಟ್ಟಕ್ಕಿಂತ ಉನ್ನತವಾಗಿತ್ತು. ಅವರ ಉಡುಪು, ಆಭರಣಗಳು, ಆಹಾರ, ವಸತಿ ಸೌಕರ್ಯಗಳು ಉನ್ನತ ಮಟ್ಟದಾಗಿದ್ದವು.

### *37.2.1 ಕೃಷಿ*

ಕೃಷಿ ಪ್ರಧಾನ ಉದ್ಯೋಗವಾಗಿತ್ತು. ಫಲವತ್ತಾದ ಭೂಮಿ ಮತ್ತು ವಿಪುಲ ನೀರಿನ ಪೂರೈಕೆಯಿಂದಾಗಿ ಕೃಷಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಪ್ರಾಚೀನ ಕಾಲದಲ್ಲಿ ಸಿಂಧ್ ಪ್ರಾಂತದಲ್ಲಿ ಸಾಕಷ್ಟು ಮಳೆ ಬೀಳುತ್ತಿತ್ತೆಂದು ವಿದ್ವಾಂಸರು ತರ್ಕಿಸಿದ್ದಾರೆ. ಗೋಧಿ, ಜವೆಗೋಧಿ, ಭತ್ತ, ಹತ್ತಿ ಮತ್ತು ಬಾರ್ಲಿ ಮುಖ್ಯವಾದ ಬೆಳೆಗಳಾಗಿದ್ದವು. ನಾನಾ ಪ್ರಕಾರಗಳ ಹಣ್ಣು ಹಾಗೂ ತರಕಾರಿಗಳನ್ನು ಬೆಳೆಯುತ್ತಿದ್ದರು. ಕೃಷಿ ಸಲಕರಣೆಗಳು ಮರದಿಂದ ಮಾಡಿದವುಗಳಾದುದರಿಂದ ಅವು ಕಾಲಾನಂತರ ಮಣ್ಣಿನಲ್ಲಿ ನಶಿಸಿಹೋಗಿವೆ. ಸಿಂಧೂಕೊಳ್ಳದ ಭೌಗೋಳಿಕ ಅಂಶಗಳು ಕೃಷಿಗೆ ಉತ್ತೇಜನ ನೀಡಿದವು.

### *37.2.2 ಪಶು ಸಂಗೋಪನೆ*

ಸಿಂಧೂ ನಾಗರಿಕತೆಯ ಜನರು ಎತ್ತು, ಗೂಳಿ, ಹಸು, ಎಮ್ಮೆ, ಕುರಿ, ಆಡು, ಹಂದಿ, ನಾಯಿ, ಕೋಳಿ, ಕುದುರೆ, ಆನೆ, ಒಂಟೆ, ಹೇಸರು ಕತ್ತೆ ಮುಂತಾದವುಗಳನ್ನು ಸಾಕುತ್ತಿದ್ದರು.

ಹುಲಿ, ಕರಡಿ, ಕಾಡಮ್ಮ, ಕೋತಿ, ಕಾಡು ಹಂದಿ, ಹಾವು, ಚೇಳು, ಮೊಸಳೆ, ಖಡ್ಗಮೃಗ (ಘೇಂಡಾಮೃಗ) ಮುಂತಾದವು ಅವರಿಗೆ ಪರಿಚಯವಿದ್ದವು. ಕುದುರೆಗಳನ್ನು ಹೆಚ್ಚಾಗಿ ಬಳಸುತ್ತಿದ್ದಿಲ್ಲವೆಂದು ತೋರುತ್ತದೆ.

### 37.2.3 ಕೈಗಾರಿಕೆಗಳು

ಕುಂಬಾರರು, ಬಡಗಿಗಳು, ಮನೆಕಟ್ಟುವವರು, ಕಮ್ಮಾರರು, ಚಿನ್ನ ಬೆಳ್ಳಿ ಕೆಲಸ ಮಾಡುವವರು, ದಂತದ ಕೆತ್ತನೆಗಾರರು, ಕಲ್ಲಿನ ಕೆತ್ತನೆಗಾರರು, ಬಣ್ಣಗಾರರು, ಅಡಿಕೆಗಾರರು, ನೇಕಾರರು ಮುಂತಾದ ಉದ್ದಿಮೆಗಾರರು ಅಲ್ಲಿದ್ದರು. ಮನೆಗಳಲ್ಲಿ ಬಟ್ಟೆಯನ್ನು ನೇಯುತ್ತಿದ್ದರು. ಇದಕ್ಕೆ ಸಾಕ್ಷಿಯಾಗಿ ಅಲ್ಲಿ ನಮಗೆ ಚರಕಗಳ ಅವಶೇಷಗಳು ಅಪಾರವಾಗಿ ದೊರೆತಿವೆ. ಹತ್ತಿ ಮತ್ತು ಉಣ್ಣೆಯಿಂದ ನೂಲು ಸುತ್ತುವುದು ಮತ್ತು ಬಟ್ಟೆ ನೇಯುವುದು ಅಲ್ಲಿ ಸಾಮಾನ್ಯವಾಗಿತ್ತು. ಇಂತಹ ಹಲವಾರು ಉದ್ಯೋಗಗಳು ಮತ್ತು ಕೈಗಾರಿಕೆಗಳು ಅಭಿವೃದ್ಧಿ ಹೊಂದಿದ್ದವು. ಕೈಗಾರಿಕೆಯ ಕೇಂದ್ರವಾಗಿದ್ದ ಚಾನ್ಹುದಾರೋದಲ್ಲಿ ಆಟಿಗೆಯ ಸಾಮಾನುಗಳು, ಮಣಿಗಳು ಮತ್ತು ಮುದ್ರೆಗಳನ್ನು ತಯಾರಿಸಲಾಗುತ್ತಿತ್ತು. ಪಶುಪಾಲನೆ ಮತ್ತು ಮೀನುಗಾರಿಕೆ ಇತರ ಉದ್ಯೋಗಗಳಾಗಿದ್ದವು. ಮಣ್ಣಿನ ಪಾತ್ರೆಗಳನ್ನು ತಿಗರೆಯ (ಚಕ್ರದ) ಸಹಾಯದಿಂದ ಹಾಗೂ ಹಸ್ತ ಕೌಶಲ್ಯದಿಂದ ತಯಾರಿಸುತ್ತಿದ್ದರು. ಅವುಗಳಿಗೆ ಕೆಂಪು, ಕಪ್ಪು, ಅಪರೂಪವಾಗಿ ಬಿಳಿ ಹಾಗೂ ಹಸಿರು ಬಣ್ಣಗಳನ್ನು ಬಳೆಯುತ್ತಿದ್ದರು. ಹರಪ್ಪಾ ಸಂಸ್ಕೃತಿಯ ಕಾಲದ ಜನರಿಗೆ ಚಿನ್ನ, ಬೆಳ್ಳಿ, ತಾಮ್ರ, ಕಂಚು, ತವರ ಮತ್ತು ಸೀಸಗಳ ಉಪಯೋಗ ತಿಳಿದಿತ್ತು.

### 37.2.4 ವ್ಯಾಪಾರ ಮತ್ತು ವಾಣಿಜ್ಯ

ಸಿಂಧೂ ಜನರು ಭಾರತದ ಭಾಗಗಳೊಡನೆ, ಬಲೂಚಿಸ್ತಾನ, ಪರ್ಷಿಯಾ, ಈಜಿಪ್ಟ್, ಮೆಸಪೋಟೇಮೀಯಗಳೊಡನೆ ವ್ಯಾಪಾರ ಸಂಪರ್ಕ ಹೊಂದಿದ್ದರು. ಮೆಸಪೋಟಾಮಿಯಾದಲ್ಲಿ ಹರಪ್ಪಾ ಸಂಸ್ಕೃತಿ ಪ್ರದೇಶದಲ್ಲಿ ೨೪ ಮುದ್ರೆಗಳು ಸಿಕ್ಕಿವೆ. ಸಿಂಧೂಕೊಳ್ಳದ ಪ್ರದೇಶದಲ್ಲಿ ದೊರೆತಿರುವ ಮೆಸಪೋಟಮಿಯನ್ನರ ಮೂರು ಸಿಲಿಂಡರ್ ಆಕಾರದ ಮುದ್ರೆಗಳು ಮತ್ತು ಲೋಹಗಳು ಹರಪ್ಪಾ ಮತ್ತು ಮೆಸಪೋಟಾಮಿಯಾ ನಡುವಿನ ವ್ಯಾಪಾರ ಸಂಬಂಧವನ್ನು ಸೂಚಿಸುತ್ತದೆ. ಪರ್ಷಿಯಾ, ಗಲ್ಫ್, ದಕ್ಷಿಣ ಅರಬ್, ಸುಮೇರಿಯಾ, ವ್ಯಾಪಾರಿ ಸಂಘಗಳಾದ ಉರ್, ದಿರ್ಲಿಯನ್, ಮಾಗನ್ ಇತ್ಯಾದಿ ಉಲ್ಲೇಖಗಳು ಈ ದೇಶಗಳ ವ್ಯಾಪಾರ ಬೆಳವಣಿಗೆ ತೋರಿಸುತ್ತವೆ. ಕರ್ನಾಟಕದಿಂದ ಚಿನ್ನವನ್ನು, ರಾಜಸ್ಥಾನದಿಂದ ತಾಮ್ರವನ್ನು ಹಜಾರಿಬಾಗ್ ಗಣಿಗಳಿಂದ ತವರವನ್ನು, ಗಡುಸಾದ ಜೇಡ್ ಶಿಲೆ (Jedelte) ಯನ್ನು ಟಿಬೇಟ್‌ನಿಂದ ತರಿಸಿಕೊಳ್ಳುತ್ತಿದ್ದರು. ವ್ಯಾಪಕವಾದ ವಾಣಿಜ್ಯವು ಸಿಂಧೂ ನಾಗರಿಕತೆಯ ಈ ಪ್ರಧಾನ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಮುದ್ರೆಗಳ ಮತ್ತು ಮಣ್ಣಿನ ಪಾತ್ರೆಗಳ ಮೇಲಿನ ಹಡಗುಗಳ ಚಿತ್ರಗಳು ಈ ಜನರ ಸಾಗರ ನೌಕಾಯಾನವನ್ನು ಸೂಚಿಸುತ್ತದೆ.

ವಾಣಿಜ್ಯ ಮತ್ತು ವ್ಯಾಪಾರದಲ್ಲಿ ಅವರು ಪ್ರಗತಿ ಸಾಧಿಸಿಕೊಂಡಿದ್ದರು. ಅಲ್ಲಿ ದೊರೆತಿರುವ ತೂಕ ಮತ್ತು ಅಳತೆಯ ಸಾಧನೆಗಳಿಂದ ಅವರು ವ್ಯಾಪಾರದಲ್ಲಿ ಸಾಧಿಸಿಕೊಂಡಿದ್ದ ಪ್ರಗತಿಯನ್ನು ಊಹಿಸಿಕೊಳ್ಳಬಹುದು. ನಿಖರವಾದ ತೂಕ ಮತ್ತು ಅಳತೆ ಅಲ್ಲಿ ಆಚರಣೆಯಲ್ಲಿತ್ತು. ಸಿಂಧೂ ನಾಗರಿಕತೆ ಜನರು ಹೆಚ್ಚು ತೂಕದ ವಸ್ತುಗಳ ಅಳತೆಗೆ ವೃತ್ತಾಕಾರದ ಅಳತೆ ಕಲ್ಲುಗಳನ್ನು ಮತ್ತು ಹಗುರ ವಸ್ತುಗಳ ಳತೆಗೆ ಘನಕಾರದ ಅಳತೆ ಪಾತ್ರೆಗಳನ್ನು ಬಳಸುತ್ತಿದ್ದರು. ತೂಕದ ಪ್ರಮಾಣಗಳು (Weights ratio) ೧,೨,೪,೮,೧೬,೩೨,೬೪,೧೬೦,೨೦೦,೩೨೦,೬೪೦ ರ ವ್ಯತ್ಯಾಸದಲ್ಲಿದ್ದವು. ಬಹುಶಃ ಅಳತೆಗಾಗಿ ಜನರು ಒಂದು ಅಡಿಗೆ ೧೩.೨ ಇಂಚಿನ ಮಾಪನವನ್ನು ಬಳಸಿದ್ದರಬಹುದು. ಒಂದು ಘಟಕದ ಕನಿಷ್ಟ ಮೌಲ್ಯ ೧೩.೬೪ ಗ್ರಾಂ ತೂಕ ಹೊಂದಿದ್ದರೆ, ಇದರ ಗರಿಷ್ಠ ಪ್ರಮಾಣದ

ಮೌಲ್ಯ ೧೧,೯೭೦ ಗ್ರಾಂ ತೂಕವನ್ನು ಹೊಂದಿತ್ತು. ಈ ಜನರಿಗೆ ದಶಮಾನ ಪದ್ಧತಿ ಗೊತ್ತಿತ್ತು. ಬೆಳ್ಳಿ - ಬಂಗಾರದ ಅಳತೆಗೆ ಅತಿ ಕಡಿಮೆ ತೂಕದ ಅಳತೆ ಕಲ್ಲುಗಳನ್ನು ಉಪಯೋಗಿಸುತ್ತಿದ್ದರು. ಅವರು ಸಂಪರ್ಕದ ಸಾಧನಗಳನ್ನು ಅಭಿವೃದ್ಧಿಪಡಿಸಿದ್ದರು. ಬಹುಮುಖ್ಯ ಸಂಪರ್ಕಸಾದನವೆಂದರೆ ಎತ್ತಿನಗಾಡಿಯಾಗಿತ್ತು. ಬಹುಶಃ ನದಿ ಸಾರಿಗೆಯಲ್ಲಿ ಹಡಗಗುಗಳನ್ನು ಬಳಸಿರುವ ಸಾಧ್ಯತೆಯಿದೆ. ಗುಜರಾತದಲ್ಲಿನ ಲೋಥಲ್‌ನಲ್ಲಿ ಹಡಗು ಕಟ್ಟೆ ಇತ್ತೆಂದು ಶೋಧನೆಗಳು ತಿಳಿಸಿವೆ. ನಾಣ್ಯ ಚಲಾವಣೆಗೆ ಖಚಿತ ಪುರಾವೆಗಳು ದೊರೆತಿಲ್ಲ. ಆದರೆ ಜೇಡಿಮಣ್ಣಿನ ವೃತ್ತಾಕಾರದ ೫೫೦ ಮುದ್ರೆಗಳು ನಾಣ್ಯಗಳಾಗಿ ಬಳಕೆಯಲ್ಲಿದ್ದವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕರಕುಶಲ ಮತ್ತು ಗುಡಿಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ವಿದೇಶಗಳಿಂದ ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಮೈಸೂರು, ಪರ್ಷಿಯಾ ಮತ್ತು ಆಫ್‌ಘಾನಿಸ್ತಾನ ಇರಾನಿನಿಂದ ಬೆಳ್ಳಿ-ಬಂಗಾರವನ್ನು ಆಮದು ಮಾಡಿಕೊಳ್ಳುತ್ತಿದ್ದರು. ಕರ್ನಾಟಕ, ಆಫ್‌ಘಾನಿಸ್ತಾನ, ಇರಾನ್, ಮಧ್ಯ ಏಷಿಯಾದಿಂದ ಕಚ್ಚಾವಸ್ತುಗಳನ್ನು, ಲೋಹಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು.

## 37.3 ನಗರ ಯೋಜನೆ

ನಗರಗಳು ಹಾಗೂ ಸೌಕರ್ಯಯುತ ನಗರ ಜೀವನ ಸಿಂಧೂ ನಾಗರಿಕತೆಯ ಅತ್ಯಂತ ಸ್ಫುಟವಾದ ವೈಶಿಷ್ಟ್ಯಗಳಲ್ಲಿ ಒಂದಾಗಿವೆ. ಮೊಹಂಜೊದಾರೊ, ಹರಪ್ಪಗಳಂತಹ ಯೋಜನಾಬದ್ಧವಾಗಿ ರಚಿತವಾದ ನಗರಗಳು ಸಿಂಧೂ ನಾಗರಿಕತೆಯ ಜನರ ರಚನಾ ಕೌಶಲ್ಯ ಮತ್ತು ದಕ್ಷ ಪೌರಾಡಳಿತಕ್ಕೆ ಸಾಕ್ಷಿಯಾಗಿವೆ, ಮೊಹೆಂಜೊದಾರೊ ಪಟ್ಟಣವು ಅವರ ನಗರ ರಚನಾ ಕೌಶಲ್ಯಕ್ಕೆ ಅತ್ಯುತ್ತಮವಾದ ನಿದರ್ಶನವಾಗಿದೆ. ಮೊಹೆಂಜೊದಾರೊ ಪ್ರಾಚೀನ ಜಗತ್ತಿನ ಪ್ರಪ್ರಥಮ ಸಂಯೋಜಿತ ನಗರವೆಂಬುದು ಗಮನಾರ್ಹವಾದ ಸಂಗತಿ, ನಗರ ರಕ್ಷಣೆಗಾಗಿ ಕೋಟೆಯ ಉನ್ನತ ಗೋಡೆಗಳು, ವಿಶಾಲವಾದ ಬೀದಿಗಳು, ಅಚ್ಚುಕಟ್ಟಾದ ಕೇರಿಗಳು, ಸೌಕರ್ಯಯುತ ವಸತಿ ಗೃಹಗಳು, ವ್ಯವಸ್ಥಿತವಾದ ಒಳಚರಂಡಿ ಯೋಜನೆ, ಸಾರ್ವಜನಿಕ ಸ್ನಾನಗೃಹಗಳು, ವಿಶಾಲವಾದ ಸಾರ್ವಜನಿಕ ಕಟ್ಟಡಗಳು ನಗರ ಯೋಜನೆಯ ಪ್ರಧಾನ ಅಂಶಗಳಾಗಿದ್ದವು.

### 37.3.1 *ನಗರದ ಬೀದಿಗಳು*

ನಗರದ ಮುಖ್ಯ ಬೀದಗಳು ಪೂರ್ವ-ಪಶ್ಚಿಮವಾಗಿ ಹಾಗೂ ದಕ್ಷಿಣ-ಉತ್ತರವಾಗಿ ನೇರವಾಗಿ ಏರ್ಪಟ್ಟಿದ್ದವು. ಅವುಗಳು ಒಂದನ್ನೊಂದು ಸಮಕೋನದಲ್ಲಿ ಸಂಧಿಸುತ್ತಿದ್ದವು. ಮುಖ್ಯ ಬೀದಿಗಳು ೯ ರಿಂದ ೩೪ ಅಡಿಗಳವರೆಗೆ ಅಗಲವಾಗಿದ್ದವು. ಬೀದಿಗಳು ಸಮಕೋನದಲ್ಲಿ ಸಂಧಿಸಿದ್ದರಿಂದ ನಗರವು ಅನೇಕ ವಿಭಾಗಗಳನ್ನು ಹೊಂದಿತ್ತು. ಪ್ರತಿ ವಿಭಾಗದಲ್ಲಿ ವಸತಿ ಗೃಹಗಳು ಮತ್ತು ಉಪಬೀದಿಗಳು ಇದ್ದವು. ಅಲ್ಲಲ್ಲಿ ಕಸದ ತೊಟ್ಟಿಗಳಿದ್ದವು. ಬೀದಿಗಳಲ್ಲಿ ಸಾರ್ವಜನಿಕ ದೀಪದ ವ್ಯವಸ್ಥೆ ಇತ್ತು. ನಗರದಲ್ಲಿ ಸಾರ್ವಜನಿಕ ಬಾವಿಗಳಿದ್ದವು.

### 37.3.2 *ವಸತಿ ಗೃಹಗಳು*

ಬೀದಿಗಳ ಪಕ್ಕದಲ್ಲಿ ಸೌಕರ್ಯಯುತ ಸಣ್ಣ ಹಾಗೂ ದೊಡ್ಡ ವಸತಿ ಗೃಹಗಳಿದ್ದವು. ಸಿಂಧೂ ನಾಗರಿಕತೆಯ ಜನರಿಗೆ ಸರಳವಾದ ಮತ್ತು ಸುಂದರವಾದ ಮನೆಗಳನ್ನು ಕಟ್ಟುವ ಕುಶಲತೆ ತಿಳಿದಿತ್ತು. ನಮಗೆ ಮೂರು ಬಗೆಯ ಮನೆಗಳ ವಿನ್ಯಾಸದ ಪುರಾವೆಗಳು ದೊರೆತಿವೆ. ಒಂದು ವಾಸದ ಮನೆ, ಎರಡನೆಯದು ಸಾಮುದಾಯಿಕ ಭವನ, ಮೂರನೆಯದು ಸಾರ್ವಜನಿಕ ಸ್ನಾನದ ಮನೆಗಳು, ಅಲ್ಲಿ ವಾಸದ ಮನೆಗಳು ಅಸಂಖ್ಯವಾಗಿದ್ದವು, ಚಿಕ್ಕ ಮನೆಗಳಲ್ಲಿ ಎರಡು ಕೊಠಡಿಗಳಿದ್ದರೆ ದೊಡ್ಡ ಮನೆಗಳು ಅರಮನೆಯೋಪಾದಿಯಾಗಿದ್ದವು. ಅನೇಕ ಮನೆಗಳು ಮೆಟ್ಟಿಲುಗಳಿಂದ ಕೂಡಿದ ಮಹಡಿಗಳನ್ನು ಒಳಗೊಂಡಿದ್ದವು. ಮನೆಗಳ ನಿರ್ಮಾಣದಲ್ಲಿ ಸುಟ್ಟ ಇಟ್ಟಿಗೆ ಹಾಗೂ ಹಸಿ

ಇಟ್ಟಿಗೆಗಳನ್ನು ಬಳಸಲಾಗಿತ್ತು. ಸಾಮಾನ್ಯವಾಗಿ ೨೫.೮೭ ರಿಂದ ೨೬.೮೪ ಸೆಂಟಿ ಮೀಟರ್ ಉದ್ದದ, ೧೩.೩೩ ರಿಂದ ೧೫.೮೭ ಸೆಂಟಿ ಮೀಟರ್ ಅಗಲದ ಮತ್ತು ೬. ೯೮ ಸೆಂಟಿಮೀಟರ್ ದಪ್ಪ ಅಳತೆಯುಳ್ಳ ಇಟ್ಟಿಗೆಗಳನ್ನು ಕಟ್ಟಡಗಳ ರಚನೆಯಲ್ಲಿ ಬಳಸಲಾಗಿದೆ. ಸಿಂಧೂ ಕೊಳ್ಳದಲ್ಲಿ ಸಿಕ್ಕಿರುವ ಅತೀ ದೊಡ್ಡ ಇಟ್ಟಿಗೆಯ ಅಳತೆ ೩೫.೫೬ X ೨೦.೩೨ ಮತ್ತು ೧೦.೧೬ ಸೆಂಟಿಮೀಟರ್ ಅಳತೆಯಾಗಿದೆ. ಸುಣ್ಣ, ಜಿಪ್ಸಮ್ ಮತ್ತು ಮಣ್ಣನ್ನು ಉಪಯೋಗಿಸಿ ಗೋಡೆಗಳನ್ನು ಭದ್ರವಾಗಿ ಕಟ್ಟುತ್ತಿದ್ದರು. ಮನೆಗಳೊಳಗೆ ನೆಲವನ್ನು ಕಲ್ಲುಗಳ ಹಾಸುವಿನಿಂದ ಸಮತಟ್ಟಾಗಿ ಮಾಡಲಾಗುತ್ತಿತ್ತು.

ಪ್ರತಿ ಮನೆಗೆ ಒಂದೇ ಪ್ರವೇಶದ್ವಾರವಿದ್ದು, ಅದು ಮುಖ್ಯ ಬೀದಿಗೆ ಎದುರಾಗಿ ಇರದೆ, ಪಕ್ಕದ ಉಪಬೀದಿಗೆ ಎದುರಾಗಿತ್ತು. ಮನೆಗಳು ವಾಸ್ತುಶಿಲ್ಪದ ಅಲಂಕಾರಗಳಿಲ್ಲದೆ ತೀರ ಸರಳವಾಗಿದ್ದವು. ಕೆಲವು ಮನೆಗಳಿಗೆ ಎರಡು, ಮೂರು ಅಂತಸ್ತುಗಳಿದ್ದವು. ದೊಡ್ಡ ಮನೆಗಳಲ್ಲಿ ೨೫ ಕೋಣೆಗಳಿದ್ದವು. ಮನೆಯ ಹೊರಗೋಡೆಗಳಲ್ಲಿ ಕಿಟಕಿಗಳು ಇರಲಿಲ್ಲ. ಸಾಮಾನ್ಯವಾಗಿ ಪ್ರತಿ ಮನೆಗೆ ಒಂದು ಅಂಗಳ, ಒಂದು ಬಾವಿ, ಮೂರು ನಾಲ್ಕು ಕೋಣೆಗಳು, ಸ್ನಾನಗೃಹ ಮತ್ತು ಚರಂಡಿ ಸೌಕರ್ಯ ಇದ್ದವು. ಮೇಲಿನ ಅಂತಸ್ತಿನಲ್ಲಿಯೂ ಸ್ನಾನದ ಕೋಣೆಯಿತ್ತು. ಕೆಲವು ಮನೆಗಳ ಪ್ರವೇಶ ದ್ವಾರದಲ್ಲಿ ಮನೆ ಕಾಯುವ ಸಿಪಾಯಿಗೆ ಜಾಗವಿದ್ದುದು ತಿಳಿದು ಬಂದಿದೆ. ಸಾಮಾನ್ಯವಾಗಿ ಮನೆಗಳಲ್ಲಿ ಒಂದು ವಿಶಾಲವಾದ ನಡುಮನೆ ಇದ್ದು ಅದರ ಎರಡು ಅಥವಾ ಮೂರು ಭಾಗಗಳಲ್ಲಿ ವಿವಿಧ ಅಳತೆಯ ವಾಸಿಸುವ ಕೊಠಡಿಗಳು ಹಾಗೂ ಸ್ನಾನದ ಮನೆ ಇರುತ್ತಿದ್ದವು.

### *37.3.3 ಚರಂಡಿ ವ್ಯವಸ್ಥೆ*

ನಗರ ಯೋಜನೆಯ ಇನ್ನೊಂದು ಶ್ಲಾಘನೀಯ ಅಂಶವೆಂದರೆ ವ್ಯಾಪಕವಾದ ಚರಂಡಿಗಳ ವ್ಯವಸ್ಥೆ. ಮನೆಗಳ ಕೊಳವೆ (ಚರಂಡಿ) ಗಳಿಂದ ಹೊರಟ ಕೊಳೆ ನೀರು ಬೀದಿಗಳ ಪಕ್ಕದಲ್ಲಿನ ಚರಂಡಿಗಳಿಗೆ ಸೇರಿ, ಮುಂದೆ ಅದು ಮಹಾಚರಂಡಿಯ ಮೂಲಕ ನದಿಯನ್ನು ಸೇರುತ್ತಿತ್ತು. ಚರಂಡಿಗಳನ್ನು ಕಲ್ಲು ಇಲ್ಲವೆ ಇಟ್ಟಿಗೆಗಳಿಂದ ಮುಚ್ಚುವ ಏರ್ಪಾಡು ಇತ್ತು. ಒಳಚರಂಡಿಗಳನ್ನು ಆಗಾಗ ಸ್ವಚ್ಛ ಮಾಡಲು ಕಿಂಡಿಗಳಿದ್ದವು. ಇಂತಹ ಅದ್ವಿತೀಯವಾದ ಒಳಚರಂಡಿ ವ್ಯವಸ್ಥೆಯು ಆ ಕಾಲದ ಜಗತ್ತಿನ ಬೇರಾವ ನಾಗರಿಕ ದೇಶದಲ್ಲಿಯೂ ಇರಲಿಲ್ಲ. ಸಿಂಧೂ ನಾಗರಿಕತೆಯ ಜನರು ಸಾರ್ವಜನಿಕ ಆರೋಗ್ಯ ಹಾಗೂ ನೈರ್ಮಲ್ಯದ ಬಗ್ಗೆ ಜಾಗರೂಕರಾಗಿದ್ದರು. ಉನ್ನತ ಪ್ರಜ್ಞೆ ಇತ್ತೆಂದು ತಿಳಿದು ಬರುತ್ತದೆ. ಅಲ್ಲದೆ ನಾಗರಿಕ ಸಂಘಟನೆಯನ್ನು ಅವರು ಬೆಳೆಸಿಕೊಂಡಿದ್ದರೆನ್ನುವ ಅಂಶ ಗೋಚರವಾಗುತ್ತದೆ.

### *37.3.4 ಸಾರ್ವಜನಿಕ ಸ್ನಾನಗೃಹ*

ನಗರದಲ್ಲಿ ಸಾರ್ವಜನಿಕ ಸ್ನಾನಗೃಹಗಳಿದ್ದವು. ಮೊಹಂಜೊದಾರೋದಲ್ಲಿ ಸಾರ್ವಜನಿಕರ ಸ್ನಾನಕ್ಕಾಗಿ ಬೃಹತ್ ಸ್ನಾನಗೃಹ ಇತ್ತು. ಇದು ೧೮೦ ಅಡಿ ಉದ್ದ, ೧೦೮ ಅಡಿ ಅಗಲವಿದ್ದು, ಇದರ ನಡುವೆ ೩೯ ಅಡಿ ಉದ್ದ ೩೪ ಅಡಿ ಅಗಲ ಮತ್ತು ೯ ಅಡಿ ಆಳದ ಈಜು ಕೊಳವಿದೆ. ಇದರಲ್ಲಿ ಇಳಿಯಲು ಎರಡೂ ಬದಿಗಳಲ್ಲಿ ಮೆಟ್ಟಿಲುಗಳಿವೆ. ಈಜು ಕೊಳದ ಸುತ್ತಲೂ ಕೊಠಡಿಗಳಿದ್ದವು. ಒಂದು ಕೊಠಡಿಯಲ್ಲಿದ್ದ ಬಾವಿಯಿಂದ ಈಜುಕೊಳಕ್ಕೆ ನೀರನ್ನು ಒದಗಿಸಲಾಗುತ್ತಿತ್ತು. ಕೆಲವು ಕೊಠಡಿಗಳಿಗೆ ಸುರಂಗಮಾರ್ಗವಾಗಿ ಕೊಳವೆಗಳ ಮೂಲಕ ಹಬೆಯು ಬರುವಂತೆ ಮಾಡಿ ಪುರೋಹಿತರಿಗೆ ಆವಿಸ್ನಾನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಈಜು ಕೊಳದಲ್ಲಿನ ಕೊಳೆ ನೀರನ್ನು ದೊಡ್ಡ ಚರಂಡಿಯ ಮೂಲಕ ಹೊರಗೆ ಬಿಡುವ ವ್ಯವಸ್ಥೆಯಿತ್ತು. ಇಟ್ಟಿಗೆಗಳಿಂದ ನಿರ್ಮಿತವಾಗಿರುವ ಈ ಬೃಹತ್ ಸಾರ್ವಜನಿಕ ಸ್ನಾನಗೃಹ ಐದು ಸಾವಿರ ವರ್ಷಗಳವರೆಗೆ ಉಳಿದಿರುವುದು ಅದರ ಭದ್ರ ರಚನೆಗೆ ಸಾಕ್ಷಿಯಾಗಿದೆ.

### *37.3.5 ಧಾನ್ಯದ ಉಗ್ರಾಣ*

ತೆರಿಗೆಗಳನ್ನು ಧಾನ್ಯದ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಹಾಗೆ ಸಂಗ್ರಹಿಸಿದ ಧಾನ್ಯಗಳ ಶೇಖರಣೆಗಾಗಿ ದೊಡ್ಡ ಉಗ್ರಾಣವನ್ನು ನಿರ್ಮಿಸಿದ್ದರು. ಹರಪ್ಪ ಮತ್ತು ಮೊಹೆಂಜೊದಾರೊಗಳಲ್ಲಿ ಭವ್ಯವಾದ ಉಗ್ರಾಣಗಳಿದ್ದವು. ಹರಪ್ಪದ ಭವ್ಯ ಉಗ್ರಾಣ ೧೬೯ ಅಡಿ ಉದ್ದ ೧೩೫ ಅಡಿ ಅಗಲವಾಗಿತ್ತು. ಮೊಹೆಂಜೊದಾರೊದಲ್ಲಿನ ಉಗ್ರಾಣ (೧೫೦ ಅಡಿ ಉದ್ದ X೭೫ ಅಡಿ ಅಗಲ) ಶಾಸ್ತ್ರೀಯ ರೂಪದಲ್ಲಿ ನಿರ್ಮಿಸಲಾಗಿದ್ದು, ಒಳಗೆ ಗಾಳಿಯಾಡುವಂತೆ ವ್ಯವಸ್ಥೆ ಮಾಡಲಾಗಿತ್ತು.

ಹರಪ್ಪದಲ್ಲಿನ ಕೆಲಸಗಾರರ ವಸತಿ ಗೃಹಗಳು ೧೮೦ ರಿಂದ ೧೦೮ ಅಡಿಗಳಾಗಿದೆ, ಮೊಹೆಂಜೊದಾರೊದಲ್ಲಿನ ಕಂಬಗಳಿಂದ ಕೂಡಿದ ೯೦ ಅಡಿ X ೯೦ ಅಡಿ ಅಳತೆಯ ಭವ್ಯ ಸಭಾಗೃಹ ಗಮನಾರ್ಹವಾದ ರಚನೆಗಳಾಗಿವೆ.

ಸಿಂಧೂ ನಾಗರಿಕತೆಯ ಜನರ ಅದ್ವಿತೀಯವಾದ ನಗರ ಯೋಜನೆಯು ಶ್ಲಾಘನೀಯವಾದುದು, ಅವರ ಕಟ್ಟಡ ನಿರ್ಮಾಣ ಕಲೆಯು ಉನ್ನತ ಮಟ್ಟದ್ದಾಗಿತ್ತು. ಸುಯೋಜಿತ ನಗರಗಳ ಪೌರಾಡಳಿತ ದಕ್ಷವಾಗಿತ್ತು. ಸಿಂಧೂ ನಾಗರಿಕತೆಯ ರಾಜಕೀಯ ಸಂಘಟನೆ ಅಥವಾ ಸರ್ಕಾರದ ಸ್ವರೂಪದ ಬಗ್ಗೆ ನಮಗೆ ಖಚಿತವಾದ ಮಾಹಿತಿ ದೊರೆತಿಲ್ಲ. ಸಿಂಧೂಕೊಳ್ಳದಲ್ಲಿ ವಿಶಾಲವಾದ ಸಾಮ್ರಾಜ್ಯವಿತ್ತೇ ಇಲ್ಲವೆ ನಗರ - ರಾಜ್ಯಗಳು ಏರ್ಪಟ್ಟಿದ್ದವೇ ಎಂಬ ಬಗ್ಗೆ ತಿಳಿದು ಬಂದಿಲ್ಲ.

## 37.4 ಕಲೆ ಮತ್ತು ಕರಕುಶಲಕಲೆ

ಮೇಲೆ ವಿವರಿಸಿದ ಎಲ್ಲ ತರಹದ ಹರಪ್ಪಾ ಸಂಸ್ಕೃತಿಯ ಕಟ್ಟಡಗಳು ಕಲಾತ್ಮಕವಾಗಿದ್ದು, ಇಲ್ಲಿನ ವಿನ್ಯಾಸಗಾರರು ಪ್ರತಿಮೆಗಳನ್ನು ಮಾಡುವ ನಿಟ್ಟಿನಲ್ಲಿ ಪ್ರಗತಿ ಸಾಧಿಸಿದ್ದರು. ಎಳೆಯ ಹೋರಿ, ಬಲಿಷ್ಠವಾದ ಕಾಯುವ ನಾಯಿ, ಶಾಲನ್ನು ಹೊದ್ದಯೋಗಿ, ಸೊಂಟದ ಮೇಲೆ ಕೈಯಿಟ್ಟುಕೊಂಡ ನರ್ತಕಿ ಮತ್ತು ಎಡಕಾಲನ್ನು ಎತ್ತಿ ಬಲದ ಕಾಲಿನ ಮೇಲೆ ನಿಂತಿರುವ ನರ್ತಕ ಮುಂತಾದ ಸುಂದರ ವಿಗ್ರಹಗಳು ಅಲ್ಲಿ ದೊರೆತಿವೆ. ನರ್ತನದ ವಿಗ್ರಹದ ಆಕರ್ಷಣೆಯನ್ನು ಕಂಡು ಡಾ. ತ್ರಿಪಾಠಿಯವರು ಆ ವಿಗ್ರಹದ ವಿನ್ಯಾಸದಲ್ಲಿ ಚಲನೆಯ ದಟ್ಟವಾಗಿ ಕಂಡುಬರುತ್ತದೆ. ಅದಕ್ಕೆ ಸರಿಸಾಟಿಯಾದ ಮತ್ತೊಂದು ಕೃತಿಯನ್ನು ಹೆಸರಿಸುವುದು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಅಲ್ಲಿನ ಕುಶಲಕರ್ಮಿಗಳು ಎಷ್ಟು ಕುಶಲಿಗಳಾಗಿದ್ದರೆಂದರೆ ಅವರು ಬಣ್ಣದ ಮಡಕೆಗಳನ್ನು ಮಾಡಬಲ್ಲವರಾಗಿದ್ದರು. ಪ್ರಾಚೀನ ಕಾಲಕ್ಕೆ ಸಂಬಂಧಿಸಿದಂತೆ ಸಿಂಧೂ ನಾಗರಿಕತೆಯ ಮಡಕೆಗಳು ನಮಗೆ ತಿಳಿದುಬಂದಿರುವ ಅತಿ ಪ್ರಾಚೀನ ಕಲೆಯ ನಿದರ್ಶನವಾಗಿದೆ. ಸಿಂಧೂ ನಾಗರಿಕತೆಯ ಜನರು ತಾವು ಬಳಸುತ್ತಿದ್ದ ಪಾತ್ರೆಗಳು ಹಾಗೂ ಮಡಕೆಗಳ ಮೇಲೆ ಮನುಷ್ಯರ, ಪ್ರಾಣಿಗಳು ಮತ್ತು ಇತರೆ ಪ್ರಕೃತಿ ವಸ್ತುಗಳನ್ನು ಬಣ್ಣದಲ್ಲಿ ಚಿತ್ರಿಸುತ್ತಿದ್ದರು. ಸಿಂಧೂ ನಾಗರಿಕತೆಯ ಜಾಗಗಳಲ್ಲಿ ದೊರೆತ ಅಮೂಲ್ಯ ಅವಶೇಷಗಳಲ್ಲಿ ವರ್ಣರಂಜಿತ ಹಾಗೂ ಥಳಥಳಿಸುವ ಗುಣದ ಸುಂದರ ವಿಗ್ರಹಗಳು ಮಹತ್ವದ್ದಾಗಿವೆ. ವಿಗ್ರಹಗಳನ್ನು ಕೆತ್ತುವ ಕಲೆಯು ಅಲ್ಲಿ ಉನ್ನತ ಮಟ್ಟವನ್ನು ತಲುಪಿತ್ತು. ಇದನ್ನು ಅವರು ದಂತ, ಬೆಣಚುಕಲ್ಲು, ಚರ್ಮ, ಲೋಹ ಮತ್ತು ಮರಗಳಲ್ಲಿ ಕೆತ್ತಿರುವ ಎಮ್ಮೆ, ಕಾಡೆಮ್ಮೆ, ನೀರಾನೆ, ಹುಲಿ, ಜಿಂಕೆ, ಹೋರಿ ಮುಂತಾದವು ಸಾಕ್ಷಿಯಾಗಿವೆ.

## 37.5 ನಾಗರಿಕತೆಯ ಅವನತಿ

ಸಿಂಧೂ ನಾಗರಿಕತೆಯು ಎಂದು ಮತ್ತು ಹೇಗೆ ನಾಶವಾಯಿತೆಂದು ಹೇಳಲು ನಮಗೆ ಖಚಿತ ಮಾಹಿತಿಯಿಲ್ಲ. ಆದರೆ ಕೆಲವು ವಿದ್ವಾಂಸರು ಅದಕ್ಕೆ ಅನೇಕ ಕಾರಣಗಳನ್ನು ಊಹಿಸಿ ಹೇಳುತ್ತಿದ್ದಾರೆ. ಸಿಂಧೂ ನದಿಕಣಿವೆಯ ಕೆಳಭಾಗವು ತೀವ್ರವಾಗಿ ಒಣಗಿ ಹೋದುದರಿಂದ ಜನರು ಬೇರೆ ಸ್ಥಳಗಳಿಗೆ ವಲಸೆ ಹೋಗಿರಲು ಸಾಕು. ಸಿಂಧೂ ಮತ್ತು ರಾವಿ ನದಿಯಲ್ಲಿನ ಪ್ರವಾಹವು ಜನರ ವಲಸೆಗೆ ಕಾರಣವಾಗಿರಬಹುದು. ಇದು ಸಿಂಧೂ ನದಿ ಪ್ರದೇಶದ ಫಲವತ್ತತೆಗೆ ಧಕ್ಕೆ ಉಂಟು ಮಾಡಿತ್ತು. ಹವಾಮಾನದಲ್ಲಾದ ಬದಲಾವಣೆಯೂ ನಾಗರಿಕತೆಯ ಅವನತಿಗೆ ಕಾರಣವಾಗಿರಬಹುದು. ದಕ್ಷಿಣ ಪ್ರಾಚ್ಯ, ಮಧ್ಯ ಏಷ್ಯಾ ಮುಂತಾದ ಗುಡ್ಡಗಾಡುಗಳಿಗೆ ಸೇರಿದ ಕ್ರೂರ ಅನಾಗರಿಕ ಜನರ ಆಕ್ರಮಣದಿಂದ ಸಿಂಧೂ ನಾಗರಿಕತೆ ನಾಶವಾಗಿರಬಹುದು. ಹರಪ್ಪಾ ಮತ್ತು ಮೊಹೆಂಜೊದಾರೊ ಪ್ರದೇಶಗಳಲ್ಲಿ ತಲೆದೋರಿದ ಸಾಂಕ್ರಮಿಕ ರೋಗಗಳಿಂದ ಅಂದರೆ ಕಾಲರ, ಪ್ಲೇಗ್ ಮತ್ತು ಮಲೇರಿಯಾ ಮುಂತಾದವುಗಳು ಈ ನಾಗರಿಕತೆಯ ಅವನತಿಗೆ ಕಾರಣವಾಗಿವೆ ಎಂದು ಕೆಲ ವಿದ್ವಾಂಸರು ವಾದಿಸುತ್ತಾರೆ. ರಾಜಕೀಯ ನಾಯಕತ್ವದ ಕೊರತೆ ಮತ್ತು ಸಿಂಧೂಕೊಳ್ಳದಲ್ಲಿ ಉಂಟಾದ ಆರ್ಥಿಕ ಕ್ಷೋಭೆ, ಆಂತರಿಕಗೊಂದಲ ಮತ್ತು ವಿದೇಶಿ ಶಕ್ತಿಗಳು ಈ ನಾಗರಿಕತೆಯ ಅವನತಿಗೆ ಕಾರಣವಾಗಿರಬೇಕು. ಹೋರಾಟಕ್ಕೆ ಪ್ರಸಿದ್ಧರಾಗಿದ್ದ ಆರ್ಯರು ಆಗಮಿಸಿ ಈ ಪ್ರದೇಶವನ್ನು ವಶಪಡಿಸಿಕೊಂಡಿರಬೇಕು. ಭೂಕಂಪಗಳು ಮತ್ತು ಅತಿವೃಷ್ಟಿಯು ಇತ್ಯಾದಿ ಅಂಶಗಳು ಸಿಂಧೂ ನಾಗರಿಕತೆಯ ಅವಸಾನಕ್ಕೆ ಕಾರಣವಾಗರಬಹುದು. ಸಿಂಧೂ ನಾಗರಿಕತೆಗೆ ಸಂಬಂಧಿಸಿದಂತೆ ನಮಗೆ ದೊರಕಿರುವ ಅವಶೇಷಗಳಲ್ಲಿ ಕೋಟೆ ಅಥವಾ ಬೇರೆ ಬಗೆಯ ರಕ್ಷಣಾತ್ಮಕ ಕಟ್ಟಡಗಳ ಬಗ್ಗೆ ಯಾವುದೇ ಪುರಾವೆ ದೊರೆಯುವುದಿಲ್ಲ. ಋಗ್ವೇದದಲ್ಲಿ ನಗರಗಳ ನಾಶದ ಬಗ್ಗೆ ವಿವರಗಳು ದೊರೆಯುತ್ತವೆ. ಕ್ರಿ.ಪೂ. ೨೦೦೦ ರಲ್ಲಿ "ಹರಿಯುಪಿಯಾ" ಇಂದಿನ ಹರಪ್ಪವೆಂದು ವಿಶ್ಲೇಷಣೆಯಾಗಿ, ಅಲ್ಲಿ ಕದನ ನಡೆದ ಬಗ್ಗೆ ತಿಳಿದು ಬರುತ್ತದೆ. ಆದರೆ ನಗರಗಳ ಹೆಸರುಗಳು ಅಲ್ಲಿ ಉಲ್ಲೇಖಿತಗೊಂಡಿಲ್ಲ. ಈ ವಿನಾಶವು ಹರಪ್ಪ ಮತ್ತು ಮೊಹೆಂಜೊದಾರೋ ನಗರಗಳ ನಾಶಕ್ಕೆ ಸಂಬಂಧಿಸಿರಬಹುದು. ಹರಪ್ಪಾ ಸಂಸ್ಕೃತಿ ಪ್ರದೇಶದ ರಕ್ಷಣಾ ವ್ಯವಸ್ಥೆ ಬಗೆಗೆ ಅಥವಾ ರಕ್ಷಣಾತ್ಮಕ ಕೋಟೆಗಳ ಬಗೆಗೆ ನಮಗಿನ್ನು ನಿಖರ ಮಾಹಿತಿ ದೊರೆತಿಲ್ಲ.

## 37.6 ಉಪಸಂಹಾರ

ಬೃಹತ್ ಮತ್ತು ಯೋಜನಾಬದ್ಧವಾಗಿ ಕಟ್ಟಿಡ ಹರಪ್ಪ ಮೊಹೆಂಜೊದಾರೊ ನಗರ ಯೋಜನೆ ವಸತಿ ಸೌಕರ್ಯ ಆರ್ಥಿಕ ವ್ಯವಸ್ಥೆ ಜನರ ಜೀವನಮಟ್ಟ, ರಚನಾ ಕೌಶಲ್ಯ ಮತ್ತು ದಕ್ಷ ಪೌರಾಡಳಿತಕ್ಕೆ ಸಾಕ್ಷಿಯಾಗಿದೆ. ಮರಗಳಿಂದ ಮಾಡಿದ ವ್ಯವಸಾಯ ಉಪಕರಣಗಳಿಂದ ಅವರು ಕೃಷಿ ಮತ್ತು ಪಶುಸಂಗೋಪನೆಯನ್ನು ಉತ್ತಮಪಡಿಸಿಕೊಂಡರು. ಕೈಗಾರಿಕೆ ಕ್ಷೇತ್ರದಲ್ಲಿ ಅವರ ಸಾಧನೆ ಅಪಾರ. ನೂಲುವ ಮತ್ತು ನೇಯುವ ಕಲೆ ಅವರಿಗೆ ತಿಳಿದಿತ್ತು. ನೇಕಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ಬಣ್ಣಗಾರಿಕೆ, ಬಡಗಿತನ, ಕರಕುಶಲತೆ ಮುಂತಾದ ಕರ-ಕುಶಲತೆ ಉದ್ಯೋಗಗಳು ಅವರ ಆರ್ಥಿಕ ಚಟುವಟಿಕೆಗಳಿಗೆ ನಿದರ್ಶನಗಳಾಗಿವೆ. ಆಂತರಿಕ ಮತ್ತು ವಿದೇಶಿ ವ್ಯಾಪಾರವನ್ನು ವೃದ್ಧಿಗೊಳಿಸಿದರು. ಮೆಸಮೊಟಾಮಿಯಾ, ಬಲೂಚಿಸ್ತಾನ, ಪರ್ಷಿಯಾ, ಕರ್ನಾಟಕ ಮತ್ತು ರಾಜಸ್ತಾನಗಳೊಂದಿಗೆ ಕಚ್ಚಾ ವಸ್ತುಗಳನ್ನು ಬೆಲೆಬಾಳುವ ಲೋಹಗಳನ್ನು ಆಮದು ಮಾಡಿಕೊಂಡಿದ್ದು, ವಿದೇಶಿ ವ್ಯಾಪಾರಕ್ಕೆ ಉತ್ತೇಜನ ದೊರಕಿತ್ತು. ಅವರ ನಿಕರವಾದ ತೂಕ ಮತ್ತು ಅಳತೆಯ ಜ್ಞಾನ ಅವರ ವ್ಯಾಪಾರ ವಾಣಿಜ್ಯದ ಪ್ರಗತಿಯನ್ನು ತೋರಿಸುತ್ತದೆ. ದಶಮಾನ ಪದ್ಧತಿಯ ಪರಿಜ್ಞಾನವು ಅವರಿಗೆ ಗೊತ್ತಿತ್ತು.

ಸಿಂಧೂ ನಗರ ಯೋಜನೆ, ರಸ್ತೆಗಳ ವಿನ್ಯಾಸ, ವಸತಿ ಗೃಹಗಳ ಸೌಲಭ್ಯಗಳು, ಅದ್ಭುತ ಒಳಚರಂಡಿ ಮತ್ತು ಬೃಹತ್ ಸಾರ್ವಜನಿಕ ಗೃಹಗಳು, ಮಹಾಉಗ್ರಾಣ ಮತ್ತು ಕೆಲಸಗಾರರ ವಸತಿ ನಿಲಯಗಳು ಅವರ ರಚನಾ ಕೌಶಲ್ಯ ನಾಗರಿಕ ಪ್ರಜ್ಞೆಗೆ ಮತ್ತು ಸಮರ್ಪಕ ಪೌರಾಡಳಿತಕ್ಕೆ ಸಾಕ್ಷಿಗಳಾಗಿವೆ. ಅವರ ಮುದ್ರೆಗಳು, ಪ್ರತಿಮೆಗಳು, ಆಭರಣಗಳು, ಸಾಕುಪ್ರಾಣಿಗಳು ಇತರ ಅವಶೇಷಗಳು ಅವರ ಉದ್ಯೋಗ, ಕಲಾ ಕೌಶಲ್ಯ, ಮತ್ತು ಚಿತ್ರಕಲೆಯ ಬೆಳವಣಿಗೆ ಮತ್ತು ಕೆತ್ತನೆಯ ಉತ್ಕೃಷ್ಟತೆಯನ್ನು ತಿಳಿಸುವ ಪುರಾವೆಗಳಾಗಿವೆ.

ಪ್ರಕೃತಿಯ ವಿಕೋಪ (ಪ್ರವಾಹ-ಭೂಕಂಪ), ಆರ್ಯರ ದಾಳಿ, ಸಾಂಕ್ರಮಿಕ ರೋಗಗಳ ಹರಡುವಿಕೆ, ಅಸ್ಥಿರವಾದ ರಾಜಕೀಯ ನಾಯಕತ್ವ, ಆರ್ಥಿಕ ಕ್ಷೋಭೆ, ರಕ್ಷಣಾತ್ಮಕ ಕೋಟೆಗಳ ಕೊರತೆ ಮುಂತಾದ ಅಂಶಗಳು ಹರಪ್ಪಾ ಸಂಸ್ಕೃತಿಯ ಅವನತಿಗೆ ಕಾರಣಗಳೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

## 37.7 ಮಾದರಿ ಪ್ರಶ್ನೆಗಳು

1. ಹರಪ್ಪಾ ಸಂಸ್ಕೃತಿಯಲ್ಲಿನ ನಗರ ಯೋಜನೆಯನ್ನು ವಿವರಿಸಿರಿ.
2. ಹರಪ್ಪಾ ಸಂಸ್ಕೃತಿಯ ಕಾಲದ ಆರ್ಥಿಕ ವ್ಯವಸ್ಥೆಯನ್ನು ಮತ್ತು ಈ ಸಂಸ್ಕೃತಿಯ ಅವನತಿಗೆ ಕಾರಣಗಳನ್ನು ಚರ್ಚಿಸಿರಿ.

## 37.8 ಅಭ್ಯಾಸಕ್ಕಾಗಿ ಪುಸ್ತಕಗಳು


1. Altekar .A.S. : **Ancient India**
2. Tripati .R.S. : **Ancient India**
3. Sathianathier .R. : **History of India, Vol I**
4. Mittal .A.K. : **Political and Cultural History of India**

# ಟಿಪ್ಪಣಿಗಳು

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*-National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✢ **M.Ed Study Centres : 06**


Multimedia learning material
STUDENT
INSTRUCTIONAL SYSTEM